ರಾಜರ್ಷಿ

ಡಿ. ಕೃಷ್ಣ ಐಯ್ಯಂಗಾರ್, ಎಂ.ಎ.

ಪ್ರಕಾಶಕರು:
ಜಿ. ಎಸ್. ವಿಶ್ವ ಅಂಡ್ ಕಂಪನಿ
ಎಜುಕೇಷನಲ್ ಪಬ್ಲಿಷರ್ಸ್
ಬೆಂಗಳೂರು ಸಿಟಿ

ಬೆಲೆ: ೧—೦—೦

ರಾಜರ್ಷಿ

ಟಿ. ಕೃಷ್ಣಐಯ್ಯಂಗಾರ್, ಎಂ.ಎ.

ಪ್ರಕಾಶಕರು:
ಜಿ. ಎಸ್. ವಿಶ್ವ ಅಂಡ್ ಕಂಪನಿ
ಎಜುಕೇಷನಲ್ ಪಬ್ಲಿಷರ್ಸ್
ಬೆಂಗಳೂರು ಸಿಟಿ

[ಬೆಲೆ: ೧-೦-೦

ಗ್ರಂಥಕರ್ತರ ಇತರ ಪುಸ್ತಕಗಳು:

ರೈತನ ಪ್ರಪಂಚ

ರೈತನ ಏಳಿಗೆ

ರೈತನ ಬಾಳು

ರೈತನ ಸಮಾಜ (ಅಚ್ಚಿನಲ್ಲಿ)

ಮೊದಲ ಮುದ್ರಣ ೧೯೪೮

ಮುದ್ರಕರು:
ಎಂ. ಎಸ್. ಚಿಂತಾಮಣಿ
ದಿ ಈಸ್ಟರ್ನ್ ಪ್ರೆಸ್,
ಚಾಮರಾಜಪೇಟೆ, ಬೆಂಗಳೂರು

ಪೀಠಿಕೆ

‘ರಾಜರ್ಷಿ’ಯ ಕಥಾವಸ್ತು ಸಾಮಾನ್ಯವಾಗಿ ಬಹು ಜನರಿಗೆ ಪರಿಚಯವಿರುವ ವಿಷಯ. ಹಿಂದಿನ ಕಥಾವಸ್ತುವನ್ನು ಆರಿಸಿ, ಹೊಸ ಸನ್ನಿವೇಶಕ್ಕೆ ಹೊಂದಿಸಿ, ದೇಶಪ್ರೇಮ ಹೆಚ್ಚಿಸುವ ಒಂದು ಲಘು ಕಾದಂಬರಿಯು. ಕಥಾನಾಯಕನು, ಕೆಲವು ರಮಣೀಯ ಸ್ಥಳಗಳಲ್ಲಿ ಪ್ರವಾಸಮಾಡಿ, ಅವುಗಳ ಮಹಿಮೆಯನ್ನು ವರ್ಣಿಸುವಂತೆ ಮಾಡುವುದು ಒಂದು ನೂತನ ವಿಧಾನ. ಅದನ್ನೇ ಇಲ್ಲಿ ಅನುಸರಿಸಲಾಗಿದೆ.

ದೇಶಪ್ರೇಮ ಮಾನವರಲ್ಲಿರಬೇಕಾದ ಹಿರಿಯ ಗುಣ. ಇದನ್ನು ವೃದ್ಧಿಪಡಿಸುವುದಕ್ಕಾಗಿ ಕವಿಗಳು ಹಾಡಿದ್ದಾರೆ. ಶಿಲ್ಪಾಚಾರ್ಯರು ತಮ್ಮ ಶಿಲ್ಪಿಕಲೆಯನ್ನು ವ್ಯಕ್ತಪಡಿಸಿದ್ದಾರೆ. ಸಾಹಿತಿಗಳು ವರ್ಣಿಸಿದ್ದಾರೆ. ಇಲ್ಲಿನ ಮನೋಹರ ಪ್ರಕೃತಿ ಸನ್ನಿವೇಶ, ಶಿಲ್ಪಕಲೆ, ರಮಣೀಯ ದೃಶ್ಯ--ಎಲ್ಲವೂ ಜಗತ್ತಿನ ಪ್ರಸಿದ್ಧ ಪ್ರವಾಸಿಗರನ್ನು ಆಕರ್ಷಿಸುತ್ತಿವೆ. ಕಲಾ ಪ್ರೇಮಿಗಳಿಗೆ ಹರ್ಷವನ್ನುಂಟುಮಾಡುತ್ತಿವೆ. ಎಲ್ಲರಿಗೂ ಆನಂದ ಕೊಡುತ್ತಿವೆ.

ಇಂತಹ ಮನಮೋಹಕ ದೃಶ್ಯಗಳಲ್ಲಿ ಕೆಲವನ್ನು ಆರಿಸಿ, ಅವುಗಳ ಪರಿಚಯ ಮಾಡಿಸಿಕೊಡಲು ಈ ಗ್ರಂಥದಲ್ಲಿ ಪ್ರಯತ್ನಿಸಲಾಗಿದೆ. ಇಂದಿನ ಶ್ರೀರಂಗಪಟ್ಟಣ, ಚುಂಚನಕಟ್ಟೆ, ರಾಮನಾಥಪುರ, ಶೃಂಗೇರಿ, ನಂದಿಬೆಟ್ಟ, ಮೇಲುಕೋಟೆ, ಬಿಳಿಗಿರಿರಂಗನಬೆಟ್ಟ—ಮುಂತಾದುವು ಎಂತಹ ರಮಣೀಯ ಪ್ರದೇಶಗಳು ಎಂಬುದನ್ನು ವಾಚಕರಿಗೆ ನೆನಪು ಮಾಡಿಕೊಡಬೇಕಾಗಿಲ್ಲ.

ಚಿಕ್ಕವರಲ್ಲಿ ದೇಶಪ್ರೇಮ ಹೆಚ್ಚಿಸುವುದಕ್ಕೆ ಈ ಕಥೆ ಸಹಾಯಕವಾಗಬಹುದೆಂಬುದು ಗ್ರಂಥಕರ್ತನ ನಂಬಿಕೆ. ಈ ಕಥೆಯನ್ನು ಓದಿದ ಕೆಲವರಲ್ಲಾದರೂ, ಆ ಹಿರಿಯ ಗುಣ ಹೆಚ್ಚಿದರೆ, ಕೈಗೊಂಡ ಪ್ರಯತ್ನ ಸಾರ್ಥಕವಾಯಿತೆಂದು ನಾನು ಭಾವಿಸುವೆನು.

"ಕನ್ನಡನಾಡಿನ ಸುಪ್ರಸಿದ್ಧ ಸಾಹಿತಿಗಳೂ, ಉತ್ತಮೋತ್ತಮ ಪತ್ರಿಕಾ ಕರ್ತರೂ, ಶಿಲ್ಪಕಲಾಶಾಸ್ತ್ರ ನಿಪುಣರೂ, ಶ್ರೇಷ್ಠವಾಗ್ಮಿಗಳೂ, ಅನುಪಮ ದೇಶಭಕ್ತರೂ, ಆಗಿರುವ ಶ್ರೀಮಾನ್ ತಿರುಮಲೆ ತಾತಾಚಾರ್ಯ ಶರ್ಮ ಅವರು,

ಈ ಸಣ್ಣ ಪುಸ್ತಕಕ್ಕೆ ಮುನ್ನುಡಿ ಬರೆದುಕೊಟ್ಟು, ಉಪಕಾರ ಮಾಡಿದ್ದಾರೆ. ಇದರಿಂದ ಈ ಪುಸ್ತಕವು ಮಹಾಜನರ ಮನ್ನಣೆಗೆ ಯೋಗ್ಯವಾದಂತಾಗಿದೆ. ಇದಕ್ಕಾಗಿ ಶ್ರೀಯುತರಿಗೆ ನನ್ನ ಅನಂತ ವಂದನೆಗಳನ್ನು ಅರ್ಪಿಸುತ್ತೇನೆ. ಶ್ರೀಮಾನ್ ಎಸ್. ವಿ. ಶ್ರೀನಿವಾಸ ರಾಘವಾಚಾರ್, ಎಂ. ಎ. ಅವರು ಈ ಪುಸ್ತಕದ ಹಸ್ತ ಪ್ರತಿಯನ್ನು ನೋಡಿ ಬಹುಮಟ್ಟಿಗೆ ಸರಿಪಡಿಸಿರುವುದಕ್ಕಾಗಿ ಅವರಿಗೆ ನನ್ನ ಅಭಿನಂದನೆ ಅರ್ಪಿಸುತ್ತೇನೆ.

ಈ ಪುಸ್ತಕವನ್ನು ಶೀಘ್ರವಾಗಿ ಅಚ್ಚು ಹಾಕಿಸಿಕೊಟ್ಟ ಈಸ್ಟರ್ನ್ ಪ್ರೆಸ್ ಮಾಲೀಕರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ.

೧೨—೩—೪೯ ❀ ಗ್ರಂಥಕರ್ತ

ಮುನ್ನುಡಿ

ಪವಿತ್ರ ನಾಮಸ್ಮರಣೆ; ಗೌತಮನ ಶಿಷ್ಯವೃತ್ತಿ, ಗಾರ್ಹಸ್ಥ್ಯ, ರಾಜರ್ಷಿ ಪಟ್ಟ! ಭಾರತ ಸಂಸ್ಕೃತಿಯ ಸಾರಸರ್ವಸ್ವ ಸಂಕೇತವೆನಿಸಿದ ತಪೋವನ ಆಶ್ರಮ; ಅಗಸ್ತ್ಯಾಶ್ರಮ! ಪ್ರಕೃತಿ ಭಾಗ್ಯದಧಿದೇವತೆಯ ಮಡಿಲಲ್ಲಿ ಸುಖ ಶಾಂತಿ ಸಾಧನೆಯ ಅನುಭವ. ಇಂತಹ ಚಿತ್ರವನ್ನು, ಸಾಹಿತ್ಯರೂಪದಲ್ಲಿ, ಲಲಿತವಾದ ಕನ್ನಡದಲ್ಲಿ, ನನ್ನ ಮಿತ್ರರಾದ ಶ್ರೀ ಡಿ. ಕೃಷ್ಣಯ್ಯಂಗಾರ್ಯರು ವಾಚಕರಿಗೆ ಒದಗಿಸಿದ್ದಾರೆ.

ಒಂದು ದೇಶ, ಒಂದು ಜನ, ಒಂದು ಜನಪದಜೀವನ, ಆ ಜೀವನದ ಪರಮಾರ್ಥ, ಆ ಪರಮಾರ್ಥ ಸಾಧನೋಪಾಯ ಇವುಗಳನ್ನೆಲ್ಲ ತಿಳಿದುಕೊಳ್ಳಬೇಕಾದುದು ಅಗತ್ಯ. ಆದರೆ ತಿಳಿಸುವುದು ಕಷ್ಟ; ತಿಳಿಸಬಲ್ಲವರು ವಿರಳ. ಶ್ರೀ ಕೃಷ್ಣಯ್ಯಂಗಾರ್ಯರು ಹೊಸದಾದೊಂದು ವಿಧಾನವನ್ನು ನಿರ್ಮಿಸಿಕೊಂಡು, ಆ ಕಲಾತ್ಮಕವಾದ ಚೌಕಟ್ಟಿನಲ್ಲಿ, ತಮ್ಮ ಘನವಾದ ಉದ್ದೇಶವನ್ನು ಸಾಧಿಸಲು ಪ್ರಯತ್ನಮಾಡಿದ್ದಾರೆ.

ಕನ್ನಡ ನಾಡಿನಲ್ಲಿ, ಕನ್ನಡ ಜನ, ಹಿಂದೊಂದು ಕಾಲದಲ್ಲಿ ಆದರ್ಶಯುತವಾದ ಬದುಕನ್ನು ಹೇಗೆ ನಡೆಸಿದರೆಂಬುದನ್ನು ಗೌತಮನ ಮಹಾಜೀವನದ ಒಂದು ಪ್ರಕರಣವನ್ನಾಧಾರಮಾಡಿಕೊಂಡು ಲೇಖಕರು ವರ್ಣಿಸಿದ್ದಾರೆ. ಗೌತಮ ಗುರುಕುಲಜೀವನ ನಡೆಸಿ, ಗೆಳೆಯ ಉದಂಕನೊಂದಿಗೆ ತೀರ್ಥಯಾತ್ರಾ ಪ್ರವಾಸ ಕೈಕೊಳ್ಳುತ್ತಾನೆ. ಈ ಅವಕಾಶವನ್ನು ಲೇಖಕರು ಉಪಯೋಗ ಮಾಡಿಕೊಂಡು ಗೌತಮನನ್ನು ಕನ್ನಡ ನಾಡಿನ ಪ್ರಕೃತಿ ಸೌಭಾಗ್ಯ ಕೇಂದ್ರವೆನಿಸಿದ ಮೈಸೂರಿನ ಹಲವು ಕ್ಷೇತ್ರಗಳಿಗೆಲ್ಲ ಕೊಂಡೊಯ್ದಿದ್ದಾರೆ. ಜೀವನದಿ ಕಾವೇರಿಯ ತೀರದ ಉಪವನಗಳೇನು, ಋಷ್ಯಾಶ್ರಮಗಳೇನು, ತೀರ್ಥಗಳೇನು, ವ್ಯವಸಾಯ ಕ್ಷೇತ್ರಗಳೇನು, ದೇವಾಗಾರಗಳೇನು ಇವೆಲ್ಲವುಗಳ ದರ್ಶನವನ್ನೂ ಗೌತಮ ಉದಂಕರಿಗೆ ಮಾಡಿಸಿದ್ದಾರೆ. ಚೆಲುವ ಕನ್ನಡ ನಾಡಿನ 'ಆದಿರಂಗ, ಮಧ್ಯರಂಗ, ಅಂತ್ಯರಂಗ' ಗಳಲ್ಲೆಲ್ಲ ಸುತ್ತಾಡಿಸಿದ್ದಾರೆ. ಕಾವೇರಿಯಲ್ಲಿ ಮೀಯಿಸಿ; ಗಂಗಾಸ್ನಾನ ತುಂಗಾ,

ಪಾನ ಮಾಡಿಸಿದ್ದಾರೆ! ವಿಭಾಂಡಕಾಶ್ರಮದಲ್ಲಿ ಶಾಂತಾ ಋಶ್ಯಶೃಂಗರ ವಿವಾಹದ ಸ್ಮರಣೆ ಮಾಡಿಸಿದ್ದಾರೆ.

ಯಾತ್ರಿಕರಿಬ್ಬರನ್ನು ಲೇಖಕರು ಮಲೆನಾಡಿಗೊಯ್ದರು. ಕಶ್ಯಪನ ಸಿದ್ಧಾಶ್ರಮ ತೋರಿಸಿದರು; ವಾಮನ ಮುನಿಯ ಪುಣ್ಯಾಶ್ರಮ ಪ್ರವೇಶ ಮಾಡಿಸಿದರು. ತುಂಗೋತ್ಪತ್ತಿ, ಸೀತಾಕುಂಡ ತೀರ್ಥ ಸ್ನಾನದಿಂದ ಪವಿತ್ರನಾದ ಪರಶುರಾಮ, ಮಹಿಷಾಸುರ ಸಂಹಾರ, ಮಾಯಾಮೃಗ ಸಂಹಾರ ಕಥೆಗಳನ್ನೆಲ್ಲ ಹೇಳಿದರು

ಗೌತಮ ಉದಂಕರನ್ನು ಬಯಲು ಸೀಮೆಗೆ ತಂದು ಅನೇಕ ಗಿರಿ ಕಂದರಗಳಲ್ಲಿ, ಪೈರು ಪಚ್ಚೆಗಳಲ್ಲಿ, ಕಾಡುಮೇಡುಗಳಲ್ಲಿ ನಡೆಸಿದರು. ಸಪ್ತರ್ಷಿಸ್ಥಾಪಿತ ರಂಗಸ್ಥಳ, ಚನ್ನಗಿರಿ, ಬ್ರಹ್ಮಗಿರಿ, ದಿವ್ಯಗಿರಿ, ನಂದಿಗಿರಿಗಳ ದರ್ಶನ ಮಾಡಿಸಿದರು. ಇವರನ್ನು ನಂದಿಯ ಭೋಗ ನಂದೀಶ್ವರ ದೇವಾಲಯಕ್ಕೂ ಕರೆತಂದರು.

ಶ್ವೇತಾದ್ರಿಯನ್ನು ಬಿಟ್ಟರೆ? ಅಲ್ಲಿಯ ಆಕಾಶಗಂಗೆಯನ್ನು ಬಿಟ್ಟರೆ? ಕಪಿಲೇಶ್ವರ, ಕಪಿಲ ತೀರ್ಥಗಳನ್ನು ಬಿಟ್ಟರೆ? ಇಲ್ಲ, ಎಲ್ಲ ಕಡೆಗಳಿಗೂ ಕರೆದುಕೊಂಡು ಹೋದರು. ಬಿಳಿಗಿರಿ ರಂಗಸ್ವಾಮಿ ಎದುರಿಗೆ ನಿಲ್ಲಿಸಿ ನಮಸ್ಕಾರ ಹಾಕಿಸಿದರು. ಭಾರ್ಗವೀ ನದಿ, ಪರಶುರಾಮನ ತಪಸ್ಸು, ಭಸ್ಮಾಸುರನ ಪ್ರಕರಣ, ಇವುಗಳ ಪುರಾಣ ಶ್ರವಣ ಮಾಡಿಸಿ ಲೇಖಕರು ಯಾತ್ರಿಕರನ್ನು ನಾರಾಯಣಗಿರಿಗೆ ಕರೆತಂದರು; ಅಲ್ಲಿ ಪೂರ್ವಕಥೆಯನ್ನು ಕೊಂಚ ಹೇಳಿದರು; ಅಲ್ಲಿನ ನಾನಾ ತೀರ್ಥಕ್ಷೇತ್ರಗಳ ಪರಿಚಯ ಮಾಡಿಸಿದರು. ಪರಿಧಾನ ಶಿಲೆ ತೋರಿಸಿದರು. ಗೋವರ್ಧನಗಿರಿ ಗುಹೆಯ ಸಾಧು ಸಂದರ್ಶನವನ್ನು ಮಾಡಿಸಿದರು.

ಈ ರೀತಿಯಾಗಿ ಲೇಖಕರು ಗೌತಮ ಉದಂಕರೊಂದಿಗೆ ವಾಚಕರಿಗೆಲ್ಲ ಪ್ರಕೃತಿ ಸೌಂದರ್ಯದ ನೆಲವೀಡಾದ ಕನ್ನಡನಾಡಿನ ಸುಂದರ ಪುಣ್ಯಕ್ಷೇತ್ರಗಳಲ್ಲಿ ಹಲವುಗಳ ದರ್ಶನ ಮಾಡಿಸುವರು.

ಇದೇ ಲೇಖಕರ ಚಾತುರ್ಯ; ಈ ರಚನಾ ವಿಧಾನವೇ ಮೊದಲುಗೈ, ಮೇಲುಗೈ. ಕಥೆಯ ವಸ್ತು ಎರಡನೆಯ ಕೈ. ಪ್ರಾಚೀನ ಪವಿತ್ರ ಗೌತಮ-ಅಹಲ್ಯಾ ಪ್ರಸಂಗ. ಆ ಪ್ರಸಂಗದ ಅನೀತಿ, ಅಶ್ಲೀಲ ವಾತಾವರಣವನ್ನು

ದೂರವಾಡಿ ಕಥೆಗೊಂದು ಹೊಸ ಕವಚ ಕೊಟ್ಟಿದ್ದಾರೆ. ಹೊಸ ಕಥೆಯನ್ನು ತಮ್ಮ ಶಿಲ್ಪದ ಚೌಕಟ್ಟಿನಲ್ಲಿ ಕುಸುರಿಸಿದ್ದಾರೆ. ವಿರಕ್ತ ಗೌತಮನಿಗೂ, ಸಾಂಸಾರಿಕ ಚಾಪಲ್ಯದ ಅಹಲ್ಯೆಗೂ ಸುಖದ ಕಲ್ಪನೆಯಲ್ಲಿ ದೃಷ್ಟಿದೋಷವಿದ್ದ ಕಾರಣ ಅವರ ಜೀವನ ವಿರಸವಾಯಿತೆಂದು ಲೇಖಕರು ಚೆನ್ನಾಗಿ ತೋರಿಸಿದ್ದಾರೆ. ಅಹಲ್ಯೆಯ ಹೃದಯ ಪರಿವರ್ತನವೂ ಆಕೆಯ ಸ್ವಭಾವಕ್ಕೆ ಅನುಗುಣವಾಗಿಯೇ ಇದೆ.

ನಾನು ಇಷ್ಟು ಬರೆಯಲು ಉದ್ದೇಶ ಪಟ್ಟಿರಲಿಲ್ಲ. ಪುಸ್ತಕವನ್ನೋದಿದ ಮೇಲೆ ಅದರ ಸವಿಯನ್ನರಿತ ಮೇಲೆ ಎರಡು ಮಾತನ್ನು ಹೇಳಲೇಬೇಕಾಯಿತು. ಪ್ರತಿಯೊಬ್ಬರೂ ಈ ಪುಟ್ಟಪುಸ್ತಕವನ್ನೋದಬೇಕು. ನಮ್ಮ ದೇಶ, ನಮ್ಮ ಧರ್ಮ, 'ವಂದೇ ಮಾತರಂ' ಅನ್ನುವವರೆಲ್ಲ ಇದನ್ನು ಓದಬೇಕು. ಹೆಂಗಸರು ಮಕ್ಕಳಿಗಂತೂ ಇದು ಅಮೃತ. ಶ್ರೀಮಾನ್ ಕೃಷ್ಣಯ್ಯಂಗಾರ್ಯರ ಕನ್ನಡ ನಾಡು, ಕನ್ನಡ ನುಡಿಯ ಸೇವೆ ಕಾಲು ಶತಮಾನದಿಂದ ಮುಂದೆ ಸಾಗುತ್ತಿರುವುದನ್ನು ನಾನು ನೋಡುತ್ತಿದ್ದೇನೆ. ನನ್ನ ಸಂತೋಷವನ್ನು ಸೂಚಿಸಲು ಅವರು ನನಗೊಂದವಕಾಶಕೊಟ್ಟರು. ಅದಕ್ಕಾಗಿ ಅವರಿಗೆ ಧನ್ಯವಾದಗಳು.

೧೯-೩-೪೭ ತಿ. ತಾ. ಶರ್ಮ

ವಿಷಯ ಸೂಚಿಕೆ

ಗುರುಕುಲ

ಪುಣ್ಯತಮ ಕಾವೇರೀ ತೀರದಲ್ಲಿ ಚಂದ್ರಾರಣ್ಯವೆಂಬ ದೊಡ್ಡ ಉದ್ಯಾನ. ಅಲ್ಲಲ್ಲಿ ಪಗಡೆ, ಹಲಸು, ತಾಳೆ, ಬೇವು, ಬಿಲ್ವ. ಬಗೆಬಗೆಯ ವೃಕ್ಷಗಳಿವೆ. ಪುಷ್ಪಿತಗಳಾದ ಲತೆಗಳು ಇವನ್ನು ಸುತ್ತಿಕೊಂಡಿವೆ. ಕಪಿಗಳು ವಿವಿಧ ಪಕ್ಷಿಗಳು ಅಲ್ಲಲ್ಲಿ ಗುಂಪಾಗಿ ಕಲಕಲಧ್ವನಿ ಮಾಡುತ್ತಿವೆ. ನಾನಾ ಮೃಗ ಪಕ್ಷಿಗಳು ತಮ್ಮ ವೈರವನ್ನು ಮರೆತು, ಅನ್ಯೋನ್ಯ ಪ್ರೀತಿಯಿಂದ ಕಲೆತಿವೆ. ಹುಲಿ–ಜಿಂಕೆ, ಹಾವು–ನವಿಲು, ಮುಂಗುಸಿ–ಸರ್ಪ ಇವುಗಳೆಲ್ಲಾ ಮರದ ನೆರಳಿನಲ್ಲಿ ಆಟವಾಡುತ್ತಿವೆ. ಕ್ರೂರ ಮೃಗಗಳು ತಮ್ಮ ಕ್ರೌರ್ಯ ಸ್ವಭಾವ ಬಿಟ್ಟು ಶಾಂತವಾಗಿದ್ದ ನೋಟ ಬಹು ಅಂದವಾಗಿದೆ.

ಈ ಉದ್ಯಾನವೇ ಪರಮಾತ್ಮ ಧ್ಯಾನಪರರಾದ ಅಗಸ್ತ್ಯ ಮಹಾಮುನಿಯ ಆಶ್ರಮ. ಇವರ ದರ್ಶನ ಮಾತ್ರದಿಂದ, ಪ್ರವಾಸಿಗಳ ಆಯಾಸ ಪರಿಹಾರವಾಗುತ್ತಿತ್ತು. ಅಲ್ಲಲ್ಲಿ ಹೋಮಾಗ್ನಿಯ ಹೊಗೆ ಹೊರಡುತ್ತಿತ್ತು. ನಾರುಮಡಿಗಳನ್ನು ಅಲ್ಲಲ್ಲಿ ಗಿಡಗಳ ಮೇಲೆ ಆರು ಹಾಕಲಾಗಿತ್ತು. ನೂರಾರು ವಟುಗಳು ವೇದಾಧ್ಯಯನ ಮಾಡುತ್ತಿದ್ದ ನಾದ ಕೇಳಿ ಬರುತ್ತಿತ್ತು. ಬಹು ಮಂದಿ ಋಷಿಗಳು ಶಾಸ್ತ್ರಾಭ್ಯಾಸ ಮಾಡುತ್ತಿದ್ದರು. ಕೆಲವರು ಶಿಕ್ಷಾವ್ಯಾಕರಣ ನಿಪುಣರು. ಇನ್ನು ಕೆಲವರು ವೈದ್ಯ, ಜೋತಿಶ್ಶಾಸ್ತ್ರ ಪ್ರವೀಣರು. ಮತ್ತೆ ಕೆಲವರು, ವೇದ ವೇದಾಂತ, ಸಾಂಖ್ಯ ನ್ಯಾಯಶಾಸ್ತ್ರ ಪಾರಂಗತರು. ಗೃಹಸ್ಥರು, ವಾನಪ್ರಸ್ಥರು, ವಟುಗಳು, ಸಂನ್ಯಾಸಿಗಳು, ರಾಜಕುಮಾರ ಕುಮಾರಿಯರು, ಎಲ್ಲರೂ ಅತ್ಯಂತ ಉತ್ಸಾಹದಿಂದ ಜ್ಞಾನಾರ್ಜನೆಯಲ್ಲಿ ತೊಡಗಿದ್ದರು.

ಅಗಸ್ತ್ಯರು ಪುಣ್ಯಾತ್ಮರಾದ ಮಹರ್ಷಿಗಳು. ಇವರ ಪ್ರಭಾವದಿಂದ ದಕ್ಷಿಣದಿಕ್ಕಿಗೆ ಅಗಸ್ತ್ಯ ದಿಕ್ಕೆಂದು ಹೆಸರು ಬಂದಿದೆ. ವಿಂಧ್ಯಪರ್ವತವೂ ಕೂಡ, ಈ ಮಹಾಮುನಿಯ ಆಜ್ಞೆಗೆ ತಲೆಬಾಗಿ, ಬೆಳೆಯಲಾರದೆ ಹೋಯಿತು. ಅಗಸ್ತ್ಯರು ಲೋಕ ವಿಖ್ಯಾತ ಮಹಾಮಹಿಮರು. ಶಾಂತರಾದ ಮುನಿಜನಗಳಿಂದ ಸೇವಿತರಾಗಿ, ಸತ್ಪುರುಷರಿಗೆ ಹಿತಕರವಾಗಿ, ಜ್ಞಾನದಾನ

ಮಾಡುತ್ತಿದ್ದರು. ಅವರ ಪುಣ್ಯಾಶ್ರಮದಲ್ಲಿ ಸುಳ್ಳಾಡುವವರಾಗಲಿ, ಕ್ರೂರರಾಗಲಿ, ವಂಚಕರಾಗಲಿ, ಘಾತುಕರಾಗಲಿ, ಸ್ವೇಚ್ಛಾಚಾರಿಗಳಾಗಲಿ, ದುರಾಚಾರಿಗಳಾಗಲಿ, ಯಾರೂ ಇರಲಿಲ್ಲ. ಅಂತಹವರಾರೂ ಅಲ್ಲಿ ಪ್ರವೇಶಮಾಡುವಂತಿರಲಿಲ್ಲ. ಅಗಸ್ತ್ಯರ ಆಶ್ರಮ ಒಂದು ವಿಶ್ವವಿದ್ಯಾನಿಲಯ, ಜ್ಞಾನಭಂಡಾರ. ಶಾಂತಿ, ಅಹಿಂಸೆಯ ಮೂಲಸ್ಥಾನ.

ಅಗಸ್ತ್ಯರು ಲೋಕ ಹಿತಾರ್ಥವಾಗಿ, ತಮ್ಮ ತಪೋ ಮಹಿಮೆಯಿಂದ ಅಸಾಧ್ಯ ಸಾಹಸಕಾರ್ಯ ಮಾಡಿದ್ದಾರೆ. ಅವುಗಳಲ್ಲಿ ಒಂದನ್ನು ಮಾತ್ರ ಇಲ್ಲಿ ಉದಹರಿಸಬಹುದು. ಇಲ್ವಲ ವಾತಾಪಿಗಳೆಂಬ ಇಬ್ಬರು ರಾಕ್ಷಸರಿದ್ದರು. ಇವರಿಬ್ಬರೂ ಅಣ್ಣತಮ್ಮಂದಿರು. ಬ್ರಾಹ್ಮಣರನ್ನೂ, ಋಷಿಗಳನ್ನೂ ಕೊಂದು ತಿನ್ನುವುದು ಅವರ ಕೆಲಸ. ಹೀಗೆ ಕೊಲ್ಲುವುದಕ್ಕೆ ಒಂದು ಉಪಾಯ ಮಾಡುತ್ತಿದ್ದರು. ಇಲ್ವಲನು ಬ್ರಾಹ್ಮಣ ರೂಪತಾಳಿ, ಸಂಸ್ಕೃತ ಭಾಷೆಯಲ್ಲಿ ಮಾತಾಡುತ್ತಿದ್ದನು. ತನ್ನ ಮನೆಯಲ್ಲಿ ಶ್ರಾದ್ಧವೆಂದೂ, ಅದನ್ನು ನಡೆಸುವುದಕ್ಕಾಗಿ ಊಟಕ್ಕೆ ಬರಬೇಕೆಂದೂ ಬ್ರಾಹ್ಮಣರನ್ನು ಕರೆಯುವುದು; ಅವರು ಮನೆಗೆ ಬರುವ ವೇಳೆಗೆ ವಾತಾಪಿಯು ಮೇಕೆ ರೂಪವನ್ನು ತಾಳಿ ಮನೆಯ ಮುಂದುಗಡೆ ಇರುವುದು; ಆ ಮೇಕೆಯನ್ನು ಇಲ್ವಲನು ಕೊಂದು, ಅದರ ಮಾಂಸವನ್ನು ಅಡಿಗೆಮಾಡಿ ಭೋಜನಕ್ಕಿಡುವುದು; ಭೋಜನದಿಂದ ಅವರು ತೃಪ್ತರಾಗಿ ಕುಳಿತಿರುವಾಗ ಇಲ್ವಲನು ಅವರ ಮುಂದೆ ನಿಂತು, 'ವಾತಾಪಿ ಹೊರಕ್ಕೆ ಬಾ' ಎಂದು ಕರೆಯುವುದು, ಹೀಗೆ ಕೂಗಿದ ಕೂಡಲೆ ವಾತಾಪಿ, ಬ್ರಾಹ್ಮಣರ ಶರೀರವನ್ನು ಭೇದಿಸಿಕೊಂಡು ಹೊರಗೆ ಬರುವುದು. ಆಮೇಲೆ ಅವರಿಬ್ಬರೂ ಸೇರಿ ಆ ಬ್ರಾಹ್ಮಣರನ್ನು ತಿನ್ನುವುದು. ಹೀಗೆ ಬಹುಕಾಲ ಮಾಡುತ್ತಿದ್ದರು. ಸಾವಿರಾರು ಸಾತ್ವಿಕ ಬ್ರಾಹ್ಮಣರನ್ನು ಕೊಂದು ತಿಂದಿದ್ದರು.

ಹೀಗಿರುವಾಗ ಒಂದು ದಿನ, ಬ್ರಾಹ್ಮಣವೇಷದ ರಾಕ್ಷಸನು ಅಗಸ್ತ್ಯಮುನಿಯನ್ನು ನಿಮಂತ್ರಣಕ್ಕೆ ಕರೆದನು. ಅವರು ಒಪ್ಪಿಕೊಂಡರು. ಎಂದಿನಂತೆ, ಮೇಕೆಯ ಮಾಂಸವನ್ನು ಅಡಿಗೆಮಾಡಿ ಇಟ್ಟನು. ಅವರು ಊಟ ಮಾಡಿದರು. ಕೊನೆಯಲ್ಲಿ 'ಸ್ವಾಮಿ! ತೃಪ್ತಿ ಆಯಿತೇ' ಎಂದು ಕೇಳಿ, 'ವಾತಾಪಿ ಹೊರಕ್ಕೆ ಬಾ' ಎಂದನು. ಮಹಾಧೀಮಂತರಾದ ಅಗಸ್ತ್ಯರು

ಹೊಟ್ಟೆಯ ಮೇಲೆ ಕೈ ಆಡಿಸುತ್ತಾ, 'ವಾತಾಪೀ ಜೀರ್ಣೋಭವ' ಎಂದರು. ಹೀಗೆ ತಮ್ಮನು ಮಡಿದ ಕೂಡಲೇ ಇಲ್ವಲನು ರಾಕ್ಷಸ ರೂಪವನ್ನು ತಾಳಿ, ಅಗಸ್ತ್ಯರ ಮೇಲೆ ಬೀಳಲು ಯತ್ನಿಸಿದನು. ಆಗ ಅವರು ಬೆಂಕಿಯಂತೆ ಉರಿಯುತ್ತಿರುವ ಕಣ್ಣಿನಿಂದಲೇ ಅವನನ್ನು ಭಸ್ಮ ಮಾಡಿದರು. ಅಂದಿನಿಂದ ಲೋಕ ಕಂಟಕರಾದ ಆ ರಾಕ್ಷಸರ ಕಾಟ ತಪ್ಪಿತು. ಇಲ್ವಲನು ಹತನಾದ ಸ್ಥಳದಲ್ಲಿ ಇಲವಾಲ ಎಂಬ ಊರು ಇದೆ. ಅಂದಿನಿಂದ ಅಗಸ್ತ್ಯರು ತಮ್ಮ ಕೋಪವನ್ನು ಬಿಟ್ಟು, ಬಹು ಶಾಂತವಾಗಿ ಆಶ್ರಮದಲ್ಲಿ ನೆಲೆಸಿದ್ದರು. ಆಶ್ರಮವಾಸಿಗಳೆಲ್ಲಾ ಇವರನ್ನು ಗುರುದೇವನೆಂದು ಕರೆಯುತ್ತಿದ್ದರು.

ವಿದ್ಯಾರ್ಜನೆ ಮಾಡುತ್ತಿದ್ದ ವಟುಗಳಲ್ಲಿ ಗೌತಮನು ಬಹು ಮೇಧಾವಿ. ಗುರುಗಳಿಗೆ ಇವನು ಅತ್ಯಂತ ಪ್ರಿಯತಮನಾಗಿದ್ದನು. ಎಲ್ಲರಿಗಿಂತ ಇವನು ಪ್ರತಿಭಾಶಾಲಿಯಾಗಿದ್ದುದರಿಂದ, ಇವನ ಮೇಲೆ ಗುರುಗಳಿಗೆ ಹೆಚ್ಚು ಮಮತೆ. ಗೌತಮನು ಕ್ರಮಾಂತ ವೇದಾಧ್ಯಯನ ಮಾಡಿದ್ದನು ತರ್ಕ, ವೇದಾಂತ, ಧರ್ಮಶಾಸ್ತ್ರ ಅಭ್ಯಾಸ ಮುಗಿಸಿದ್ದನು. ಇನ್ನೂ ಜ್ಞಾನಾರ್ಜನೆಯಲ್ಲಿಯೇ ತೊಡಗಿದ್ದನು. ಇದರ ಜೊತೆಗೆ, ಅವನು ಆಶ್ರಮಕ್ಕೆ ಬಂದು ಹೋಗುತ್ತಿದ್ದ ಅತಿಥಿಗಳ ಉಪಚಾರಾದಿಕಾರ್ಯ ವಹಿಸಿದ್ದನು. ವೃದ್ಧರು, ಮಕ್ಕಳು, ರೋಗಿಗಳು ಇವರ ಮೇಲ್ವಿಚಾರಣಾಕಾರ್ಯವನ್ನು ಇವನಿಗೆ ವಹಿಸಲಾಗಿತ್ತು. ಯಾರು ಯಾರನ್ನು, ಯಾವ ಯಾವ ರೀತಿಯಲ್ಲಿ ಕಾಣಬೇಕು, ಹೇಗೆ ನಡೆದುಕೊಳ್ಳಬೇಕು ಎಂಬುದನ್ನೆಲ್ಲಾ ಚೆನ್ನಾಗಿ ಅರಿತಿದ್ದನು. ಗೌತಮನು, ಅಗಸ್ತ್ಯರ ಆಶ್ರಮದ ಪ್ರಧಾನ ಕಾರ್ಯದರ್ಶಿ. ಸಮಯ ಬಂದಹಾಗೆ, ಶಿಷ್ಯ, ಭಟ, ಅನುಯಾಯಿ ಎಲ್ಲವೂ ಆಗುತ್ತಿದ್ದನು.

ಗೌತಮನಿಗೆ ಬಾಲ್ಯ ಕಳೆದಿತ್ತು. ವಿದ್ಯಾಪಾರಂಗತನಾಗಿದ್ದ. ಅವನ ಉಡಿಗೆತೊಡಿಗೆ ಬಹು ಸುಲಭ. ನಡೆನುಡಿಗಳು ಶಾಂತವಾಗಿದ್ದವು. ಅವನ ನಿತ್ಯ ಕೆಲಸವೆಂದರೆ, ಉಷಃಕಾಲಕ್ಕೆ ಎದ್ದು ಸ್ನಾನ ಸಂಧ್ಯೆಮಾಡಿ, ಅಗ್ನಿ ಕಾರ್ಯ ಪ್ರಾರಂಭಿಸಿ, ಅನಂತರ ಸ್ವಲ್ಪಕಾಲ, ಪದ್ಮಾಸನದಲ್ಲಿ ಕುಳಿತು, ಅಂಗ ಚೇಷ್ಟೆ ಇಲ್ಲದೆ, ಸ್ವರತಪ್ಪದೆ, ವರ್ಣಕ್ಕೆ ಚ್ಯುತಿ ಬಾರದೆ ವೇದಾಧ್ಯಯನ ಮಾಡುವುದು. ಗುರುದೇವನು ನದಿಗೆ ಹೋದರೆ, ಕಲಶ, ಕಮಂಡಲು, ವಲ್ಕಲವನ್ನು ತೆಗೆದುಕೊಂಡು ಹೋಗುವುದು. ಗುರುವಿನ ಆಯಾಸವನ್ನರಿತು

ಉಪಚರಿಸುವುದು. ಯಾವಾಗಲೂ ಗುರುವಿನ ಚಿತ್ತಕ್ಕೆ ಆನಂದವುಂಟಾಗುವ ಕೆಲಸದಲ್ಲಿ ನಿರತನಾಗಿರುವುದು. ಅಂಜಿಕೆ, ಅತ್ಯಾಶೆ, ಆಲಸ್ಯಗಳಿಗೆ ಎಂದೂ ಅವಕಾಶ ಕೊಡದಿರುವುದು.

ಅಗಸ್ತ್ಯರ ಆಶ್ರಮ ಒಂದು ದೊಡ್ಡ ಗುರುಕುಲವಾಗಿತ್ತು. ಅಲ್ಲಿ ಒಂದು ಕಡೆ ಬ್ರಹ್ಮ ವಿಷ್ಣು ಮಹೇಶ್ವರರ ಪೂಜಾಸ್ಥಾನ. ಇನ್ನೊಂದು ಕಡೆ ಸಮಸ್ತ ದೇವತೆಗಳ ವಿಗ್ರಹಸ್ಥಾನ. ಮತ್ತೊಂದು ಕಡೆ ಅಗ್ನಿಪೂಜಾ ಸ್ಥಾನವಿದ್ದುವು. ಆಶ್ರಮದ ಇನ್ನೊಂದು ಭಾಗದಲ್ಲಿ ಸುವರ್ಣಮಯವಾಗಿ ರತ್ನಖಚಿತ ದಿವ್ಯಧನುಸ್ಸು, ಸೂರ್ಯನಂತೆ ಹೊಳೆಯುತ್ತಿರುವ ಬಾಣಗಳು, ಬತ್ತಳಿಕೆ, ಸುವರ್ಣಾಲಂಕೃತ ಖಡ್ಗ ಎಲ್ಲವೂ ಇದ್ದುವು. ಸಮಸ್ತ ವಿದ್ಯೆಯನ್ನು ಕಲಿಸುವ ಕೇಂದ್ರವೂ, ಪ್ರಯೋಗಶಾಲೆಯೂ ಆಗಿದ್ದಿತು ಈ ಆಶ್ರಮ. ಇಂತಹ ನೂರಾರು ಕೇಂದ್ರಗಳು ಭಾರತೀಯ ಸಂಸ್ಕೃತಿಯನ್ನು ಪ್ರಚಾರಮಾಡುತ್ತಿದ್ದವು. ಜೊತೆಗೆ ಇವು ರಾಜಾಶ್ರಯ ಸ್ಥಾನವೂ ಆಗಿದ್ದುವು.

ಇಂತಹ ಗುರುಕುಲದ ಯಾಜಮಾನ್ಯವನ್ನು ಅಗಸ್ತ್ಯಮುನಿಯ ಗೌತಮುನಿಗೆ ವಹಿಸಿದ್ದನು. ಅವನು ಗುರುವಿನ ಆಜ್ಞೆಯಂತೆ, ಎಲ್ಲ ಕಾರ್ಯವನ್ನು ದಕ್ಷತೆಯಿಂದ ನಿರ್ವಹಿಸುತ್ತಿದ್ದನು. ಗುರುವಿನ ಮನ್ನಣೆಗೂ, ಆಶ್ರಮದ ಜನರ ಪ್ರೀತಿಗೂ ಅವನು ಪಾತ್ರನಾಗಿದ್ದನು.

ಹೀಗೆ ಪ್ರತಿಯೊಂದು ಋಷ್ಯಾಶ್ರಮವೂ ಒಂದು ಶಿಕ್ಷಣ ಕೇಂದ್ರ. ಪ್ರತಿಯೊಂದು ದೇವಾಲಯವೂ ಒಂದು ಘಟಿಕಾಸ್ಥಾನವಾಗಿತ್ತು.. ಇವೆಲ್ಲ ಭಾರತೀಯ ಸಂಸ್ಕೃತಿ ಕೇಂದ್ರವಾಗಿದ್ದುದಲ್ಲದೆ, ಸಮಾಜ ರಚನಾ ಪಾಲನೆಯಲ್ಲಿ ನಿರತವಾಗಿದ್ದುವು. ದೇವಾಲಯಗಳು ತಮ್ಮ ಆದಾಯದ ಒಂದು ಭಾಗವನ್ನು ವೈದ್ಯಾನುಕೂಲಕ್ಕೆ ಮೀಸಲಾಗಿಟ್ಟಿದ್ದುವು. ಧಾರ್ಮಿಕ ಪ್ರಚಾರ ಕಾರ್ಯದಲ್ಲಿ ಇವು ನಿರತವಾಗಿದ್ದುವು. ಎಲ್ಲರೂ ದೇವಾಲಯದ ವಿಷಯದಲ್ಲಿ ಹೆಚ್ಚು ಗಮನ ವಹಿಸುತ್ತಿದ್ದರು.

ಈ ಶಿಕ್ಷಣ ಕೇಂದ್ರಗಳೇ ಗುರುಕುಲ. ಇಲ್ಲಿ ವಿದ್ಯಾರ್ಥಿಗಳಿಗೆ ಎಲ್ಲ ಬಗೆಯ ಶಿಕ್ಷಣವೂ ದೊರೆಯುತ್ತಿತ್ತು. ಶಿಕ್ಷಣ, ಭೋಜನ, ವಸತಿ, ವಸ್ತ್ರ, ಎಲ್ಲವೂ ವಿದ್ಯಾರ್ಥಿಗಳಿಗೆ ಉಚಿತವಾಗಿ ದೊರೆಯುತ್ತಿದ್ದುವು. ಮೀಮಾಂಸ,

ವೇದಾಂತ ವಿದ್ಯೆಗೆ ಹೆಚ್ಚಿನ ಪ್ರೋತ್ಸಾಹ, ಋಗ್ವೇದ, ಯಜುರ್ವೇದ, ವ್ಯಾಕರಣ ವಿದ್ಯಾರ್ಥಿಗಳಿಗೆ, ಹೆಚ್ಚಿನ ಸೌಕರ್ಯ. ಪ್ರತಿಭಾಶಾಲಿಗಳಿಗೆ ಹೆಚ್ಚಿನ ಗೌರವ. ಹೀಗೆ ಎಲ್ಲವೂ ವ್ಯವಸ್ಥೆ ಆಗಿತ್ತು. ಉಪಾಧ್ಯಾಯರಿಗೆ ಅವರವರ ಸಂಸಾರದ ವೈಶಾಲ್ಯಕ್ಕೆ ತಕ್ಕಂತೆ, ವೇತನ ದೊರೆಯುತ್ತಿತ್ತು.

ತಿರುಮುಕ್ಕುದಲ್ ವೆಂಕಟೇಶ ದೇವಾಲಯು ಒಂದು ಮುಖ್ಯ ಘಟಿಕಾ ಸ್ಥಾನ. ಇಲ್ಲಿ ಇನ್ನೊಂದು ಶಿವ ದೇವಾಲಯ. ಇಲ್ಲಿಯೇ ಪರಮೇಶ್ವರನು, ಪಾಣಿನಿ ಆಚಾರ್ಯರ ಮುಖೇನ ವ್ಯಾಕರಣ ಸೂತ್ರ ಉಪದೇಶವಾಗುವಂತೆ ಮಾಡಿದ್ದು. ಇಂತಹ ಪವಿತ್ರ ಸ್ಥಳದಲ್ಲಿ ವ್ಯಾಕರಣ ಪ್ರೌಢಶಾಲೆಯೊಂದು ಸ್ಥಾಪಿತವಾಗಿತ್ತು. ಅಲ್ಲಿನ ಸಮಸ್ತ ಹಲರೆಲ್ಲ ಸೇರಿ, ಈ ಘಟಿಕಾಸ್ಥಾನಕ್ಕೆ ನಾಲ್ಕು ನೂರು ಎಕರೆ ಸಾಗುಭೂಮಿಯನ್ನು ದತ್ತಿ ಬಿಟ್ಟಿದ್ದರು. ಇದರಿಂದ ಬಂದ ಆದಾಯದಲ್ಲಿ ನಾಲ್ಕುನೂರು ಐವತ್ತು ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದರು.

ಅಂದಿನ ಕಾಲದಲ್ಲಿ ಇನ್ನೊಂದು ಬಗೆಯ ಜ್ಞಾನಪ್ರಸಾರ ಕೇಂದ್ರ ಗಳಿದ್ದುವು. ಅವೇ ಅಗ್ರಹಾರಗಳು. ಅವೆಲ್ಲ ಪ್ರೌಢವಿದ್ಯಾಭ್ಯಾಸ ಕೇಂದ್ರ ಗಳು. ಅನುಕೂಲವಾದ ಕಡೆ, ಒಂದೊಂದು ಉತ್ತಮ ಗ್ರಾಮಗಳನ್ನು ಆರಿಸಿ, ದತ್ತಿ ಬಿಡುವುದು. ಅದರ ಸುತ್ತಮುತ್ತಲಿನ ಸಾಗುಭೂಮಿಯಿಂದ ಬಂದ ಉತ್ಪತ್ತಿಯಿಂದ ಅಲ್ಲಿನ ಉಪಾಧ್ಯಾಯರ ವೇತನ, ಮತ್ತು ವಿದ್ಯಾರ್ಥಿ ಗಳ ಅಶನವಸನ ಪಾವತಿಯಾಗುತ್ತಿದ್ದವು. ಇಂತಹ ನೂರಾರು ಅಗ್ರಹಾರ ಕೇಂದ್ರಗಳು ದಕ್ಷಿಣದೇಶದಲ್ಲಿದ್ದುವು. ಇಲ್ಲಿ ವೇದಾಧ್ಯಯನ, ಶಾಸ್ತ್ರಾಭ್ಯಾಸ, ಪುರಾಣಪಠಣ, ಹರಿನಾಮ ಸಂಕೀರ್ತನ ಎಲ್ಲವೂ ನಡೆಯುತ್ತಿದ್ದುವು. ಸರ್ವ ಜನಪುರ ಎಂಬುದು, ಇಂತಹ ಅಗ್ರಹಾರಗಳಲ್ಲಿ ಪ್ರಸಿದ್ಧ ಕೇಂದ್ರ. ಬಹು ದೂರದಿಂದ ವಿದ್ಯಾರ್ಥಿಗಳು, ಜ್ಞಾನಾರ್ಜನೆಗಾಗಿ ಇಲ್ಲಿಗೆ ಬರುತ್ತಿದ್ದರು.

ಹೀಗೆ, ಋಷ್ಯಾಶ್ರಮ, ಘಟಿಕಾಸ್ಥಾನ, ಅಗ್ರಹಾರ, ಇವು ಮೂರೂ ಗುರುಕುಲ ಪದ್ಧತಿಯ ಮೂರು ಆಧಾರ ಸ್ತಂಭಗಳು. ಇಂದಿನ ಪ್ರೌಢಶಾಲೆ ಗಳಿಗಿಂತ, ಅಂದಿನ ಶಿಕ್ಷಣ ಕೇಂದ್ರಗಳ ಸಂಖ್ಯೆ ಅಪಾರವಾಗಿದ್ದುವು. ಶಿಕ್ಷಣ ವೆಚ್ಚವನ್ನೆಲ್ಲಾ ಆಯಾ ಕೇಂದ್ರಗಳೇ ವಹಿಸಿಕೊಳ್ಳುತ್ತಿದ್ದವು. ಪ್ರತಿಯೊಂದು ಕೇಂದ್ರವೂ ಸ್ವಯಂಸಂಪೂರ್ಣವಾದ ಜ್ಞಾನಭಂಢಾರ. ಭಾರತೀಯ ಶಿಕ್ಷಣ

ಮತ್ತು ಸಂಸ್ಕೃತಿಯ ಪಾಲನೆ ಪೋಷಣೆಗಾಗಿಯೇ, ಈ ಕೇಂದ್ರಗಳ ಆದಾಯವೆಲ್ಲಾ ವಿನಿಯೋಗವಾಗುತ್ತಿತ್ತು. ಬಹುಕಾಲ ಇವು ಶ್ರಮಿಸಿದುವು. ಅವುಗಳ ಜ್ಞಾಪಕಾರ್ಥವಾಗಿ, ಇಂದಿನ ತಿರುಪತಿಯ ಪೌರ್ವಾತ್ಯ ಶಿಕ್ಷಣ ಕೇಂದ್ರ ಸ್ಥಾಪಿತವಾಗಿರಬಹುದೇನೋ ಎನ್ನಿಸುವುದು. ಈ ಗುರುಕುಲ ಪದ್ಧತಿಯೇ ಭಾರತ ಸಂಸ್ಕೃತಿಯ ತಳಹದಿ. ಇವುಗಳ ಪುನರುದ್ಧಾರ ವಾದಲ್ಲದೆ ನ್ಯಾಯ, ಧರ್ಮಪಾಲನೆ ಆಗುವುದಿಲ್ಲ.

——:——

ಪ್ರಣಯಪ್ರಸಂಗ

ಅಗಸ್ತ್ಯರ ಆಶ್ರಮ ಶ್ರೀರಂಗ ದೇಶದ ಒಂದು ಮುಖ್ಯ ಭಾಗ. ಇದರ ದೊರೆ ಶ್ರೀರಂಗ ರಾಜ. ಧೈರ್ಯದಿಂದ ರಾಜ್ಯಪರಿಪಾಲನೆ ಮಾಡುತ್ತಿದ್ದನು. ಅವನ ರಾಜ್ಯದಲ್ಲಿ ಯಾವಾಗಲೂ ಕೋಲಾಹಲವಿರಲಿಲ್ಲ; ಅವನ ಉದಾರ ನೀತಿಯ ಆಡಳಿತದ ಫಲವಾಗಿ, ದೇಶದ ಜನರೆಲ್ಲ ವಿದ್ಯಾವಿನಯ ಸಂಪನ್ನ ರಾಗಿದ್ದರು. ಪ್ರಜೆಗಳೆಲ್ಲ ಶಾಂತಿಪ್ರಿಯರೂ. ಸುಖಜೀವಿಗಳೂ ಆಗಿದ್ದರು.

ಶ್ರೀರಂಗದೇಶಕ್ಕೆ ಕುಂತಳ, ಕುಶಾವತಿ, ಕಲ್ಯಾಣ, ಕೌಶಿಕ, ಕೌಶಾಂಬಿ, ಕಾಂದೇಯ–ಇವೆಲ್ಲ ಆಶ್ರಿತ ರಾಷ್ಟ್ರಗಳು. ಇಲ್ಲಿನ ಅರಸರೆಲ್ಲ, ಶ್ರೀರಂಗ ರಾಜನಿಗೆ ಕಪ್ಪಕಾಣಿಕೆ ಸಲ್ಲಿಸಿ, ಅವನ ಇಷ್ಟದಂತೆ ರಾಜ್ಯಭಾರ ಮಾಡು ತ್ತಿದ್ದರು. ಇವರೆಲ್ಲ ಶ್ರೀರಂಗ ರಾಜನನ್ನು ಬಹುವಾಗಿ ಪ್ರೀತಿಸುತ್ತಿದ್ದರು; ಅಪಾರ ಗೌರವ ಸಲ್ಲಿಸುತ್ತಿದ್ದರು. ಶ್ರೀರಂಗ ರಾಜನು ಯಾರಿಗೂ ಎಂದೂ ಅವಮಾನ ಪಡಿಸಿದವನಲ್ಲ. ಪರರ ಸ್ವಾತಂತ್ರ್ಯಾಪಹರಣ ಮಾಡುವ ಪ್ರಯತ್ನ ಎಂದೂ ಮಾಡಿದವನಲ್ಲ. ಅನೇಕ ಅರಸರು ತಾವಾಗಿಯೇ ಮುಂದೆ ಬಂದು ಇವನ ಆಶ್ರಯದಲ್ಲಿರಲು ಇಷ್ಟಪಡುತ್ತಿದ್ದರು ರಾಜನು ರಾಷ್ಟ್ರದ ಆಡಳಿತವನ್ನು ಪ್ರಜೆಗಳಿಗೇ ಒಪ್ಪಿಸಿದ್ದನು. ಪ್ರಜೆಗಳಿಗೆ ರಾಜನಲ್ಲಿ ಸಂಪೂರ್ಣ ಅಭಿಮಾನವಿತ್ತು. ರಾಜನಿಷ್ಠೆ, ದೇಶಭಕ್ತಿ ಇವು ಎಲ್ಲೆಲ್ಲಿಯೂ ಪ್ರದರ್ಶಿತ ವಾಗಿದ್ದುವು.

ಶ್ರೀರಂಗಪುರ ಅದರ ರಾಜಧಾನಿ. ಕಾವೇರಿನದಿಯ ಮಧ್ಯದಲ್ಲಿ ಇದೊಂದು ಸಣ್ಣ ದ್ವೀಪ. ಬಹು ಸುಂದರವಾದ ನಗರ. ಸುತ್ತಲೂ ಕೋಟೆ ಕೊತ್ತಲ, ವಿಶಾಲವಾದ ಬೀದಿ, ಸುಂದರವಾದ ಮಹಡಿಮನೆಗಳು, ಅಂದವಾದ ರಂಗನಾಥ ದೇವಾಲಯ. ದೇವಾಲಯದ ಎದುರಿನ ವಿಶಾಲ ಮೈದಾನ ಮಧ್ಯದಲ್ಲಿ ನಿರ್ಮಿತವಾದ ಸುಂದರ ಅರಮನೆ– ಇವೆಲ್ಲ ನಗರದ ಸೌಂದರ್ಯವನ್ನು ಹೆಚ್ಚಿಸಿದ್ದುವು.

ಶ್ರೀರಂಗರಾಜನಿಗೆ ಅಹಲ್ಯೆ ಓರ್ವಳೇ ಪುತ್ರಿ. ಇವಳೇ ರಾಜನ ಉತ್ತರಾಧಿಕಾರಿಣಿಯಾಗಿದ್ದಳು. ತಾಯಿ ಇಲ್ಲದ ಮಗುವನ್ನು ರಾಜನು ಬಹು ಪ್ರೀತಿಯಿಂದ ಪೋಷಿಸಿದ್ದನು. ಈ ಮುದ್ದುಮಗಳನ್ನು ಒಂದು ಕ್ಷಣಕಾಣದಿದ್ದರೆ, ರಾಜನಿಗೆ ಮನಸ್ಸಮಾಧಾನವಿರುತ್ತಿರಲಿಲ್ಲ. ಶ್ರೀರಂಗಪುರದ ಸಮೀಪದಲ್ಲಿ ಅಗಸ್ತ್ಯಾಶ್ರಮವಿದ್ದುದರಿಂದ, ಅಹಲ್ಯೆಯು ಇಲ್ಲಿ ವಿದ್ಯಾರ್ಜನೆ ಮಾಡುತ್ತಿದ್ದಳು. ಅವಳು ಗೌತಮನ ಸಹಪಾಠಿ. ಬುದ್ಧಿ, ರೂಪ, ವಿದ್ಯೆ–ಯಾವುದರಲ್ಲಿಯೂ, ಅಹಲ್ಯೆ ಹಿಂದಿರಲಿಲ್ಲ. ಎಲ್ಲ ವಿಧದಲ್ಲಿ ಗೌತಮನಿಗೆ ಸರಿಸಮವಾಗಿದ್ದಳು. ಇವರಿಬ್ಬರಲ್ಲಿ ಮೊದಲಿನಿಂದ ಒಂದು ಬಗೆಯ ಸ್ನೇಹ ಅಂಕುರಿಸಿತ್ತು. ಅವರ ವಿದ್ಯಾಭ್ಯಾಸ ಮುಂದುವರಿದಂತೆಲ್ಲಾ, ಬಾಲ್ಯ ಕಳೆದು ತಾರುಣ್ಯಕ್ಕೆ ಅವರು ಕಾಲಿಟ್ಟಂತೆಲ್ಲಾ, ಬಾಲ್ಯ ಸ್ನೇಹ, ಮೋಹವಾಗಿ ಪರಿಣಮಿಸಿತು. ಅವರ ಮನೋಧರ್ಮದಿಂದ ಈ ವಿಷಯವನ್ನು ತಿಳಿಯಬಹುದಾಗಿತ್ತು. ಗೌತಮನ ಮನಸ್ಸಿನಲ್ಲಿ ಉಂಟಾದ ಭಾವನೆ, ಗುರುದೇವನಿಗಲ್ಲದೆ ಇನ್ಯಾರಿಗೂ ಗೋಚರವಾಗಿರಲಿಲ್ಲ.

ಒಂದು ದಿನ ಸಾಯಂಕಾಲವಾಗಿದೆ. ಸೂರ್ಯ ಮುಳುಗುವುದಕ್ಕೆ ಇನ್ನು ಸ್ವಲ್ಪ ಕಾಲಬೇಕು. ಆ ಹೊತ್ತಿನಲ್ಲಿ ಗೌತಮನು ಪಶ್ಚಿಮ ವಾಹಿನಿಯಾಗಿ ಹರಿಯುತ್ತಿರುವ ಕಾವೇರೀ ದಡಕ್ಕೆ ಬಂದಿದ್ದಾನೆ ಯುವಕ ಗೌತಮನಿಗೆ ಕಟ್ಟುಮಟ್ಟಾದ ದೇಹ. ಆಡಂಬರವಿಲ್ಲದ ಉಡಿಗೆ. ಹಣೆ, ಕೈ, ಮೈಯ್ಯಲ್ಲಿ ಬಿಳಿಯ ವಿಭೂತಿ ಪಟ್ಟೆ. ಕತ್ತಿನಲ್ಲಿ ರುದ್ರಾಕ್ಷಿಯ ಸರ. ತಂಗಾಳಿಯ ಹೊಡೆತಕ್ಕೆ ಅಲುಗಾಡುತ್ತಿರುವ ಗುಂಗುರು ಗುಂಗುರಾದ ತಲೆ ಕೂದಲು. ಕೃತ್ರಿಮ ಲಕ್ಷಣವೊಂದೂ ಇಲ್ಲದ ತುಂಬು ಶರೀರ. ತೇಜೋಮಯವಾಗಿದ್ದ ಮುಖಮುದ್ರೆ. ಶಾಂತಿ, ಗಂಭೀರ ಲಕ್ಷಣದಿಂದ ಕೂಡಿದ ಮೋಹನಾಕಾರದ

ಆಕೃತಿ. ಗೌತಮನು ನದೀ ತೀರಕ್ಕೆ ಬಂದು ನಿಂತು, ಸುತ್ತಲೂ ಪ್ರಕೃತಿ ಸೌಂದರ್ಯ ನೋಡುತ್ತಿದ್ದಾನೆ. ಸ್ವಲ್ಪ ಕಾಲದ ಮೇಲೆ ಅಲ್ಲಿದ್ದ ಒಂದು ಬಂಡೆಯಮೇಲೆ ನದಿಯ ಪ್ರವಾಹವನ್ನೇ ದೃಷ್ಟಿಸುತ್ತಾ ಕುಳಿತನು.

'ಎಲೌ ದೇವಿ, ಕಾವೇರಿ! ನಿನ್ನ ಪತಿಯಾದ ಸಾಗರ ರಾಜನನ್ನು ಸೇರಲು ಎಷ್ಟು ಆತುರವಾಗಿ ಓಡುತ್ತಿರುವೆ. ಇದನ್ನು ಜಗತ್ತಿಗೆ ತೋರು ತ್ತಿರುವೆಯಲ್ಲಾ? ಛೆ! ಹೀಗೇಕೆ ಹೇಳುತ್ತಿರುವೆ? ನಾನಿನ್ನೂ ಬ್ರಹ್ಮಚಾರಿ. ಮುನಿಕುಮಾರ. ಜಿತೇಂದ್ರಿಯನಾಗಿರಬೇಕೆಂದು ಲೋಕವೇ ಅಪೇಕ್ಷಿಸುತ್ತಿದೆ. ಆದರೆ ನನ್ನ ಮನೋದೌರ್ಬಲ್ಯವನ್ನು ಮುಚ್ಚಿಡಲು ಸಾಧ್ಯವಿಲ್ಲವಾಗಿದೆ. ಅಹಲ್ಯೆ! ಅಹಲ್ಯೆ!! ನಿನ್ನನ್ನು ಏನೆಂದು ಕರೆಯಲಿ? ದೇವರ ನಾಮ ಸ್ಮರಣೆಗೆ ಬರುವಂತೆ, ನಿನ್ನ ಹೆಸರೂ ನೆನಪಿಗೆ ಬರುತ್ತಿರುವುದಲ್ಲಾ! ನಿನ್ನ ರೂಪು ಕಣ್ಣಿನಲ್ಲಿ ಕಟ್ಟಿದಂತಿದೆ. ಶಾಸ್ತ್ರ ರೀತಿಯಲ್ಲಿ ನಿನ್ನನ್ನು ವರಿಸ ಬೇಕೆಂಬುದು ನನ್ನ ಆಸೆ. ಇದನ್ನು ಸಾಧಿಸಲು ಸಾಧ್ಯವೇ? ಗುರುದೇವನು ಇದಕ್ಕೆ ಅಪ್ಪಣೆ ಈಯುವನೇ? ಹೀಗೆಂದು ಗೌತಮನು, ನದಿಯ ಪ್ರವಾಹದ ಕಲಕಲ ನಿನಾದದಲ್ಲಿ ನೆಟ್ಟ ಮನಸ್ಸುಳ್ಳವನಾಗಿ, ತನ್ನ ಪಾಡಿಗೆ ತಾನೇ ಹೇಳಿಕೊಳ್ಳುತ್ತಿದ್ದನು.

ಅದೇ ಸಮಯಕ್ಕೆ ಅಹಲ್ಯೆಯು, ತನ್ನ ಸಖಿಯಾದ ಆತ್ರೇಯಿ ಯೊಡನೆ ಅಲ್ಲಿಗೆ ಬಂದಳು.

'ಮುನಿಕುಮಾರ! ನನ್ನನ್ನೇಕೆ ಕರೆದಿರಿ? ಎಂದಳು.

ಗೌತಮನು ತಲೆಯೆತ್ತಿ ನೋಡಿದನು. ಅಲ್ಲಿಗೆ ಯಾರೂ ಬರುವುದಿಲ್ಲ ವೆಂಬ ನಂಬಿಕೆ ಅವನಿಗಿತ್ತು. ಅವನು ಯಾರನ್ನೂ ನಿರೀಕ್ಷಿಸಿರಲಿಲ್ಲ. ಅವರನ್ನು ನೋಡುತ್ತಲೇ ಅವನಿಗೆ ನಾಚಿಕೆ ಆಯಿತು. ಹಣೆಯ ಮೇಲೆ ಬೆವರು ಹನಿ ಕಾಣಿಸುತ್ತಿದ್ದವು. ಏನು ಹೇಳುವುದಕ್ಕೂ ತೋಚದೆ ಸ್ವಲ್ಪ ಕಾಲ ಸುಮ್ಮನಿದ್ದನು.

ಅಷ್ಟರಲ್ಲಿ, ಆತ್ರೇಯಿಯು 'ಮುನಿಕುಮಾರಾ! ಇದೇನು ನಿಮ್ಮ ಮಂತ್ರ ಜಪ?' ಎಂದು ಹಾಸ್ಯ ಮಾಡಿದಳು.

ಆತ್ರೇಯಿಯ ಅಪಹಾಸ್ಯದ ಮಾತುಗಳು ಅಹಲ್ಯೆಗೆ ನೋವನ್ನುಂಟು

ಮಾಡಿತು. 'ಮುನಿಶ್ರೇಷ್ಠಾ! ಆತ್ರೇಯಿಯ ಹುಡುಗಾಟದ ಮಾತುಗಳನ್ನು ದಯವಿಟ್ಟು ಮನ್ನಿಸಿ. ತಾವು ದೊಡ್ಡವರು. ವಿದ್ಯಾಪಾರಂಗತರು ತಮಗೆ ಸಮಾನರಾದವರು ಯಾರೂ ಇಲ್ಲವೆಂದು ಗುರುದೇವನು ತಂದೆಯ ಸಂಗಡ ಹೇಳಿದುದನ್ನು ಕೇಳಿದೇನೆ. ಆತ್ಮೀಯ ಭಾವನೆಯಿಂದ ಹೀಗಾಗಿದೆ. ನಮ್ಮ ಬಾಲ್ಯ ಸ್ನೇಹವೂ ಕಾರಣವಿರಬೇಕು. ನಾವು ಇಲ್ಲಿಗೆ ಬಂದುದು ತಪ್ಪಾಗಿದ್ದರೆ ದಯವಿಟ್ಟು ಮನ್ನಿಸಿ' ಎಂದಳು.

'ಅಹಲ್ಯೆ! ಇವರಲ್ಲಿ ತಪ್ಪೇನಿಲ್ಲ. ನಿನ್ನನ್ನು ಹಂಬಲಿಸಿ ಹೆಸರು ಹೇಳಿದ ತಪ್ಪು ನನ್ನದು. ಎಲ್ಲಿಯೋ ಇದ್ದುಕೊಂಡು ಅಂಬಾರಿಯ ಮೇಲೆ ಕೂಡುವ ಕನಸು ಕಾಣುತ್ತಿರುವ ತಪ್ಪು ನನ್ನದು. ಇಲ್ಲಿ ಯಾರೂ ಇಲ್ಲ. ಇಂತಹ ನಿರ್ಜನ ಪ್ರದೇಶಕ್ಕೆ ಯಾರು ತಾನೆ ಬರುವರು ಎಂದು ನಂಬಿದುದು ನನ್ನ ತಪ್ಪು. ನನ್ನ ಗುಟ್ಟು ರಟ್ಟಾದುದಕ್ಕೆ ವ್ಯಸನಪಡುತ್ತೇನೆ' ಎಂದು ಹೇಳಿ ಅಲ್ಲಿಂದ ಹೊರಟನು.

ಹೀಗೆ ಆಶ್ರಮದ ಕಡೆಗೆ ಹೋಗುತ್ತಿರುವಾಗ, ಅಹಲ್ಯೆಯನ್ನು ನೋಡಿದನು. ಇಬ್ಬರ ನೋಟವು ಸಂಧಿಸಿತು. ಮುನಿಕುಮಾರನ ಮನಸ್ಸನ್ನು ತನ್ನ ಕಡೆ ಆಕರ್ಷಿಸಿದುದಕ್ಕಾಗಿ ಅಹಲ್ಯೆಗೆ ಸಂತೋಷವಾಯಿತು. ಗೌತಮನ ಕಣ್ಣಿನಲ್ಲಿ ಕಂಡ ಪವಿತ್ರಪ್ರೇಮಕ್ಕೆ ಅವಳು ಹಿಗ್ಗಿದ್ದಳು.

ಅಹಲ್ಯೆ, ಆತ್ರೇಯಿ ಇಬ್ಬರೂ ಗಾಳಿ ಸಂಚಾರಕ್ಕಾಗಿ ಹೊರಟು, ಆಶ್ರಮದ ಕಡೆ ಬಂದಿದ್ದರು. ಅಂದು ಅಹಲ್ಯೆಗೆ ಸುದಿನ. ಅವಳಿಗೆ ಒಂದು ಹೊಸ ವಿಷಯ ತಿಳಿಯಿತು. ಗೌತಮನ ಪ್ರೇಮ ಮನದಟ್ಟಾಯಿತು. ಅರಮನೆಗೆ ಹೋಗುವಾಗ ಸಖಿಯರಿಬ್ಬರೂ ಮಾತನಾಡದೆ ನಡೆದರು. ಅವರಿಬ್ಬರ ಮನಸ್ಸಿನಲ್ಲಿಯೂ ಒಂದೇ ವಿಧವಾದ ಯೋಚನಾತರಂಗಗಳು ಏಳುತ್ತಿದ್ದವು. ಯಾರಿಗೂ ಮಾತು ಬೇಕಾಗಿರಲಿಲ್ಲ. ಸ್ವಲ್ಪ ಹೊತ್ತಿನಲ್ಲಿಯೇ ಅರಮನೆಸೇರಿದರು.

——:——

ಗುರುಕೃಪೆ

ನದೀ ತೀರದಲ್ಲಿ ನಡೆದ ಪ್ರಣಯಪ್ರಸಂಗ ಗುರುದೇವನ ಗಮನಕ್ಕೆ ಬಾರದಿರಲಿಲ್ಲ. ತ್ರಿಕಾಲಜ್ಞಾನಿಯಾದವರಿಗೆ ಯಾವುದು ತಾನೆ ಗೋಚರಿಸದಿರುವುದು? ಈ ಪ್ರಣಯ ಸಂಬಂಧವಲ್ಲಿ ಮುಂದೆ ಉಂಟಾಗಬಹುದಾದ ಸಾಧಕ ಬಾಧಕಗಳನ್ನೆಲ್ಲಾ ಗುರುದೇವನು ವಿಚಾರಮಾಡಿಯೇ ಇದ್ದನು. ಅವನಿಗೆ ಶ್ರೀರಂಗರಾಷ್ಟ್ರದ ಹಿತ ಹೆಚ್ಚಿನದಾಗಿತ್ತು

ಅಹಲ್ಯೆಯು ಶ್ರೀರಂಗರಾಯನ ಏಕಮಾತ್ರ ಪುತ್ರಿ. ರಾಷ್ಟ್ರದ ಉತ್ತರಾಧಿಕಾರಿಣಿ. ಅನೇಕ ರಾಜಪುತ್ರರು ಅಹಲ್ಯೆಯನ್ನು ವಿವಾಹವಾಗಲು ಮುಂದೆ ಬಂದು ರಾಜನನ್ನು ಬೇಡಿದ್ದರು. ರೂಪ ಯೌವನ ಶಾಲಿಗಳೂ ಪರಾಕ್ರಮಿಗಳೂ ಆದ ರಾಜಕುಮಾರರು, ಶ್ರೀರಂಗರಾಜನ ಮನಸ್ಸನ್ನಾಕರ್ಷಿಸಿ, ಅಹಲ್ಯೆಯ ಕೈಹಿಡಿಯಲು ಸತತ ಪ್ರಯತ್ನಮಾಡುತ್ತಿದ್ದರು. ಆದರೆ ಶ್ರೀರಂಗ ರಾಜನಿಗೆ ಅಹಲ್ಯೆಯನ್ನು ವಿವಾಹಮಾಡಿಕೊಟ್ಟು ಕಳುಹಿಸಿಕೊಡುವ ಇಷ್ಟವಿರಲಿಲ್ಲ. ಹಾಗೆ ಮಾಡಿದರೆ, ತನ್ನ ಅರಮನೆ ಶೂನ್ಯವಾಗುವುದೆಂಬುದು ಅವನ ಯೋಚನೆಯಾಗಿತ್ತು.

ಅಹಲ್ಯೆಯನ್ನು ವಿವಾಹವಾಗಲು ಕೇಳಿದವರಿಗೆ, ಅವಳು ಇನ್ನೂ ಚಿಕ್ಕವಳು; ವಿವಾಹಕ್ಕೆ ಯೋಗ್ಯವಾದ ವಯಸ್ಸು ಬರಲಿ; ಇನ್ನೂ ಕೆಲವು ಕಾಲ ಕಳೆಯಲಿ ನೋಡೋಣ ಎಂದು ಯಾವುದಾದರೂ ಬಂದು ನೆಪ ಹೇಳಿ ರಾಜನು ಕಳುಹಿಸುತ್ತಿದ್ದನು. ಈ ವಿಷಯವೆಲ್ಲಾ ಗುರುದೇವನಿಗೆ ತಿಳಿದಿತ್ತು. ರಾಜನಿಗೆ ಗುರುಗಳಲ್ಲಿ ಅಪಾರ ಗೌರವವಿತ್ತು. ಎಲ್ಲ ಮಂತ್ರಾಲೋಚನೆಗಳನ್ನು ರಾಜನು ಅವರಲ್ಲಿ ಮಾಡುತ್ತಿದ್ದನು. ಅರಮನೆಯ ವಿಚಾರದಲ್ಲಿ ಸಲಹೆ ಕೊಡಲು ಗುರುಗಳಿಗೆ ಸಂಪೂರ್ಣ ಸ್ವಾತಂತ್ರ್ಯವಿತ್ತು.

ಹೀಗಿರುವಾಗ ಒಂದು ದಿವಸ ಗುರುದೇವನು ರಾಜನನ್ನು ನೋಡುವುದಕ್ಕೆ ಮಧ್ಯಾಹ್ನ ಅರಮನೆಗೆ ಬಂದನು. ರಾಜನು ವಂದಿಸಿ ಅವರನ್ನು ಉಚಿತ ಆಸನದಲ್ಲಿ ಕುಳ್ಳಿರಿಸಿ, ಅರ್ಘ್ಯಪಾದ್ಯಾದಿಗಳಿಂದ ಉಪಚರಿಸಿದನು. ಎಂದಿನಂತೆ ಸಂಭಾಷಣೆ ಪ್ರಾರಂಭವಾಯಿತು. ವಿಚಾರ ವಿನಿಮಯ ಆಯಿತು.

'ಮಹಾರಾಜಾ! ಅಹಲ್ಯೆಯ ವಿವಾಹವಿಚಾರವಾಗಿ ಏನು ಇತ್ಯರ್ಥ ಮಾಡಿರುವೆ? ವಯಸ್ಸಾದ ಮಗಳನ್ನು ಮನೆಯಲ್ಲಿಟ್ಟುಕೊಳ್ಳುವುದು ಲೋಕಾನುಭವಕ್ಕೆ ವಿರೋಧವಲ್ಲವೇ? ಇನ್ನೆಷ್ಟು ಕಾಲ ಸುಮ್ಮನಿರುವುದು' ಎಂದರು ಗುರುದೇವ.

ಪುತ್ರಿಯ ವಿವಾಹ ವಿಷಯ ಅವರು ಸೂಚಿಸಿದುದು ಇದೇ ಮೊದಲು. ಗುರುದೇವನು ಯಾವಾಗಲೂ ರಾಜಕೀಯ ವಿಚಾರವನ್ನು ಪ್ರಸ್ತಾಪಿಸಿ, ಸೂಕ್ಷ್ಮಬುದ್ಧಿವಾದ ಕೊಡುತ್ತಿದ್ದುದೇ ವಾಡಿಕೆಯಾಗಿತ್ತು. ಗುರುದೇವನ ಮಾತನ್ನು ಕೇಳಿ ರಾಜನಿಗೆ ಆಶ್ಚರ್ಯವುಂಟಾದುದಲ್ಲದೆ ಘಾಬರಿಯೂ ಆಯಿತು.

'ಗುರುವೇ? ಅಹಲ್ಯೆ ಬಹು ಮುದ್ದಿನಿಂದ ಬೆಳೆದಿದ್ದಾಳೆ. ಲೋಕ ವ್ಯವಹಾರವೊಂದೂ ತಿಳಿಯದು. ಏನಾದರೂ ಅಸಂಗತ ನಡೆದಿದೆಯೆ? ತಮಗೆ ತಿಳಿಯದಿರುವುದು ಏನೂ ಇಲ್ಲ. ದಯವಿಟ್ಟು ವಿಚಾರತಿಳಿಸಬೇಕು' ಎಂದು ರಾಜನು ಆತುರದಿಂದ ಕೇಳಿದನು.

'ಶ್ರೀರಂಗರಾಜಾ! ಇಂತಹ ಅನುಮಾನಕ್ಕೆ ಕಾರಣವಿಲ್ಲ. ಅಹಲ್ಯೆಯು ಸುಶಿಕ್ಷಿತೆ, ಸುಶೀಲೆ; ಎಂದೂ ಕುಲಕ್ಕೆ ಕಳಂಕ ತರುವವಳಲ್ಲ. ಅವಳ ಸ್ವಭಾವ ವನ್ನು ಬಾಲ್ಯದಿಂದ ನಾನು ಕಂಡಿದ್ದೇನೆ. ಆದರೆ ಅವಳು ಇಂದು ರೂಪವತಿ. ತಾರುಣ್ಯದಲ್ಲಿ ಕಾಲಿಟ್ಟಿದ್ದಾಳೆ. ಇಂತಹ ಕಾಲದಲ್ಲಿ ಮನಸ್ಸು ಚಂಚಲ ವಾಗುವುದು ಮಾನವ ಸ್ವಭಾವ. ಅದು ತಾರುಣ್ಯದ ತಪ್ಪು. ಇಂತಹ ಸಮಯದಲ್ಲಿ ಅವರು ಅಡ್ಡದಾರಿ ಹಿಡಿಯದಂತೆ, ಪಾಲಕರಾದ ನಾವು ನೋಡಿ, ಕೊಳ್ಳಬೇಕಲ್ಲವೇ? ಪೋಷಕರು ಆಯಾಯ ಕಾಲಕ್ಕೆ ತಕ್ಕಂತೆ ತಮ್ಮ ಕರ್ತವ್ಯ ನೆರವೇರಿಸಬೇಡವೇ?' ಎಂದರು.

'ಗುರುದೇವಾ! ನಿಮ್ಮ ಬುದ್ಧಿವಾದವನ್ನು ಶಿರಸಾವಹಿಸಿದ್ದೇನೆ. ಆದರೆ ಈ ಹಿಂದೆ ಏನೋ ನಡೆದಿದೆ. ಇಲ್ಲದಿದ್ದರೆ, ತಾವು ಹೀಗೆ ಹೇಳುತ್ತಿರ ಲಿಲ್ಲ. ತಮ್ಮ ಮಾತಿನಿಂದ ನನ್ನ ಮನಸ್ಸು ಕಳವಳಗೊಂಡಿದೆ. ನನ್ನ ಜೀವನದ ದುಃಖವನ್ನೆಲ್ಲಾ, ಅಹಲ್ಯೆಯನ್ನು ನೋಡಿ ಮರೆಯುತ್ತಿದ್ದೇನೆ. ತಾವು ಇದನ್ನು ಬಲ್ಲಿರಿ. ತಲ್ಲಣಗೊಳ್ಳುತ್ತಿರುವ ನನ್ನ ಮನಸ್ಸನ್ನು ಸಮಾಧಾನ ಪಡಿಸಬೇಕು' ಎಂದು ಗದ್ಗದ ಸ್ವರದಿಂದ ರಾಜನು ಹೇಳಿದನು.

'ಮಹಾರಾಜಾ! ನೀನು ಅಧೈರ್ಯಪಡುವುದಕ್ಕೆ ಅವಕಾಶವೇನಿದೆ? ಸಂದೇಹ ಪಡುವುದಕ್ಕೆ ಕಾರಣವಿಲ್ಲ. ಆದರೂ, ನಿನ್ನೆ ಸಾಯಂಕಾಲ ನಡೆದ ಒಂದು ಸಂಗತಿಯನ್ನು ನಿನಗೆ ತಿಳಿಸುತ್ತೇನೆ. ಅಹಲ್ಯೆಯ ಅನುಪಮ ಸೌಂದರ್ಯವೂ, ಅವಳ ಸೌಜನ್ಯ ಸೌಶೀಲ್ಯವೂ ಗೌತಮನ ಮನಸ್ಸಿನ ಮೇಲೆ ಅತ್ಯುತ್ಕಟ ಪರಿಣಾಮವನ್ನುಂಟುಮಾಡಿವೆ. ಅವಳ ರೂಪಕ್ಕೆ ಅವನು ಮನ ಸೋತಿದ್ದಾನೆ. ಅವನ ಅನುರಾಗ ಅತ್ಯುನ್ನತ ಶಿಖರ ಮುಟ್ಟಿದೆ. ಒಂದು ಪಕ್ಷ ಅವನು ನಿರಾಶನಾಗುವ ಪಕ್ಷದಲ್ಲಿ, ಪರಿಣಾಮ ನೆಟ್ಟಗಾಗಲಾರ ದೆಂಬ ಭಯ ನನಗಾಗಿದೆ. ಅವಳ ಸ್ಮರಣೆಯೇ ಅವನ ನಿತ್ಯ ಜಪವಾಗುತ್ತಿದೆ. ಇದು ನಿಜವಾದ ಪರಸ್ಪರ ಅನುರಾಗವಾಗುವ ಪಕ್ಷೆ, ಇದನ್ನು ಬೆಳೆಸುವುದು ಸಾಧುವೇ? ರಾಷ್ಟ್ರದ ಹಿತದೃಷ್ಟಿಯಿಂದ ಸೂಕ್ತವೇ? ಇದು ಅನುರೂಪ ಸಂಬಂಧವೇ? ಎಂಬುದನ್ನು ಯೋಚನೆಮಾಡಬೇಕಲ್ಲವೇ? ಕೈಮಿಂಚಿ ಹೋಗುವುದಕ್ಕೆ ಮುಂಚೆ, ಎಚ್ಚರಿಕೆಯಿಂದಿರುವುದು ಒಳ್ಳೆಯದಲ್ಲವೇ?' ಎಂದು ಅಗಸ್ತ್ಯರು ಸೂಚಿಸಿದರು.

'ಮಹಾಮುನಿಗಳೇ! ಗೌತಮನ ಮನಸ್ಸು ತಿಳಿದಾಯಿತು. ಅಹಲ್ಯೆಯು, ಗೌತಮನಲ್ಲಿ ಅನುರಕ್ತಳಾಗಿದ್ದಾಳೆಯೇ ಇಲ್ಲವೇ ಎಂಬುದನ್ನು ತಿಳಿಯ ಬೇಡವೇ? ಅವಳಿನ್ನೂ ಚಿಕ್ಕವಳು. ಯಾವನಾದರೂ ರಾಜಕುಮಾರನನ್ನು ವಿವಾಹವಾಗಲು ಅವಳು ಇಷ್ಟಪಟ್ಟಲ್ಲಿ ಅದನ್ನು ನೆರವೇರಿಸುವುದು ಒಳ್ಳೆಯ ದಲ್ಲವೇ? ಇದನ್ನು ತಾವು ವಿಚಾರಮಾಡಬೇಕು. ಯಾವುದು ಸೂಕ್ತವೋ ಹಾಗೆ ಮಾಡುವಂತೆ ಅಪ್ಪಣೆ ಕೊಡಿಸಬೇಕು' ಎಂದು ರಾಜನು ಉತ್ತರ ಹೇಳಿದನು.

'ಮಹಾರಾಜ! ನಾನು ಎಲ್ಲ ವಿಚಾರಗಳನ್ನೂ ಪರಿಶೀಲಿಸಿದ್ದೇನೆ. ಅಹಲ್ಯೆಯ ಮನಸ್ಸನ್ನು ತಿಳಿಯಲು, ಗೌತಮನು ಕೆಲವು ಕಾಲವಾದರೂ ಕಣ್ಮರೆಯಾಗಿರಬೇಕೆಂದು ನಿಶ್ಚಯಿಸಿದ್ದೇನೆ. ಇದರಿಂದ ಆಶ್ರಮದ ಕೆಲಸ ಗಳಿಗೆ ಸ್ವಲ್ಪ ಅಡ್ಡಿ ಬರುವುದು ನಿಜ. ಆದರೆ ನಾನು ಅದನ್ನು ಲಕ್ಷಿಸುವುದಿಲ್ಲ. ತೀರ್ಥಯಾತ್ರೆ ಮಾಡಿ, ಮನಶ್ಶಾಂತಿ ಪಡೆದು ಬಾರೆಂದು ಗೌತಮನಿಗೆ ಅಪ್ಪಣೆ ಇತ್ತಿದ್ದೇನೆ. ವಿದ್ಯಾರ್ಜನೆ ಮಾಡಿದ ಮೇಲೆ ದೇಶಾಟನೆ ಮಾಡಿ, ಪ್ರಪಂಚದ ವ್ಯವಹಾರ ಜ್ಞಾನ ಪಡೆಯುವುದು ಅಗತ್ಯವೆಂದು ಸೂಚಿಸಿ

ದ್ದೇನೆ. ಇಂತಹ ಪ್ರವಾಸದಿಂದ, ಪರಮಾತ್ಮನ ಲೀಲಾ ವಿಭೂತಿ ಜ್ಞಾನ ವುಂಟಾಗಿ, ಆಸ್ತಿಕ್ಯ ವೃದ್ಧಿಯಾಗುವುದೆಂದು ಹೇಳಿದ್ದೇನೆ. ಇದನ್ನು ಮುಗಿಸಿ ಬಂದ ಮೇಲೆ, ಗೃಹಸ್ಥಾಶ್ರಮ ಸ್ವೀಕಾರ ಯೋಗ್ಯತೆ ಬರುವುದೆಂಬ ಆಸೆ ಹುಟ್ಟಿಸಿದ್ದೇನೆ. ಅದರಂತೆ ಗೌತಮನು ನಿನ್ನೆಯೇ ಪ್ರವಾಸ ಪ್ರಾರಂಭಿಸಿದ್ದಾನೆ. ಶ್ರೀರಂಗ ರಾಜಾ! ನಿಮ್ಮ ಕುಲದೇವರಾದ ಶ್ರೀರಂಗ ನಾಥಸ್ವಾಮಿಯು, ಎಲ್ಲರಿಗೂ ಸದ್ಬುದ್ಧಿಯನ್ನುಂಟುಮಾಡಿ, ರಾಜ ಸಂತತಿ ಬೆಳೆಯುವಂತೆ ಕರುಣಿಸಲೆಂಬುದೇ ನನ್ನ ಪ್ರಾರ್ಥನೆ ಆಗಿದೆ' ಎಂದು ಹೇಳಿ ಅಗಸ್ತ್ಯರು ಆಶ್ರಮದ ಕಡೆ ಹೊರಟರು.

——:——

ತೀರ್ಥಯಾತ್ರೆ

ಗೌತಮ, ಉದಂಕ ಇಬ್ಬರೂ ಗುರುದೇವನ ಅಪ್ಪಣೆ ಪಡೆದು ಕಾವೇರಿ ತೀರದಲ್ಲಿ ಪಶ್ಚಿಮ ಮುಖವಾಗಿ ಹೊರಟರು. ಒಂದೆರಡು ಹರಿದಾರಿ ನಡೆದ ಮೇಲೆ, ತಂಗಲು ಅನುಕೂಲವಾದ ಆಶ್ರಮವೊಂದು ಸಿಕ್ಕಿತು. ಇಬ್ಬರೂ ನದಿಯಲ್ಲಿ ಇಳಿದು ಸಂಧ್ಯಾದಿಗಳನ್ನು ಮುಗಿಸಿ, ಕಂದ ಮೂಲಫಲಗಳನ್ನು ತಿಂದು, ಆಶ್ರಮದಲ್ಲಿ ವಿಶ್ರಮಿಸಿಕೊಂಡರು.

ಆಶ್ರಮವು ಬಹು ಮನೋಹರ ಸನ್ನಿವೇಶದಲ್ಲಿತ್ತು. ಅಂದವಾದ ವನ. ಒಂದು ಕಡೆ ದೇವದಾರು, ಶ್ರೀಗಂಧ, ಬಿಲ್ವಾದಿಮರಗಳ ಗುಂಪು; ಇನ್ನೊಂದು ಕಡೆ ಜಾಜಿ, ಮಲ್ಲೆ, ಬಕುಲ, ಕೇದಗೆ, ಗುಲಾಬಿ ಹೂವುಗಳಿಂದ ತುಂಬಿದ ತರುಲತೆ. ಮತ್ತೊಂದು ಕಡೆ ಬಣ್ಣಬಣ್ಣದ ಕಾಡು ಹೂವಿನ ಲತೆ ಗಳಿಗೆ ಆಶ್ರಯವಿತ್ತಿರುವ ಗಿಡಗಳು. ಸುಗಂಧದಿಂದ ಕೂಡಿದ ತಂಗಾಳಿ ಇವೆಲ್ಲ ವನಲಕ್ಷ್ಮಿಯ ಸೊಬಗನ್ನು ಹೆಚ್ಚಿಸುತ್ತಿತ್ತು. ಅಲ್ಲಲ್ಲಿ ದೊಡ್ಡ ದೊಡ್ಡ ಬಂಡೆ ಗಳಿದ್ದುದರಿಂದ, ಪ್ರವಾಹದ ಸದ್ದು ಕೇಳುತ್ತಿತ್ತು. ಸ್ವಲ್ಪ ದೂರದಲ್ಲಿ ಒಂದು ಸಣ್ಣ ಜಲಪಾತವಿದ್ದುದರಿಂದ, ಅದರ ಶಬ್ದವೂ ಇದರೊಡನೆ ಸೇರಿಕೊಂಡು, ಭೋರ್ಗರೆಯುವ ಸದ್ದು ಕೇಳಿಬರುತ್ತಿತ್ತು.

ಇಂತಹ ಪ್ರಶಾಂತಮಯ ಪ್ರಕೃತಿ ವಾತಾವರಣದಲ್ಲಿ ಇಬ್ಬರು ತಪಸ್ವಿಗಳು, ನದಿಯ ದಡದ ಬಂಡೆಯೊಂದರ ಮೇಲೆ ಕುಳಿತಿದ್ದರು. ಅವರ ಮುಂದೆ ಬಣ್ಣ ಬಣ್ಣದ ಮತ್ಸ್ಯಗಳು ನದಿಯ ನೀರಿನಲ್ಲಿ ಪುಣಕ್ಕನೆ ಮೇಲಕ್ಕೆ ಹಾರಿ, ಪುನಃ ಮುಳುಗುತ್ತಿದ್ದವು. ಸಮಯ ಬಂದಾಗ ಇವನ್ನು ಹಿಡಿಯುವುದಕ್ಕೆ, ಬಕಗಳು ಕಾತುರದಿಂದ ಅಲ್ಲಲ್ಲಿ ಬಂಡೆಗಳ ಮೇಲೆಕುಳಿತಿದ್ದುವು. ಹತ್ತಿರದ ಮರಗಳ ಮೇಲೆ ಮಯೂರಗಳು ಕುಳಿತು ಕೇಕೇ ಹಾಕುತ್ತಿದ್ದವು. ಇವನ್ನೆಲ್ಲಾ ತಪಸ್ವಿಗಳಿಬ್ಬರು ನೋಡಿ ಆನಂದಪಡುತ್ತಿದ್ದರು.

'ಉದಂಕಾ! ಎಷ್ಟು ಆನಂದದಾಯಕ ಸ್ಥಳವಿದು. ಪ್ರಕೃತಿದೇವಿಯ ಸಂಪತ್ತಿನ ಸೌಭಾಗ್ಯ ನಮಗಿಲ್ಲಿ ದೊರೆತಿರುವುದು ಪುಣ್ಯ. ಇದನ್ನು ಅನುಭವಿಸುವ ಮನೋಭಾವನೆ ನಮ್ಮಲ್ಲಿ ಮೂಡುತ್ತಿರುವುದಕ್ಕೆ ಮುಖ್ಯ ಕಾರಣ ನಮ್ಮ ಗುರುಗಳ ಆಶೀರ್ವಾದವಲ್ಲವೇ? ಇಂತಹ ಅವಕಾಶವುಂಟುಮಾಡಿರುವ ಕಾವೇರಿ ಮಹಾತಾಯಿಗೆ ನಾವು ಎಷ್ಟು ಕೃತಜ್ಞರಾಗಿದ್ದರೂ ಸಾಲದು.' ಎಂದು ಗೌತಮನು ಹೇಳಿದನು.

'ಗೌತಮಾ! ನೀನು ಹೇಳಿದುದು ನಿಜ. ಬರೀ ಕೃತಜ್ಞತೆ ಅರ್ಪಿಸಿದರೆ ಸಾಲದು. ನಾವು ಕಾವೇರಿಯಲ್ಲಿ ಮಿಂದು ಶುದ್ಧರಾಗಿ, ಅವಳ ಪೂಜೆ ಮಾಡಿ ನಮಸ್ಕರಿಸೋಣ. ಈ ಪುಣ್ಯನದಿಯ ಉತ್ಪತ್ತಿ ಎಲ್ಲಿ? ಇದರ ಮಹಿಮೆ ಏನು ಎಂಬುದನ್ನು ದಯವಿಟ್ಟು ತಿಳಿಸುವೆಯಾ' ಎಂದು ಉದಂಕನು ಕೇಳಿದನು.

'ಆಗತ್ಯವಾಗಿ ಹೇಳುತ್ತೇನೆ. ಕಾವೇರಿಯು ಮೊದಲು ವಿಷ್ಣುವಿನ ವರದಿಂದ ಬ್ರಹ್ಮನ ಮಗಳಾಗಿ ಹುಟ್ಟಿದಳು. ಅಗಸ್ತ್ಯ ಮಹಾಮುನಿಯನ್ನು ವರಿಸಬೇಕೆಂದು ಇಷ್ಟಪಟ್ಟು ಬ್ರಹ್ಮನಲ್ಲಿ ಮೊರೆ ಇಟ್ಟಳು. ಕಾವೇರ ಮುನಿಗೆ ಮಗಳಾಗಿ ಅವತರಿಸುವಂತೆ ತಂದೆಯು ವರಕೊಟ್ಟನು. ಹಾಗೆಯೇ ಆಗಿ ಕಾವೇರಮುನಿಯ ಆಶ್ರಮದಲ್ಲಿ ತಂದೆಯ ಉಪಚಾರದಲ್ಲಿ ತೊಡಗಿ, ಅವನ ಕಷ್ಟಪರಂಪರೆಗಳನ್ನು ಕಂಡು ಅವಳು ಮರುಗಿದಳು. ಮಾನವನು ತನ್ನ ಪಾಪವನ್ನು ಕಳೆಯುವ ಕಾರ್ಯಕ್ಕಿಂತ ಉತ್ತಮವಾದುದು ಇನ್ನೊಂದಿಲ್ಲವೆಂದು ಅವಳ ಮನಸ್ಸಿಗೆ ಹೊಳೆಯಿತು. ಈ ಕಾರ್ಯವನ್ನು ತಾನು ಯಶಸ್ವಿಯಾಗಿ ನಿರ್ವಹಿಸಬೇಕಾದರೆ, ತಾನು ನದಿಯಾಗಿ ಹುಟ್ಟಬೇಕೆಂದು ಇಚ್ಛಿಸಿ, ಬ್ರಹ್ಮ

ಸಲ್ಲಿ ಮೊರೆ ಇಟ್ಟಳು. ಅವನು ಹಾಗೆಯೇ ಆಗುವಂತೆ ಕರುಣಿಸಿದನು. ಇಂತಹ ಪರಮ ಪವಿತ್ರಳಾದ ಕಾವೇರಿಯೇ ಇದು.

ಉದಂಕಾ! ಕಾವೇರಿಯು ಶ್ರೀರಂಗರಾಷ್ಟ್ರದ ಸರ್ವಸ್ವ. ಇವಳನ್ನು ದಕ್ಷಿಣ, ಗಂಗೆ ಎಂದು ಜನರು ಪೂಜಿಸುವರು. ಇವಳ ಕರುಣೆಯಿಂದ, ಉದ್ದಕ್ಕೂ, ಕೃಷಿಕ್ಷೇತ್ರಗಳು ಅಭಿವೃದ್ಧಿ ಹೊಂದುತ್ತಿವೆ. ಫಲವೃಕ್ಷಾದಿಗಳಿಂದ ತುಂಬಿದ ತೋಟಗಳು ಕಂಗೊಳಿಸುತ್ತಿವೆ. ಸಹ್ಯಾದ್ರಿ ಪರ್ವತದಲ್ಲಿ ತಲಕಾವೇರಿ ಎಂಬ ಸ್ಥಳವೇ ಇವಳ ಉತ್ಪತ್ತಿ ಸ್ಥಾನ. ಅಲ್ಲಿಂದ, ಉತ್ತರ, ದಕ್ಷಿಣ, ಪಶ್ಚಿಮ ದಿಕ್ಕುಗಳಿಗೆ, ಡೊಂಕು ಡೊಂಕಾಗಿ ಹರಿದು, ಇಲ್ಲಿಯವರೆಗೂ ಬಂದಿದ್ದಾಳೆ. ಇಲ್ಲಿಂದ ಸ್ವಲ್ಪ ಮುಂದೆ ಹೋದರೆ, ಹೇಮಾವತಿ ಇದಕ್ಕೆ ಬಂದು ಸೇರುತ್ತದೆ. ಅಲ್ಲಿಂದ ಮುಂದೆ ಸ್ವಲ್ಪ ದೂರದಲ್ಲಿ ಲಕ್ಷ್ಮಣತೀರ್ಥವೂ ಸೇರುತ್ತದೆ. ಈ ಎರಡು ಉಪನದಿಗಳನ್ನೊಳಗೊಂಡು, ದೊಡ್ಡವಳಾಗಿ, ನಮ್ಮ ಆಶ್ರಮದ ಹತ್ತಿರಕ್ಕೆ ಹರಿದು ಬರುತ್ತಾಳೆ. ಅಲ್ಲಿ ಎರಡು ಭಾಗವಾಗಿ, ಶ್ರೀರಂಗಪುರದ ಉತ್ತರ ದಕ್ಷಿಣಕ್ಕೆ ಹರಿದು, ಅದನ್ನು ದ್ವೀಪವನ್ನಾಗಿ ಮಾಡಿ, ಮುಂದೆ ಕರೀಘಟ್ಟದ ಹತ್ತಿರ ಪುನಃ ಎರಡು ಶಾಖೆಗಳು ಸೇರಿಕೊಳ್ಳುತ್ತವೆ. ಇದು ಭಾಗವಾಗುವ ಸ್ಥಳದಲ್ಲಿ ಶ್ರೀರಂಗನಾಥನ ವಿಗ್ರಹವನ್ನು ನಮ್ಮ ಗುರುಗಳು ಪ್ರತಿಷ್ಠಿಸಿದ್ದಾರೆ. ಇದೇ ಅಲ್ಲವೇ ಶ್ರೀರಂಗರಾಜನ ಕುಲದೈವ.

ಕಾವೇರಿಯು ಎರಡು ಶಾಖೆಗಳು ಸೇರಿದ ಮೇಲೆ ಅದರ ಪಾತ್ರ ಇನ್ನೂ ವಿಸ್ತಾರವಾಗಿದೆ. ನರಸಿಂಹಪುರದ ಹತ್ತಿರಕ್ಕೆ ಬರುವ ವೇಳೆಗೆ, ಕಪಿಲಾನದಿ ಇದಕ್ಕೆ ಸೇರುವುದು. ಅಲ್ಲಿಂದ ಮುಂದೆ ಪೂರ್ವ ವಾಹಿನಿಯಾಗಿ ಹರಿದು ತಲಕಾಡಿನ ಹತ್ತಿರಕ್ಕೆ ಬರುವುದು. ಅಲ್ಲಿ ಸುವರ್ಣಾವತಿ ಸೇರುವುದು. ಶಿವನ ಸಮುದ್ರದ ಹತ್ತಿರ ಪುನಃ ಇಬ್ಭಾಗವಾಗುವುದು. ಇಲ್ಲಿ ಇನ್ನೊಂದು ದ್ವೀಪ. ಇಲ್ಲಿಯೂ ಶ್ರರಂಗನಾಥನ ವಿಗ್ರಹ ಪ್ರತಿಷ್ಠಿತವಾಗಿದೆ. ಅಂದವಾದ ದೇವಾಲಯವಿದೆ. ಸ್ವಲ್ಪ ಮುಂದೆ ಎರಡು ಭಾಗಗಳೂ ಒಂದಾಗಿ ಸೇರಿ, ಮುನ್ನೂರು ಅಡಿ ಕೆಳಕ್ಕೆ ಧುಮುಕಿ ಜಲಪಾತವಾಗುವುದು. ಇಲ್ಲಿ ಷಿಂಷಾ, ಅರ್ಕಾವತಿ ಎಂಬ ಉಪನದಿಗಳು ಸೇರಿಕೊಳ್ಳುವುವು. ಅಲ್ಲಿಂದ ಮುಂದೆ ಭವಾನಿ, ಶ್ರೀರಂಗ, ಕೊಲ್ಲಡ ಮಾರ್ಗವಾಗಿ ಹರಿದು, ಸಾಗರವನ್ನು ಸೇರು

ವುದು. ಶ್ರೀರಂಗದ ಹತ್ತಿರ ಕಾವೇರಿಯು ಪುನಃ ಎರಡು ಭಾಗವಾಗಿ ಹರಿದು, ಶ್ರೀರಂಗವನ್ನೂ ದ್ವೀಪವನ್ನಾಗಿ ಮಾಡಿದೆ. ಇಲ್ಲಿಯೂ ಶ್ರೀರಂಗನಾಥ ದೇವರ ದೇವಾಲಯುವಿದೆ. ಹೀಗೆ ಆದಿರಂಗ, ಮಧ್ಯರಂಗ, ಅಂತ್ಯ ರಂಗ ಎಂಬ ಮೂರು ರಂಗನಾಥ ದೇವಾಲಯುಗಳನ್ನೊಳಗೊಂಡ ಮೂರು ದ್ವೀಪಗಳನ್ನು ಕಾವೇರಿ ನಿರ್ಮಿಸಿದೆ.

ಉದಂಕಾ! ಕಾವೇರಿ ಜೀವನದಿ. ಇದರ ದಡದಲ್ಲಿ ಉದ್ಯಾನಗಳು, ಉತ್ತಮ ಉಪವನಗಳು, ಋಷ್ಯಾಶ್ರಮಗಳು, ಕೃಷಿಕ್ಷೇತ್ರಗಳು, ಪವಿತ್ರ ತೀರ್ಥಗಳು, ಸುಂದರವಾದ ದೇವಾಲಯುಗಳೂ ಇವೆ. ಇಂದು ಜನರು ಇದರಿಂದ ಪಡೆಯುತ್ತಿರುವ ಪ್ರಯೋಜನಕ್ಕಿಂತ ಇನ್ನೂ ನೂರ್ಮಡಿಯಾಗಿ ಪಡೆಯುವ ಅವಕಾಶವಿದೆ. ಮಾನವನ ಬುದ್ಧಿ ಶಕ್ತಿ ಬೆಳೆದಂತೆಲ್ಲಾ, ನಾನಾ ಬಗೆಯ ಉದ್ಧಾರ ಕಾರ್ಯಗಳಿಗೆ ಈ ನದಿಯನ್ನು ಉಪಯೋಗಿಸಿಕೊಳ್ಳ ಬಹುದು—ಎಂದು ಗೌತಮನು ಹೇಳಿದನು.

'ಗೌತಮಾ! ಕಾವೇರಿ ಮಹಾತ್ಮೆಯನ್ನೂ ಕೇಳಿ ಆನಂದವಾಯಿತು. ಅಗೋ ಸೂರ್ಯನಾರಾಯಣನು ಉದಯಿಸುವ ಸೂಚನೆ ಕಾಣಬರುತ್ತಿದೆ. ಸಕಾಲದಲ್ಲಿ ನಾವು ಮಿಂದು, ಸೂರ್ಯದೇವನಿಗೆ ಅರ್ಘ್ಯ ಕೊಡೋಣ' ಎಂದು ಉದಂಕ ಎಚ್ಚರಿಸಿದನು.

ಗೌತಮನ ಮನಸ್ಸು ಶಾಂತಿಪರಿಸ್ಥಿತಿಗೆ ಬರುತ್ತಿತ್ತು. ಅಹಲ್ಯೆಯ ವಿರಹತಾಪ ಕಡಿಮೆಯಾಗುತ್ತಿತ್ತು. ಆಶ್ರಮದಿಂದ ಹೊರಡುವಾಗ ಇದ್ದ ಸ್ಥಿತಿಗೂ ಅಂದಿನಸ್ಥಿತಿಗೂ ಎಷ್ಟೊ ವ್ಯತ್ಯಾಸವಾಗಿತ್ತು. ಕಾವೇರಿ ಜಲ ಪ್ರಾಶನವೂ, ವನಗಿರಿ ಕಂದದ ನಿವಾಸವೂ, ಅವನ ಮನಸ್ಸಿನ ಚಾಂಚಲ್ಯ ವನ್ನು ಕಡಿಮೆಮಾಡಿದ್ದುವು. ಮುನಿಕುಮಾರರಿಬ್ಬರೂ, ಪ್ರಾತರಾಹ್ನಿಕ ಗಳನ್ನು ಮುಗಿಸಿ, ಪ್ರವಾಸದ ಉಪಕರಣಗಳನ್ನು ತೆಗೆದುಕೊಂಡು, ಮುಂದೆ ಮಹಾರಣ್ಯದ ಮಧ್ಯೆ ನಡೆಯುತ್ತ ಹೋದರು.

——:——

ತುಂಗಾಪಾನ

ದಂಡಕಾರಣ್ಯದ ಅದ್ಭುತ ಪ್ರಕೃತಿ ರೂಪರಾಶಿಯ ಮಧ್ಯೆ ನಡೆದು ಹೋಗುತ್ತಿರುವಾಗ, 'ಅಹಲ್ಯೆ ಇದ್ದಿದ್ದರೆ ಇದನ್ನೆಲ್ಲಾ ನೋಡಿ ಎಷ್ಟು ಆನಂದಪಡುತ್ತಿದ್ದಳೋ' ಎಂದು ಗೌತಮನು ಯೋಚಿಸಿದನು. ಕೂಡಲೆ 'ಛೆ! ನಾನೇಕೆ ಇದನ್ನು ಜ್ಞಾಪಿಸಿಕೊಂಡೆ, ಇದನ್ನು ಮರೆಯುವುದಕ್ಕಲ್ಲವೇ, ಗುರುದೇವನು ನನ್ನನ್ನು ಪ್ರವಾಸ ಕೈಗೊಳ್ಳುವಂತೆ ಅಪ್ಪಣೆ ಇತ್ತುದು. 'ವತ್ಸಾ! ಗೌತಮಾ, ನಿನ್ನ ತೀರ್ಥಯಾತ್ರೆಯ ಕಾಲದಲ್ಲಿ ಒಬ್ಬ ಮಹಾತ್ಮರ ದರ್ಶನಲಾಭವಾಗುವುದು. ಅವರ ಆಶೀರ್ವಾದ ಪಡೆದು ಬಾ ನಿನಗೆಲ್ಲಾ ಮಂಗಳವಾಗುವುದು' ಎಂದು ಗುರುದೇವನು ಅಪ್ಪಣೆ ಇತ್ತಿಲ್ಲವೇ? ನನ್ನ ಯತ್ನವನ್ನೂ ಮೀರಿ, ಈ ಹಾಳು ಚಂಚಲ ಮನಸ್ಸು ನನ್ನನ್ನು ಪೀಡಿಸಿತು. ಇನ್ನು ಮುಂದೆ ಎಚ್ಚರಿಕೆಯಿಂದಿರಲೇಬೇಕು' ಎಂದು ಹೇಳಿಕೊಂಡು ಮುಂದೆ ನಡೆದನು.

ಅವನ ಹಿಂದೆ ಸ್ವಲ್ಪ ದೂರದಲ್ಲಿ ಉದಂಕನು ಬರುತ್ತಿದ್ದನು. ಅವನಿಗೆ ಇದೊಂದೂ ತಿಳಿಯದು. ಹೀಗೆ ತಪಸ್ವಿಗಳಿಬ್ಬರೂ ದಟ್ಟವಾದ ಕಾಡಿನಲ್ಲಿ ಸಣ್ಣ ಕಾಲುದಾರಿಯೊಂದರಲ್ಲಿ ಒಬ್ಬರ ಹಿಂದೆ ಇನ್ನೊಬ್ಬರು ನಡೆದು ಬರುತ್ತಿದ್ದರು. ಸುತ್ತಲೂ ಪರ್ವತ ಪಂಗ್ತಿಗಳು ಕಾಣುತ್ತಿದ್ದವು. ಮುಗಿಲು ಮುಟ್ಟುವಷ್ಟು ಎತ್ತರವಾದ ತೇಗ, ಹೊನ್ನೆ, ಬೀಟೆ ಮರಗಳು ಉದ್ದಕ್ಕೂ ಇದ್ದುವು. ದಾರಿಯಲ್ಲಿ ನೆರಳು ಇದ್ದುದರಿಂದ, ಬಿಸಿಲಿನ ತಾಪ ಕಾಣುತ್ತಿರಲಿಲ್ಲ. ತಂಗಾಳಿ ಬೀಸುತ್ತಿತ್ತು. ಹಳ್ಳ ತಿಟ್ಟಾದ ದಾರಿಯಲ್ಲಿ ಇಳಿದು ಹತ್ತುತ್ತಾ, ಬಹು ದೂರ ಪ್ರಯಾಣ ಮಾಡುವುದು. ದಾರಿಯಲ್ಲಿ ಸಾಯಂಕಾಲ ಸಮಯಕ್ಕೆ, ಯಾವುದಾದರೊಂದು ಆಶ್ರಮವು ದೊರಕಿದರೆ ಅಲ್ಲಿ ತಂಗಿದ್ದು, ವಿಶ್ರಮಿಸಿಕೊಂಡು ಪಂಚ ಉಷಃಕಾಲಕ್ಕೆ ಎದ್ದು ಆಹ್ನಿಕಗಳನ್ನು ಮುಗಿಸಿ ಮುಂದೆ ಪ್ರಯಾಣ ಮಾಡುವುದು. ಹೀಗೆ ಕೆಲವು ಕಾಲ ನಡೆದು. ಶೃಂಗ ಪರ್ವತದ ತಪ್ಪಲಿನ ಹತ್ತಿರಕ್ಕೆ ಬಂದರು.

ಅಲ್ಲಿ ತುಂಗಾನದಿ ಶಾಂತವಾಗಿ ಹರಿಯುತ್ತಿತ್ತು. ನದಿಯ ಪಕ್ಕದಲ್ಲಿ

ಒಂದು ಕಡೆ ದೇವದಾರು, ಧೂಪ, ತಾಳೆಮರಗಳೂ, ಇನ್ನೊಂದು ಪಕ್ಕದಲ್ಲಿ ವಿಸ್ತಾರವಾದ ಕೃಷಿಕ್ಷೇತ್ರಗಳು ಇದ್ದುವು. ಅದರ ಹಿಂದೆ ಸ್ವಲ್ಪ ದೂರದಲ್ಲಿ ಪರ್ವತ ಶ್ರೇಣಿಯೊಂದು ಕಾಣಿಸುತ್ತಿತ್ತು. ಅದರ ಶಿಖರಗಳು ಒಂದನ್ನೊಂದು ಮೀರಿಸಿ, ಬೆಳೆದು ಸ್ಪರ್ಧೆ ಸೂಚಿಸುವಂತಿದ್ದುವು. ಇಂತಹ ವನಶ್ರೀಯ ಮಡಿಲಲ್ಲಿ ಯಾರಿಗೆ ತಾನೆ ಮನಸ್ಸಮಾಧಾನವಾಗ ಲಿಕ್ಕಿಲ್ಲ? ಮುನಿಕುಮಾರರಿಬ್ಬರೂ ಇದನ್ನೆಲ್ಲಾ ಸಂತೋಷದಿಂದ ನೋಡುತ್ತಾ ಮುಂದೆ ಬರುತ್ತಿರುವಾಗ ಹತ್ತಿರದಲ್ಲಿ ಒಂದು ಋಷ್ಯಾಶ್ರಮ ಕಾಣಿಸಿತು. ಅದೇ ವಿಭಾಂಡಕ ಮಹಾಮುನಿಯ ಆಶ್ರಮ. ಅಲ್ಲಿದ್ದ ಒಂದು ಕುಟೀರದಲ್ಲಿ ಇವರು ತಂಗಿದರು.

ಎದುರಿಗೆ ಶಾಂತಮಯಿ ತುಂಗೆ. ಅದರಿಂದಾಚೆಗೆ ರಮ್ಯವಾದ ವನಗಿರಿ ವೃಕ್ಷ ತರುಲತೆಗಳ ರಾಶಿ. ಇವುಗಳ ಪ್ರತಿಬಿಂಬವು ನದೀ ನೀರಿನಲ್ಲಿ ಬಿದ್ದು ಅತ್ಯಂತ ಮನೋಹರವಾದ ನೋಟವುಂಟುಮಾಡುತ್ತಿತ್ತು. ಅಲ್ಲಲ್ಲಿ ಹಂಸಪಕ್ಷಿಗಳು ಜತೆಜತೆಯಾಗಿ ನದಿಯಲ್ಲಿ ಕ್ರೀಡಿಸುತ್ತಿದ್ದುವು. ಅವುಗಳ ಶುಭ್ರವಾದ ಬೆಳ್ಳಿಯಂತಹ ಮೈ ಬೆಳಗುತ್ತಿತ್ತು. ಕೆಂಪಾದ ಕೊಕ್ಕೂ, ಗುಲಗಂಜಿಯಂತಿರುವ ಕಣ್ಣುಗಳೂ, ಅಂದವನ್ನು ಹೆಚ್ಚಿಸುತ್ತಿದ್ದವು.

ಉದಂಕ—ಗೌತಮಾ! ನೈಯ್ಯಾಯಿಕರಾದ ನೀವು ಹಂಸಕ್ಷೀರ ನ್ಯಾಯ ದಲ್ಲಿ ಹೇಳುವ ಹಂಸಗಳು ಇವೆಯೋ?

ಗೌತಮ—ಹೌದು. ಇವೇ ಆ ಹಂಸಪಕ್ಷಿಗಳು.

ಉದಂಕ—ಪಕ್ಷಿಗಳೇ ಅಲ್ಲದೆ, ಇಲ್ಲಿ ಬೇಕಾದಷ್ಟು ಸಾಧುಪ್ರಾಣಿಗಳ ತಂಡವಿವೆ. ಅಗೋ ನೋಡು, ಆ ದೇವದಾರು ವೃಕ್ಷದ ನೆರಳಿನಲ್ಲಿ ಮಲಗಿರುವ ಹಸುಗಳ ಗುಂಪು ಎಷ್ಟು ರಮ್ಯವಾಗಿ ಕಾಣುತ್ತಿದೆ ಎದುರಿಗೆ ಆ ಬೈಲಿನಲ್ಲಿ ಜಿಂಕೆಗಳ ತಂಡವೊಂದು ನಿರ್ಭಯವಾಗಿ ಗರಿಕೆ ಮೇಯುತ್ತಿದೆ ನೋಡು? ಬಿಳಿಯ ಮೊಲಗಳು ಹೇಗೆ ಓಡಾಡುತ್ತಿವೆ ನೋಡಿದೆಯಾ! ಇವೆಲ್ಲ ನಿರುಪದ್ರವ ಪ್ರಾಣಿಗಳು. ಸೃಷ್ಟಿ ದೇವನಿಗೆ ಮೂಲಸ್ಥಾನವಾಗಿರುವ ಈ ಆಶ್ರಮ ಯಾರದು? ನಮ್ಮ ಮನಸ್ಸು ಆತ್ಮ, ಎಲ್ಲವನ್ನ ಆನಂದ ಸಾಗರ ದಲ್ಲಿ ಮುಳುಗಿಸುತ್ತಿರುವ, ಈ ಪ್ರದೇಶ ಯಾರ ಅಧೀನದಲ್ಲಿದೆ?

ಗೌತಮ—ಉದಂಕಾ! ಇದು ವಿಭಾಂಡಕ ಋಷಿಗಳ ತಪೋವನ.

ಇವರು ಮಹಾತಪಸ್ವಿಗಳು. ಅವರ ಪ್ರಭಾವದಿಂದ. ಈ ಆಶ್ರಮ ಇಷ್ಟು ರಮ್ಯ ವಾಗಿರುವುದು ಇಷ್ಟು ಶಾಂತಿಮಯವಾಗಿರುವುದು. ಪ್ರಸಿದ್ಧರಾದ ಋಷ್ಯ ಶೃಂಗರ ಹೆಸರನ್ನು ನೀನು ಕೇಳಿಲ್ಲವೇ? ಅವರು ವಿಭಾಂಡಕರ ಪುತ್ರರು. ಅಗೋ ನೋಡು, ಎದುರಿಗೆ ಕಾಣುತ್ತಿರುವ ಪರ್ವತವೇ, ಋಷ್ಯಶೃಂಗ ಪರ್ವತ ಆ ಶೃಂಗದ ಬುಡದಲ್ಲಿರುವ ಗ್ರಾಮವೇ ಶೃಂಗಗಿರಿ. ಅಥವಾ ಶೃಂಗೇರಿ. ಋಷ್ಯಶೃಂಗರ ಅವತಾರ ವಿಚಿತ್ರ ರೀತಿಯದು. ನೀನು ಕೇಳಿಲ್ಲವೇ?

ಉಗಂಕ—ಇಲ್ಲ. ನಾನು ಕೇಳಿಲ್ಲ ಗೌತಮಾ; ದಯವಿಟ್ಟು ತಿಳಿಸುವೆಯಾ?

ಗೌತಮ—ಒಂದು ದಿನ ವಿಭಾಂಡಕ ಮುನಿಯು ಎಂದಿನಂತೆ ತುಂಗಾ ನದಿಯಲ್ಲಿ ಇಳಿದು ಸ್ನಾನವಮಾಡುತ್ತಿರುವಾಗ, ಕೆಲವು ಅಪ್ಸರ ಸ್ತ್ರೀಯರು ಅದೇ ಕಾಲದಲ್ಲಿ ಜಲಕ್ರೀಡಾ ವಿಹಾರಾರ್ಥವಾಗಿ ನದಿಯಲ್ಲಿ ಇಳಿದರು. ವಿಭಾಂಡಕರಿ ನವುಗನ್ನು ಅವರು ಗಮನಿಸಲಿಲ್ಲ. ಅವರ ವಿಹಾರದ ದೃಶ್ಯ ಮುನಿಗೆ ಕಾಣಿಸಿತು. ಇದನ್ನು ನೋಡಿದ ಕೂಡಲೆ, ಮುನಿಗೆ ಮನೋ ವಿಕಾರವುಂಟಾಗಿ ವೀರ್ಯ ನಷ್ಟವಾಯಿತು. ಅವರು ಎಚ್ಚತ್ತು ಸ್ನಾನಾದಿ ಗಳನ್ನು ಮುಗಿಸಿ. ಆಶ್ರಮಕ್ಕೆ ತೆರಳಿದರು. ಆಗ ಆಶ್ರಮದ ಹೆಣ್ಣುಜಿಂಕೆ ಯೊಂದು ನೀರು ಕುಡಿಯಲು ಅದೇ ಸ್ಥಳಕ್ಕೆ ಬಂದು, ನದಿಯಲ್ಲಿ ನೀರು ಕುಡಿಯುತ್ತಿರುವಾಗ ವೀರ್ಯವನ್ನೂ ಕುಡಿಯಿತು. ಅನಂತರ ಅದು ಗರ್ಭ ಧಾರಣೆ ಮಾಡಿ, ಸಕಾಲದಲ್ಲಿ ಶೃಂಗದಿಂದ ಕೂಡಿದ ಒಂದು ಮಗುವನ್ನೀ ಪ ಯಿತು. ಆಶ್ರಮವಾಸಿಗಳೆಲ್ಲಾ ಇದನ್ನು ಕಂಡು ಆಶ್ಚರ್ಯಪಟ್ಟರು. ವಿಭಾಂಡಕರು ಇದನ್ನೆಲ್ಲಾ ತಮ್ಮ ಜ್ಞಾನ ದೃಷ್ಟಿಯಿಂದ ತಿಳಿದು, ಆ ಮಗು ವನ್ನು ಆಶ್ರಮದಲ್ಲಿಟ್ಟುಕೊಂಡು ತಾವೇ ಬಹು ಪ್ರೀತಿಯಿಂದ ಪೋಷಿಸಿದರು.

ಹೀಗೆ ದಿನೇ ದಿನೇ ಬೆಳೆದು ಪ್ರವರ್ಧಮಾನಕ್ಕೆ ಬರುತ್ತಿದ್ದ ಋಷ್ಯ ಶೃಂಗರಿಗೆ, ವೇದ. ವೇದಾಂತ. ತರ್ಕ. ಮೀಮಾಂಸಾದಿ ಸಕಲ ಶಾಸ್ತ್ರ ಗಳನ್ನು ವಿಭಾಂಡಕರೇ ಹೇಳಿಕೊಟ್ಟು ವಿದ್ಯಾಪಾರಂಗತರನ್ನಾಗಿ ಮಾಡಿದರು. ರಾತ್ರಿ ಕಾಲದಲ್ಲಿ ಜ್ಯೋತಿಷ್ಯವನ್ನು ಹೇಳಿಕೊಡುತ್ತಾ, ಗಗನದಲ್ಲಿ ಕಾಣು ತ್ತಿದ್ದ ಅಶ್ವಿನ್ಯಾದಿ ನಕ್ಷತ್ರಗಳ ಪರಿಚಯ ಮಾಡಿಕೊಟ್ಟರು. ಗುರು ಶುಕ್ರಾದಿಗಳ ಗ್ರಹಸ್ಥಾನವನ್ನೂ, ಮೇಷಾದಿ ರಾಶಿಗಳನ್ನು ಕಂಡುಹಿಡಿಯುವ

ಕ್ರಮವನ್ನೂ ಹೇಳಿಕೊಟ್ಟರು. ತಾಯಿ ಇಲ್ಲದೆ ಹುಟ್ಟಿದ ಋಷ್ಯಶೃಂಗರ ಪಾಲನೆ ಪೋಷಣೆಯೆಲ್ಲಾ ವಿಭಾಂಡಕರ ಮೇಲೆ ಬಿದ್ದುದರಿಂದ, ಅವರಿಗೆ ಕುಮಾರನಲ್ಲಿ ವಿಶೇಷ ಪ್ರೀತಿ ಇತ್ತು. ಅವನನ್ನು ಒಂದು ಅರೆಕ್ಷಣ ಬಿಟ್ಟು ಇರುತ್ತಿರಲಿಲ್ಲ.

ಹೀಗಿರುವಾಗ ಅಂಗ ದೇಶದಲ್ಲಿ ವೀರಕ್ಷಾಮ ತಲೆದೋರಿ, ಪ್ರಜೆಗಳಲ್ಲಿ ಹಾಹಾಕಾರವೆದ್ದಿತು. ಅವರೆಲ್ಲ ರೋಮಪಾದ ರಾಜನಲ್ಲಿ ಹೋಗಿ ಮೊರೆ ಇಟ್ಟರು. ರಾಜನು, ಮಂತ್ರಿಗಳು, ಪುರೋಹಿತರು, ಪ್ರಜಾನಾಯಕರು ಎಲ್ಲರನ್ನೂ ಕರೆಯಿಸಿ, ಮಂತ್ರಾಲೋಚನೆ ನಡೆಯಿಸಿದನು. ಆಗ ಕೆಲವರು, ತೇಜಸ್ವಿಯಾದ ತರುಣತಪಸ್ವಿಯಾದ ಋಷ್ಯಶೃಂಗರನ್ನು ಕರೆಯಿಸಿ ಅವರ ನೇತೃತ್ವದಲ್ಲಿ ಪರ್ಜನ್ಯ ಯಜ್ಞ ಮಾಡಿದರೆ, ರಾಷ್ಟ್ರ ಸುಭಿಕ್ಷವಾಗುವುದೆಂದು ರಾಜನಲ್ಲಿ ಪ್ರಾರ್ಥಿಸಿದರು. ಅವರನ್ನು ಕರೆಸುವುದಕ್ಕೆ ಕೆಲವು ಗಣಿಕಾಸ್ತ್ರೀಯರನ್ನೂ ಕಳುಹಿಸಬೇಕೆಂದು ಮಂತ್ರಿಗಳು ಸಲಹೆ ಇತ್ತರು. ವಿಭಾಂಡಕರು ಆಶ್ರಮದಲ್ಲಿ ಇಲ್ಲದ ಸಮಯ ನೋಡಿ, ಗಣಿಕಾಸ್ತ್ರೀಯರು ಅಲ್ಲಿಗೆ ಬಂದರು.

ಸ್ತ್ರೀಯರ ಮುಖವನ್ನೇ ಕಾಣದ ಋಷ್ಯಶೃಂಗರು, ಗಣಿಕಾಸ್ತ್ರೀಯರ ರೂಪು ಲಾವಣ್ಯಾದಿಗಳನ್ನು ಕಂಡು ಹರ್ಷಿತರಾಗಿ, ಅವರೂ ತಪಸ್ವಿಗಳಿರಬೇಕೆಂದು ಭಾವಿಸಿ, ಅವರಿಗೆ ಅತಿಥಿ ಸತ್ಕಾರ ಮಾಡಿದರು. ಕಂದ ಮೂಲ ಫಲಗಳನ್ನು ಕೊಟ್ಟು, ಅವರು ತಂದಿದ್ದ ರುಚಿಕರವಾದ ಭಕ್ಷ್ಯಗಳನ್ನು ತಿಂದರು. ಅವು ಒಂದು ಬಗೆಯ ಫಲವೆಂದೇ ತರುಣ ತಪಸ್ವಿ ತಿಳಿದರು. ತಮ್ಮ ಆಶ್ರಮಕ್ಕೆ ಬರಬೇಕೆಂದು ಋಷ್ಯಶೃಂಗರನ್ನು ಗಣಿಕಾಸ್ತ್ರೀಯರು ಕೇಳಲು ಅವರು ಕೂಡಲೇ ಒಪ್ಪಿದರು.

ಮಾರನೆಯ ದಿವಸ ವಿಭಾಂಡಕರು, ಸ್ನಾನಾದಿ ಆಹ್ನಿಕಗಳಿಗೆ ನದಿಗೆ ಹೋಗಿದ್ದ ವೇಳೆಯಲ್ಲಿ, ಋಷ್ಯಶೃಂಗರನ್ನು ಜೊತೆಯಲ್ಲಿ ಕರೆದುಕೊಂಡು ಗಣಿಕಾಸ್ತ್ರೀಯರು ರಾಜಧಾನಿಯ ಕಡೆಗೆ ಬಂದರು. ರಾಜನು ಸಕಲಮರ್ಯಾದೆ ಯೊಡನೆ, ಮುನಿಕುಮಾರನನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ, ಮೆರವಣಿಗೆಯ ಮೂಲಕ ಅರಮನೆಗೆ ಕರೆತಂದನು. ಅವರ ಪೌರೋಹಿತ್ಯದಲ್ಲಿ, ಯಾಗಾದಿ ಕಾರ್ಯವೆಲ್ಲಾ ಸಾಂಗವಾಗಿ ನೆರವೇರಿತು. ಕೂಡಲೆ ಎಲ್ಲೆಲ್ಲೂ ಅತಿವೃಷ್ಟಿಯಾಗಿ, ದೇಶ ಸುಭಿಕ್ಷವಾಯಿತು. ಆಗ ರೋಮಪಾದ ರಾಜನು ತನ್ನ ಮಗಳಾದ

ಶಾಂತಾದೇವಿಯನ್ನು ಋಷ್ಯಶೃಂಗರಿಗೆ ಕೊಟ್ಟು ವಿವಾಹ ಮಾಡಿದನು. ಅಂತಹ ಮಹಾಮಹಿಮರು, ಪುಣ್ಯ ತಪಸ್ವಿಗಳೂ ಆದ ಪುಣ್ಯಾತ್ಮರ ಆಶ್ರಮ ಇದು. ಆದುದರಿಂದಲೇ ನಮಗೆ ಬ್ರಹ್ಮಾನಂದಾನುಭವ ಇಲ್ಲಿ ದೊರೆಯುತ್ತಿದೆ.

ಉದಂಕಾ! ಇದರ ಜೊತೆಗೆ ತುಂಗಾಪಾನ ಬಹು ಆಕರ್ಷಕ. ನಮ್ಮ ಹಿರಿಯರು, 'ಗಂಗಾಸ್ನಾನ, ತುಂಗಾಪಾನ' ಎಂದು ಹೇಳುತ್ತಿದ್ದ ನಾಣ್ನುಡಿಯನ್ನು ಕೇಳಿಲ್ಲವೇ? ತುಂಗಾನದಿಯ ನೀರಿನಷ್ಟು ಪರಿಶುದ್ಧವಾದ, ಹಿತಕರವಾದ ಮತ್ತು ರುಚಿಕರವಾದ ಪಾನೀಯ ಇನ್ನಾವ ನದಿಯಲ್ಲಿಯೂ ದೊರಕುವುದಿಲ್ಲ. ಆದುದರಿಂದ ನಾವು ಇನ್ನೂ ಕೆಲವು ಕಾಲ, ತುಂಗಾಪಾನ ಮಾಡಿಕೊಂಡು ಇಲ್ಲಿಯೇ ಇರೋಣ.

ಉದಂಕ—ಅಗತ್ಯವಾಗಿ ಇರೋಣ, ಗೌತಮಾ! ನೀನು ಹೇಳಿದುದೆಲ್ಲ ಸತ್ಯ. ಆಕಾಶದಲ್ಲಿ ತೇಲುತ್ತಿರುವ ಮೇಘಮಾಲೆ, ಸಂತೋಷದಿಂದ ಹಾರಾಡುತ್ತಿರುವ ಪಕ್ಷಿ ಸಮೂಹ, ಸಮಸ್ತ ವೃಕ್ಷಲತೆಗೈರಿಕಾದಿ ಧಾತುಗಳಿಂದ ತುಂಬಿರುವ ಪರ್ವತ ಶ್ರೇಣಿ-ಇವೆಲ್ಲ ಒಂದು ಬಗೆಯ ಏಕಾಗ್ರತೆಯನ್ನು ಕೊಡುತ್ತವೆ, ಅಲ್ಲವೇ?

ಗೌತಮ—ನೀನು ಹೇಳುವುದು ಸತ್ಯ ಉದಂಕಾ! ಪರಮಪಾವನೆಯಾದ ತುಂಗೆಯಲ್ಲಿ ಮಿಂದು, ಕೆಲವು ಕಾಲ ಇಲ್ಲಿ ವೇದಾಧ್ಯಯನ ಮಾಡುತ್ತಿರೋಣ. ಸುತ್ತಮುತ್ತಲ ಆಶ್ರಮಕ್ಕೆ ಹೋಗಿ, ತಪಸ್ವಿಗಳ ದರ್ಶನಲಾಭ ಪಡೆದು, ಕೃತಕೃತ್ಯರಾಗೋಣ. ಇದರಿಂದ ಉಂಟಾಗಬಹುದಾದ ಬ್ರಹ್ಮಾನಂದ ಪಡೆಯೋಣ.

—:—

ವಿರಹದ ಅಂಕುರ

ಅಹಲ್ಯೆಯು ಗೌತಮನನ್ನು ಕಂಡು ಹಿಂತಿರುಗಿದ ಮೇಲೆ ಆವಳಲ್ಲಿ ಅದ್ಭುತ ಪರಿಣಾಮವುಂಟಾಯಿತು. ರಾತ್ರಿಯಲ್ಲಿ ಕಣ್ಣಿಗೆ ನಿದ್ದೆ ಬರುತ್ತಿರಲಿಲ್ಲ. ಏನೋ ಒಂದು ಬಗೆಯ ಯೋಚನೆ. ಯಾರೊಡನೆಯೂ ಹೆಚ್ಚು ಮಾತನಾಡ್ರ

ವುದಕ್ಕೆ ಇಷ್ಟವಿಲ್ಲ. ಹಂಸತೂಲಿಕಾ ತಲ್ಪದಲ್ಲಿದ್ದರೂ ನಿದ್ದೆ ಹತ್ತದು. ಹೀಗಿರುವಾಗ ಒಂದು ದಿನ ರಾತ್ರಿ ರಾಣೀವಾಸದ ಬಾಗಿಲನ್ನು ತೆಗೆದು ತಾನೊಬ್ಬಳೇ ಆಶ್ರಮದ ಕಡೆ ಹೊರಟಳು. ತಾನು ಮೊದಲು ಎಲ್ಲಿ ಗೌತಮನನ್ನು ನದೀತೀರದಲ್ಲಿ ಕಂಡಿದ್ದಳೋ ಅಲ್ಲಿಗೆ ನೇರವಾಗಿ ಬಂದಿದ್ದಾಳೆ.

ಎಲ್ಲೆಲ್ಲೂ ಬೆಳದಿಂಗಳು ಸ್ವಚ್ಛವಾಗಿದೆ. ಚಂದ್ರನ ಪ್ರತಿಬಿಂಬ ನದಿಯ ತರಂಗಗಳಲ್ಲಿ ಪ್ರತಿಬಿಂಬಿಸಿ ಕುಣಿಯುತ್ತಿದೆ. ಮುಂಜಾನೆಯ ತಂಗಾಳಿ ಮೆಲ್ಲಗೆ ಬೀಸುತ್ತಿದೆ. ಇಂತಹ ಪ್ರಶಾಂತಮಯ ವಾತಾವರಣದಲ್ಲಿ ಅಹಲ್ಯೆಯು ಕಾವೇರಿ ತೀರದಲ್ಲಿದ್ದ ಒಂದು ಶಿಲಾಖಂಡವನ್ನು ಉದ್ದೇಶಿಸಿ ಹೀಗೆ ಹೇಳುತ್ತಾಳೆ.

"ಎಲೈ ! ಶಿಲಾಖಂಡವೇ ನಿನ್ನ ಪುಣ್ಯವೇ ಪುಣ್ಯ. ನನ್ನ ಪ್ರಿಯತಮನಾದ ಗೌತಮನಿಗೆ ನಿತ್ಯವೂ ನೀನು ಆಶ್ರಯ ಕೊಡುತ್ತಿದ್ದೆ. ಅವನು ಇಲ್ಲಿ ಕುಳಿತು ನಿತ್ಯವೂ ನನ್ನನ್ನು ಸ್ಮರಿಸಿಕೊಳ್ಳುತ್ತಿದ್ದನು. ಆದುದರಿಂದಲೇ ನಿನ್ನ ಮೇಲೆ ನನಗೂ ಇಷ್ಟು ವಿಶ್ವಾಸ. ಆದರೆ ನನಗಿಂತ ನೀನು ಹೆಚ್ಚು ಭಾಗ್ಯವಂತ" ಎಂದು ಹೇಳುತ್ತ ಗೌತಮನನ್ನು ಉದ್ದೇಶಿಸಿ, ತನ್ನಪಾಡಿಗೆ ತಾನೇ ಹೇಳಿಕೊಳ್ಳುತ್ತಾಳೆ.

"ಗೌತಮ ದೇವಾ ! ನಾನು ನಿನ್ನನ್ನು ಅನೇಕ ವರ್ಷಗಳಿಂದ ನೋಡುತ್ತಿದ್ದೆ. ನಿನ್ನೊಡನೆ ಅನೇಕ ವರ್ಷ ವ್ಯಾಸಂಗ ಮಾಡುತ್ತಿದ್ದೆ. ಆದರೆ ಆ ದಿನ ಈ ಬಂಡೆಯ ಮೇಲೆ ಇದ್ದಾಗ ನೋಡಿದ ನೋಟವನ್ನು ನಾನು ಎಂದಿಗೂ ಮರೆಯಲಾರೆ. ಅದೆಂತಹ ಅದ್ಭುತ ದೃಶ್ಯ? ನಿನ್ನ ಮನಸ್ಸಿನ ಗುಟ್ಟನ್ನು ಅಂದು ನಾ ಕಂಡೆ. ಆ ಕೆಟ್ಟ ಮೋರೆಯ ಆತ್ರೇಯಿ ನನ್ನೊಡನೆ ಇಲ್ಲದಿದ್ದರೆ ನನ್ನ ಮನಸ್ಸನ್ನು ಬಿಚ್ಚಿ ನಿನಗೆ ಹೇಳುತ್ತಿದ್ದೆ. ಹಾಳು ಲಜ್ಜೆಯು ಅಡ್ಡಿ ಬಂತು. ನಿನ್ನ ಸುಂದರರೂಪ, ಆ ದಿವ್ಯಕಾಂತಿ, ಮಧುರವಾದ ಆ ನಿನ್ನ ವಾಣಿ-ಎಲ್ಲವೂ ನನ್ನ ಕಣ್ಣಿನಲ್ಲಿ ಕಟ್ಟಿದಂತಿದೆ ದೇವಾ! ನಿನ್ನ ಪ್ರೇಮಾಲಾಪಕ್ಕೆ, ಪ್ರತಿಧ್ವನಿ ಬಾರದೆಂದು ನಿರಾಶನಾದೆಯಾ? ನನ್ನ ಈ ವಿರಹ ವ್ಯಥೆಯನ್ನು ನೀನು ತಿಳಿಯಲಾರೆಯಾ ! ಗುರುದೇವನ ಅಪ್ಪಣೆ ಪಡೆದು ಗೃಹಸ್ಥಾಶ್ರಮಸ್ವೀಕಾರಮಾಡುವ ದಿನಗಳು ನಿನಗೆ ಬೇಗುಂಟಾಗಲಿ. ತೀರ್ಥಯಾತ್ರೆ ಮುಗಿಸಿಕೊಂಡು ಬರುವ ದಿನಗಳು ಬೇಗ ಬರಲಿ. ಆಗ ನೀನೂ ನಾನೂ

ಒಂದು. ಈ ಚಂದ್ರನೇ ಅದಕ್ಕೆ ಸಾಕ್ಷಿ. ಆಗ ನೀನು ಚಂದ್ರ. ನಾನು ಚಂದ್ರಿಕೆ. ನೀನು ಶ್ರೀರಂಗರಾಷ್ಟ್ರದ ಸಾರ್ವಭೌಮ. ನಾನು ನಿನ್ನ ಪಟ್ಟದ ರಾಣಿ" ಎಂದು ಹೇಳುತ್ತಾ ಸುತ್ತ ನೋಡಿದಳು. ಉಷಃ ಕಾಲದ ಚಿಹ್ನೆಗಳು ತಲೆದೋರಿದ್ದರಿಂದ ನೇರವಾಗಿ ಅರಮನೆಯ ಕಡೆ ಹೊರಟಳು.

ಸ್ವಲ್ಪ ದೂರ ಬರುವುದರೊಳಗೆ ಆತ್ರೇಯಿಯನ್ನು ಕಂಡು ಬೆಚ್ಚಿದಳು. ಅವಳ ಹೃದಯ ಡವಡವನೆ ಹೊಡೆದುಕೊಳ್ಳಲು ಪ್ರಾರಂಭವಾಯಿತು. 'ಆತ್ರೇಯಿ' ನೀನೇಕೆ ಇಲ್ಲಿಗೆ ಬಂದೆ ಎಂದು ಕೇಳಿದಳು.

'ನೀನೇಕೆ ಬಂದೆಯೋ, ನಾನೂ ಅದಕ್ಕೇ ಬಂದೆ' ಎಂಬ ಉತ್ತರಬಂತು.

ಮುಂದೇನು ಹೇಳಬೇಕೆಂಬುದು ಅಹಲ್ಯೆಗೆ ಹೊಳೆಯಲಿಲ್ಲ. ಸುಮ್ಮನೆ ಮುಂದೆ ಹೋಗುತ್ತಿದ್ದಳು. ಇಬ್ಬರೂ ಸ್ವಲ್ಪ ಕಾಲ ಮಾತನಾಡದೆ ನಡೆದರು. ಕೊನೆಗೆ ಆತ್ರೇಯಿಯೇ ಅಹಲ್ಯೆಯನ್ನು ಮಾತನಾಡಿಸಿದಳು.

'ಅಹಲ್ಯೆ! ಗೌತಮನನ್ನು ಕುರಿತು ಹೀಗೇಕೆ ಹಂಬಲಿಸಿದೆ. ಅವನ ಸ್ವಭಾವವನ್ನು ನೀನು ಕಾಣೆಯಾ? ಅವನು ನಿನ್ನ ಸುಂದರ ರೂಪವನ್ನು ಕಂಡು ಮೋಹಿತನಾಗಿರುವನೇ ವಿನಹ, ನಿನ್ನ ರಾಜಭೋಗಕ್ಕೆ ಅವನು ಎಂದೂ ಆಸೆಪಡುವವನಲ್ಲ. ಅವನು ಯಾವಾಗಲೂ ದರಿದ್ರನಾರಾಯಣನ ಸೇವೆಯಲ್ಲಿ ನಿರತ. ಒಂದು ಪಕ್ಷ ನಿನ್ನನ್ನು ವಿವಾಹವಾದರೂ, ಆಶ್ರಮ ಬಿಟ್ಟು ಬರುವವನಲ್ಲ. ನೀನು ಇದನ್ನು ಖಂಡಿತ ಪರಿಶೀಲಿಸಬೇಕು. ಸಾರ್ವಭೌಮನ ಪಟ್ಟದರಾಣಿಯಾಗಬೇಕೆಂಬ ಆಸೆ ನಿನಗಿದ್ದ ಪಕ್ಷದಲ್ಲಿ, ರಾಜಭೋಗ ಅನುಭವಿಸಬೇಕೆಂಬ ಇಚ್ಛೆ ಇದ್ದ ಪಕ್ಷದಲ್ಲಿ, ಗೌತಮನನ್ನು ಪತಿಯಾಗಿ ಪಡೆಯಬೇಕೆಂಬ ಪ್ರಯತ್ನ ಬಿಡು. ಯಾವನಾದರೂ ರಾಜಕುಮಾರನನ್ನು ವಿವಾಹ ಮಾಡಿಕೊಂಡು ಸುಖವಾಗಿರು. ಇವೆರಡನ್ನೂ ಹೊಂದಲು ಸಾಧ್ಯವಿಲ್ಲ. ಗೌತಮನ ಪತ್ನಿಯಾಗಬೇಕೆಂಬ ಇಷ್ಟವಿದ್ದಲ್ಲಿ ಇಗೋ ಆಶ್ರಮದ ಕುಟೀರದಲ್ಲಿ ವಾಸಮಾಡುವ ಅಭ್ಯಾಸ ಮಾಡು. ಗೌತಮನು ಬರುವವರೆಗೂ ಅಲ್ಲಿ ತಪಸ್ವಿನಿಯಾಗಿರು. ವೃಥಾ ಚಂಚಲಪಡಬೇಡ ಎಂದು ಆತ್ರೇಯಿ ಎಚ್ಚರಿಸಿದಳು.

ಈ ಸಮಾಚಾರವೆಲ್ಲಾ ಶ್ರೀರಂಗರಾಜನಿಗೂ ತಿಳಿಯಿತು. ಗುರುದೇವನ ಹೇಳಿದ ಮಾತುಗಳು ಅವನ ನೆನಪಿಗೆ ಬಂದುವು. ಮಗಳ ಲಗ್ನದ ವಿಷಯ

ಇತ್ಯರ್ಥಪಡಿಸಬೇಕೆಂದು ಕಾತುರನಾಗಿ ಮಂತ್ರಿ ಮತ್ತು ಹಿಂತಚಿಂತಕರಿಗೆ ಹೇಳಿ ಕಳುಹಿಸಿದನು. ಗುರುದೇವನೂ ಬಂದನು. ಸಭೆ ಸೇರಿತು. ರಾಜನು ತನ್ನ ಅಭಿಪ್ರಾಯವನ್ನು ಸಭೆಗೆ ವಿವರಿಸಿದನು. ಅವರಲ್ಲಿ ಕೆಲವರು ಅಹಲ್ಯಾ ದೇವಿಯು, ಸತ್ಕುಲಪ್ರಸೂತ ಸದಾಚಾರ ಸಂಪನ್ನನಾದ ರಾಜಕುಮಾರ ನೊಬ್ಬನನ್ನು ವರಿಸಿ ರಾಜವೈಭವಕ್ಕೆ ತಕ್ಕಂತಿರಬೇಕೆಂದು ಸಲಹೆ ಇತ್ತರು. ಅಂತಹ ಸರ್ವೋತ್ತಮ ವರನು ಸಿಕ್ಕುವುದು ಕಷ್ಟವೆಂದು ಕೆಲವರು ಹೇಳಿದರು. ಎಲ್ಲರೂ ಗುರುದೇವನು ಏನು ಹೇಳುವನೆಂಬುದನ್ನು ಆತುರದಿಂದ ಕಾದು ನೋಡುತ್ತಿದ್ದರು.

"ಮಹಾರಾಜಾ! ಅಹಲ್ಯೆ ಯುವತಿಯಾಗಿದ್ದಾಳೆ. ವಿದ್ಯಾವತಿ. ಬುದ್ಧಿ ಸಂಪನ್ನೆ. ಅವಳ ಇಷ್ಟಕ್ಕೆ ವಿರೋಧವಾಗಿ ನಡೆಯುವಂತಿಲ್ಲ. ಅವಳ ಇಷ್ಟ ತಿಳಿಯುವುದೂ ಕಷ್ಟ. ಆದುದರಿಂದ ಕ್ಷತ್ರಿಯರಿಗೆ ಸಹಜವಾದ ಸ್ವಯಂವರ ವನ್ನು ಏರ್ಪಡಿಸಿ, ಅದರಲ್ಲಿ ಯಾವುದಾದರೂ ಸೂಕ್ತ ಪಣವನ್ನಿಟ್ಟು, ಜಯಶಾಲಿಯಾದ ಅನುರೂಪ ವರನಿಗೆ ಕೊಟ್ಟು ವಿವಾಹ ಮಾಡುವುದು ಸೂಕ್ತವಾಗಿದೆ ಎಂದು ಗುರುದೇವನು ಸಲಹೆ ಇತ್ತನು.

ಇದನ್ನು ಸರ್ವರೂ ಸರಿ ಎಂದು ಒಪ್ಪಿದರು. ಸ್ವಯಂವರ ಪಣದ ವಿಚಾರದಲ್ಲಿ ಚರ್ಚೆಗಾರಂಭವಾಯಿತು. ಧನುರ್ವಿದ್ಯಾಚಾತುರ್ಯ ತೋರಿಸಿದ ವೀರನಿಗೆ ಕೊಡಬೇಕೆಂದು ಕೆಲವರು ಹೇಳಿದರು. ಶಕ್ತಿ ಮತ್ತು ಯುಕ್ತಿ ಯುತವಾದ ಪಣವಿರಬೇಕೆಂದು ಇನ್ನು ಕೆಲವರು ಸೂಚಿಸಿದರು. ಗುರುದೇವನ ಕೊನೆಯ ತೀರ್ಮಾನಕ್ಕಾಗಿ ಎಲ್ಲರೂ ನಿರೀಕ್ಷಿಸಿದರು.

'ಮಹಾರಾಜಾ! ನಿಮ್ಮೆಲ್ಲರಂತೆ ನನಗೂ ಅಹಲ್ಯಾದೇವಿಯ ಭವಿಷ್ಯ ಭವ್ಯವಾಗಬೇಕೆಂಬ ಹಂಬಲವಿದೆ. ಸಾಮಾನ್ಯವಾಗಿ ರಾಜವೈಭವವೊಂದನ್ನೇ ಗಮನದಲ್ಲಿಟ್ಟುಕೊಂಡು ಸ್ವಯಂವರ ಏರ್ಪಡಿಸುವುದು ಸರಿಯಲ್ಲ. ಆದುದ ರಿಂದ ಒಂದು ಕಾಲಾವಧಿಯನ್ನು ಗೊತ್ತುಮಾಡಿ, ಪ್ರಪಂಚ ವ್ಯವಹಾರ ಜ್ಞಾನವನ್ನೇ ಪಣವನ್ನಾಗಿ ಇಟ್ಟು ಅದರಲ್ಲಿ ಉತ್ತೀರ್ಣನಾದವನಿಗೆ ಅವಳನ್ನು ಕೊಟ್ಟು ವಿವಾಹ ಮಾಡುವುದು ಸುಲಭವಾಗಿ ಕಾಣುವುದು. ಲೋಕ ವ್ಯವಹಾರ ಜ್ಞಾನಪಡೆದವನು ಉತ್ತಮ ರಾಜನಾಗಬಲ್ಲನು ಎಂದು ಗುರು ದೇವನು ಸೂಚಿಸಿದನು. ಇದನ್ನೇ ಎಲ್ಲರೂ ಒಪ್ಪಿದರು.

ಈ ವಿಷಯ ಪ್ರಕಟನೆಯನ್ನು ಎಲ್ಲ ರಾಜ, ಮಹಾರಾಜ ಸಮೂಹದಲ್ಲಿ ಮಾಡಲಾಯಿತು. ರಾಜ ಸಭೆ ಸೇರಿಸಲಾಯಿತು. ಶ್ರೀಮಂತರು, ಮಾಂಡಳಿಕರು, ಪುರೋಹಿತರು, ಪಂಡಿತರು, ಮಂತ್ರಿಗಳು, ಎಲ್ಲರೂ ಸೇರಿದರು. ಸಿಂಹಾಸನದಲ್ಲಿ ಶ್ರೀರಂಗರಾಜನು ಬಂದು ಸಕಾಲದಲ್ಲಿ ಕುಳಿತನು. ದೊರೆಯು ಸಭೆಯನ್ನು ಉದ್ದೇಶಿಸಿ, ಈ ರೀತಿ ಹೇಳಿದನು.

'ನಿಮ್ಮೆಲ್ಲರನ್ನೂ ಈ ಸಭೆಗೆ ಸ್ವಾಗತಿಸುತ್ತೇನೆ, ಸುಶಿಕ್ಷಿತೆಯೂ, ರೂಪಗುಣಸಂಪನ್ನೆಯೂ, ಆದ ಅಹಲ್ಯೆಗೆ ಅನುರೂಪನಾದ ವರನನ್ನು ಗೊತ್ತುಮಾಡಲು ಈ ಪ್ರಯತ್ನ ಮಾಡಿದ್ದೇನೆ. ಇದು ಇಡೀ ರಾಷ್ಟ್ರದ ವಿಷಯ. ಅಹಲ್ಯಾದೇವಿಯ ಪತಿಯೇ ಈ ರಾಜ್ಯದ ಸಾರ್ವಭೌಮ. ಮುಂದಿನ ವಿಜಯದಶಮಿ ದಿವಸ, ಇಲ್ಲಿ ಸ್ವಯಂವರ ಸಭೆ ಏರ್ಪಡಿಸಲಾಗಿದೆ. ಆ ಕಾಲಕ್ಕೆ ಎಲ್ಲರೂ ದಯಮಾಡಿಸಿ, ಆಗ ಕೇಳುವ ಕೆಲವು ಪ್ರಶ್ನೆಗಳಿಗೆ ಯಾರು ಸಮರ್ಪಕವಾದ ಉತ್ತರಕೊಟ್ಟು ವಿಜಯಿಗಳಾಗುವರೋ, ಅವರನ್ನು ಅಹಲ್ಯೆಯು ವರಿಸುವಳು. ಆಮೇಲೆ ಶಾಸ್ತ್ರೋಕ್ತವಾಗಿ ವಿವಾಹವಾಗುವುದು ಎಂದು ಹೇಳಿ ರಾಜನು ಸಭೆಯನ್ನು ಮುಕ್ತಾಯಮಾಡಿದನು.

ಪುಣ್ಯಾಶ್ರಮ

ಗೌತಮ, ಉದಂಕರು, ತುಂಗಾಪಾನದಿಂದ ತೃಪ್ತರಾಗಿ ಶೃಂಗಗಿರಿಯಿಂದ ಪೂರ್ವಾಭಿಮುಖವಾಗಿ ಸಂಚಾರ ಹೊರಟರು. ಮಲೆನಾಡಿನ ಪ್ರಕೃತಿ-ನೋಟ ಮನೋಹರವಾಗಿತ್ತು. ಹೀಗೆ ಹೋಗುತ್ತಿರುವಾಗ, ಆಶ್ರಮವಿರುವ ಕುರುಹುಗಳು ಕಂಡುವು. ಗೌತಮಾ, ಇದು ಯಾರ ಆಶ್ರಮ? ನಂದನ ವನದಂತಿರುವ ಈ ಪುಣ್ಯ ಸ್ಥಳದಲ್ಲಿರುವ ಮಹಾತ್ಮನಾರು? ಎಂದು ಉದಂಕನು ಕೇಳಿದನು.

'ಉದಂಕಾ! ನೀನು ಊಹಿಸಿದಂತೆ ಇದು ಮಹಾತ್ಮರಾದ ಕಶ್ಯಪ ಮಹಾಮುನಿಯ ಆಶ್ರಮ. ಇದು ಸಿದ್ಧಾಶ್ರಮವೆಂಬ ಹೆಸರನ್ನು ಪಡೆದಿದೆ.

ಕಶ್ಯಪ ಋಷಿಯು ಇಲ್ಲಿ ಬಹುಕಾಲ ತಪಸ್ಸು ಮಾಡಿ, ಶ್ರೀ ಮಹಾವಿಷ್ಣುವಿನ ದರ್ಶನ ಪಡೆದನು. ಪರಮಾತ್ಮನನ್ನು ಪ್ರತ್ಯಕ್ಷವಾಗಿ ನೋಡಿದಾಗ ಅವನನ್ನು ಕುರಿತು ಹೀಗೆ ಸ್ತೋತ್ರ ಮಾಡಿದನು. "ದೇವದೇವಾ! ನೀನು ಜ್ಞಾನಸ್ವರೂಪನು. ಲೋಕನಾಯಕನು. ಪುರುಷೋತ್ತಮನು. ಸಮಸ್ತ ಪ್ರಪಂಚಕ್ಕೂ ನೀನೇ ಆಧಾರನು. ಆದಿ ಅಂತ್ಯರಹಿತನು. ನಿನ್ನನ್ನು ಬಿಟ್ಟರೆ ಮಾನವರಿಗೆ ಬೇರೆ ಗತಿಯೇ ಇಲ್ಲ. ಇಗೋ ನಿನ್ನನ್ನು ಶರಣು ಹೊಂದಿರುವೆನು. ರಕ್ಷಿಸು" ಮಹಾವಿಷ್ಣುವು ಕಶ್ಯಪ ಋಷಿಯ ಭಕ್ತಿಗೆ ಮೆಚ್ಚಿ, ಬೇಕಾದ ವರ ಕೇಳಿಕೊಳ್ಳುವಂತೆ ಅಪ್ಪಣೆ ಮಾಡಿದನು.

'ದೇವಾ! ದೈತ್ಯರಕಾಟ ಲೋಕದಲ್ಲಿ ಹೆಚ್ಚುತ್ತಿದೆ. ಅವರನ್ನು ನಾಶ ಮಾಡಿ ದೇವತೆಗಳಿಗೆ ಕ್ಷೇಮವನ್ನುಂಟುಮಾಡಲು ಸಹಾಯವಾಗುವಂತೆ ನನಗೊಬ್ಬ ಪುತ್ರನನ್ನು ಕರುಣಿಸು. ನೀನೇ ಅವತಾರ ಮಾಡಿದರೆ ಇನ್ನು ಹೆಚ್ಚಿನ ಸಹಾಯವಾಗುವುದಿಲ್ಲವೇ? ಎಂದು ಕಶ್ಯಪನು ಬೇಡಿದನು. ಆಗಲೆಂದು ಮಹಾವಿಷ್ಣುವು ಅನುಗ್ರಹಮಾಡಿದನು.

ಆ ಕಾಲದಲ್ಲಿ ದೈತ್ಯರಾಜನಾದ ಬಲಿಚಕ್ರವರ್ತಿ ಮಹಾಪ್ರಬಲ ನಾಗಿದ್ದನು. ಅವನು ದಾನಮೂರ್ತಿ. ಯಾರು ಏನು ಕೇಳಿದರೂ ಕೊಟ್ಟು ಬಿಡುವ ಸ್ವಭಾವ ಅವನದು. ಇಂದ್ರಪದವಿ ಪಡೆಯಬೇಕೆಂಬ ಆಸೆಯಿಂದ ದೊಡ್ಡ ಯಾಗವನ್ನು ಆರಂಭಿಸಿದನು. ಆಗ ದೇವತೆಗಳೆಲ್ಲ ಶ್ರೀ ಮಹಾವಿಷ್ಣು ವಿನಲ್ಲಿ ಮೊರೆ ಇಟ್ಟರು. ಬಲಿಯು ಇಂದ್ರನಾದರೆ, ತಮಗುಂಟಾಗುವ ತೊಂದರೆಯನ್ನು ವಿವರಿಸಿ, ಅದನ್ನು ತಪ್ಪಿಸುವಂತೆ ಬೇಡಿದರು.

ಮಹಾವಿಷ್ಣುವು ಅವರಿಗೆ ಧೈರ್ಯ ಹೇಳಿ, ತಾನು ಕಶ್ಯಪ ಋಷಿಯ ಪತ್ನಿಯಾದ ಅದಿತಿದೇವಿಯ ಗರ್ಭದಲ್ಲಿ ಜನಿಸುವಂತೆ ತಿಳಿಸಿದನು. ಹಾಗೆಯೇ ಮಾಡಿ, ಬಲಿಚಕ್ರವರ್ತಿಯ ಬಳಿಗೆ ಬಂದು ಯಜ್ಞಕಾಲದಲ್ಲಿ ಮೂರು ಹೆಜ್ಜೆ ಭೂಮಿಯನ್ನು ದಾನವಾಗಿ ಕೊಡುವಂತೆ ಕೇಳಿದನು. ಇದೆಂತಹ ಮಹಾದಾನ ವೆಂದು ರಾಜನು ಹಾಸ್ಯದಿಂದ ನಕ್ಕು, ಕೂಡಲೆ ಧಾರೆ ಎರೆದು ಕೊಟ್ಟನು. ಇದಾದಮೇಲೆ ವಾಮನನು ಅದ್ಭುತಾಕಾರವಾಗಿ ಬೆಳೆದು ಒಂದು ಹೆಜ್ಜೆಯಿಂದ ಭೂಮಿಯನ್ನೆಲ್ಲಾ ಅಳೆದನು. ಇನ್ನೊಂದು ಹೆಜ್ಜೆಗೆ ಆಕಾಶವಾಯಿತು. ಮೂರನೆ ಹೆಜ್ಜೆಗೆ ಸ್ಥಳವೆಲ್ಲಿ ಎಂದು ಕೇಳಲು, ಆಗ ರಾಜನು ತನ್ನ ತಲೆ

ಯನ್ನು ತೋರಿಸಿದನು. ತ್ರಿವಿಕ್ರಮನು ತನ್ನ ಪಾದವನ್ನು ಬಲಿಚಕ್ರವರ್ತಿಯ ತಲೆಯಮೇಲೆ ಇಟ್ಟು ಅವನನ್ನು ಪಾತಾಳಕ್ಕೆ ತುಳಿದನು ಅವನು ಭಕ್ತನಾಗಿದ್ದುದರಿಂದ ಅಲ್ಲಿಯೇ ರಾಜ್ಯಭಾರಮಾಡಿಕೊಂಡಿರುವಂತೆ ಅಪ್ಪಣೆ ಮಾಡಿದನು. ಬಂದಿದ್ದ ಕಷ್ಟವನ್ನು ಹೀಗೆ ಪರಿಹಾರ ಮಾಡಿದನು. ಅಂತಹ ವಾಮನಮುನಿಯು ವಾಸಮಾಡುತ್ತಿದ್ದ ಪುಣ್ಯಾಶ್ರಮವಿದು.

'ಗೌತಮಾ! ಬಲಿಯು ಭಗವದ್ಭಕ್ತ. ಅವನ ಯಜ್ಞ ದೇವತೆಗಳ ಪ್ರೀತ್ಯರ್ಥವಾಗಿ ಅಲ್ಲವೇ? ಅವನನ್ನು ಪಾತಾಳಕ್ಕೆ ತುಳಿದುದು, ಭಕ್ತನಿಗೆ ದ್ರೋಹವಾದಂತಾಗಲಿಲ್ಲವೇ?' ಎಂದು ಉದಂಕನು ಕೇಳಿದನು.

'ಹೌದುಹೌದು! ನೀನು ಕೇಳುವ ಪ್ರಶ್ನೆ ಸಮಂಜಸವೇನೋ ಸರಿ. ಆದರೆ ಬಲಿಚಕ್ರವರ್ತಿಯು ಫಲಾಪೇಕ್ಷೆ ಏನು? ಇಂದ್ರಪದವಿಯನ್ನು ಆಕ್ರಮಿಸುವುದಲ್ಲವೇ? ಇಂದ್ರ, ದೇವತೆಗಳೆಲ್ಲರೂ ಪರಮಾತ್ಮನ ಆಶ್ರಿತರು ಹಾಗೆಯೇ ಭಕ್ತನೂ ಆಶ್ರಿತನೇನೋ ನಿಜ. ಆದರೆ, ಅಣ್ಣತಮ್ಮಂದಿರಿಬ್ಬರು ದ್ವೇಷಿಸಿ, ಜಗಳವಾಡಲು ಪ್ರಾರಂಭಿಸಿದರೆ, ತಂದೆಯಾದವನು, ದುಷ್ಟನನ್ನು ದಂಡಿಸಬೇಕಲ್ಲವೇ? ಹೀಗೆ ಮಾಡುವುದು ಅವನ ಕರ್ತವ್ಯ. ಆದರೆ ಬಲಿಯು, ಭೂಮಿಯ ಮೇಲಿದ್ದರೆ ಯುದ್ಧವಾಗುವುದೆಂದು, ಅವನನ್ನು ಉಪಾಯದಿಂದ ಪರಮಾತ್ಮನು ಪಾತಾಳಕ್ಕೆ ತಳ್ಳಿದನು' ಎಂದು ಗೌತಮನು ಉತ್ತರ ಕೊಟ್ಟನು.

'ಗೌತಮಾ! ಅತ್ಯಂತ ಮನೋಹರವಾದ ತುಂಗಾನದಿಯ ಉತ್ಪತ್ತಿ ಹೇಗೆ?' ಎಂಬದಾಗಿ ಉದಂಕನು ಪ್ರಶ್ನೆಮಾಡಿದನು.

'ಹಿರಣ್ಯಾಕ್ಷನು ಒಂದು ಸಲ ಭೂದೇವಿಯನ್ನೂ ಕದ್ದು ಪಾತಾಳಕ್ಕೆ ಕೊಂಡೊಯ್ದನು. ಆಗ ಯಜ್ಞಯಾಗಾದಿ ಕರ್ಮಗಳಿಲ್ಲದೆ ಹೋದುವು. ಧರ್ಮಾನುಷ್ಠಾನಕ್ಕೆ ಅವಕಾಶವಿಲ್ಲವಾಯಿತು. ಇದರಿಂದ ದೇವತೆಗಳಿಗೆ ತೊಂದರೆ ಉಂಟಾಯಿತು. ಅವರೆಲ್ಲ ಪರಮಾತ್ಮನಲ್ಲಿ ಮೊರೆ ಇಟ್ಟರು. ಆಗ ಮಹಾವಿಷ್ಣುವು ವರಾಹ ರೂಪ ತಾಳಿ, ಪಾತಾಳಕ್ಕೆ ಹೋಗಿ, ಭೂಮಿಯನ್ನು ತಂದು ಯಥಾ ಸ್ಥಾನದಲ್ಲಿರಿಸಿದನು. ಅವನ ಕೋರೆದಾಡೆಗಳಿಗೆ ಹೆಚ್ಚು ಶ್ರಮವಾಯಿತು. ಹೀಗೆ ಎರಡು ದಾಡೆಗಳಿಂದ ಹರಿದ ನೀರು ಕ್ರಮವಾಗಿ ಎರಡು ನದಿಗಳಾಗಿ ಹರಿದವು. ಒಂದು ತುಂಗ. ಇನ್ನೊಂದು ಭದ್ರ.

ಎಡಗಡೆಯದು ತುಂಗ. ಬಲಗಡೆಯದು ಭದ್ರ. ಇವೆರಡು ಬಹುದೂರ ಪ್ರತ್ಯೇಕವಾಗಿ ಹರಿದು ಆಮೇಲೆ ಒಟ್ಟಿಗೆ ಸೇರಿ ತುಂಗಭದ್ರೆಯಾಗುವುದು. ತುಂಗಾತೀರದಲ್ಲಿ ಸಿದ್ಧಾಶ್ರಮಗಳೂ, ಪುಣ್ಯತೀರ್ಥಗಳೂ ಇವೆ. ಇದರ ತೀರದಲ್ಲಿ ಶ್ರೀರಾಮನು ಮಾಯಾ ಮೃಗವನ್ನು ಸಂಹಾರಮಾಡಿದನು. ಮಹಿಷಾಸುರನ ಸಂಹಾರವಾದುದು ಇದರ ದಡದಲ್ಲಿಯೇ. ತುಂಗಾನದಿ ಯಲ್ಲಿರುವ ಸೀತಾಕುಂಡ ತೀರ್ಥದಲ್ಲಿ ಪರಶುರಾಮನು, ಸ್ನಾನಮಾಡಿ ಮಾತೃ ಹತ್ಯಾ ದೋಷವನ್ನು ಪರಿಹರಿಸಿಕೊಂಡನು. ಇಂತಹ ಪರಮಪಾವನೆ ತುಂಗೆ. ನಾವು ಇಷ್ಟು ಧಿವಸವೂ ಆನಂದದಿಂದ ಕಾಲ ಕಳೆದುದು ಈ ನದೀ ತೀರ ದಲ್ಲಿಯೇ' ಎಂದು ಗೌತಮನು ಹೇಳಿದನು.

'ಗೌತಮಾ! ನಾವು ಇದುವರಿವಿಗೂ ತೀರ್ಥಯಾತ್ರೆ ಮಾಡಿದೆವು. ಇನ್ನು ಕೆಲವು ಪರ್ವತ ಪ್ರವಾಸವಮಾಡಿ ಅಲ್ಲಿ ತಪಸ್ಸು ಮಾಡುತ್ತಿರುವ ಮಹಾ ತ್ಮರ ಸಂದರ್ಶನ ಮಾಡಿ ಬರೋಣವೇ' ಎಂದು ಉದಂಕನು ಕೇಳಿದನು.

'ಉದಂಕಾ! ಸಕಾಲದಲ್ಲಿ ಎಚ್ಚರಿಕೆ ಕೊಟ್ಟೆ. ನಮ್ಮ ನಾಡಿನಲ್ಲಿ ಉತ್ತ ಮೋತ್ತಮ ಪರ್ವತಗಳಿವೆ ಗುರುದೇವನು ಅಂತಹ ಪರ್ವತದಲ್ಲಿಯೇ ನೀನೊಬ್ಬ ಮಹಾತ್ಮನನ್ನು ಕಾಣುವೆ' ಎಂದು ಹೇಳಿದ್ದಾನೆ. ನಾಳೆ ಉಷಃ ಕಾಲಕ್ಕೆ ಎದ್ದು ಬೈಲುಸೀಮೆಯ ಕಡೆ ಪ್ರಯಾಣ ಮಾಡೋಣ.

ಪರ್ವತ ಪ್ರವಾಸ

ಮಾರನೆಯ ದಿವಸ ಉಷಃಕಾಲಕ್ಕೆ ಎದ್ದು ಪ್ರಾತರ್ವಿಧಿಗಳನ್ನು ಮುಗಿಸಿಕೊಂಡು, ಗೌತಮ, ಉದಂಕರು, ಬೈಲು ಸೀಮೆಯ ಪರ್ವತ ಪ್ರದೇಶದ ಕಡೆ ಪ್ರಯಾಣ ಮಾಡಿದರು. ದಾರಿಯಲ್ಲಿ ಗುಡ್ಡಗಾಡು, ಹಚ್ಚ ಹಸುರು ಹುಲ್ಲಿನಿಂದ ಬೆಳೆದ ಬೈಲು, ಕುರುಚಲು ಗಿಡದ ಕಾಡು ಪ್ರದೇಶವೆಲ್ಲವೂ ಸಿಕ್ಕಿ ದುವು. ಮಾರ್ಗದಲ್ಲಿ ಯಾತ್ರಿಕರು, ರೈತರು, ಎಲ್ಲರೂ ಗೌತಮ ಮುನಿಯ ದಿವ್ಯ ಮೂರ್ತಿಯನ್ನು ಕಂಡು ಆಶ್ಚರ್ಯಪಡುತ್ತಿದ್ದರು. ಯಾರೋ ಮಹಾತ್ಮ

ನಿರಬೇಕೆಂದು, ವಿನಯದಿಂದ ತಲೆಬಾಗಿ ನಮಸ್ಕಾರ ಮಾಡುತ್ತಿದ್ದರು. ಹಳ್ಳಿಯವರು ಕಂದ ಮೂಲಫಲಗಳನ್ನು ಇವರಿಗೆ ಅರ್ಪಿಸುತ್ತಿದ್ದರು.

ಹೀಗೆ ಅನೇಕ ಗಿರಿ ಕಂದರಗಳನ್ನು ದಾಟಿ ಬರುತ್ತಿರುವಾಗ, ಒಂದು ದೊಡ್ಡ ಬಯಲು ಪ್ರದೇಶ ಸಿಕ್ಕಿತು. ಇಲ್ಲಿ ವೃಕ್ಷಗಳಾಗಲಿ ಗಿಡ ಗೆಂಟೆಗಳಾಗಲಿ, ಜಲಾಶಯಗಳಾಗಲಿ, ಯಾವುದೂ ಇರಲಿಲ್ಲ. ಈ ಬೆಂಗಾಡಿನಲ್ಲಿ ನಡೆಯುವಾಗ ಅವರು ಬಿಸಲಿನ ತಾಪದಿಂದ ಕಷ್ಟಪಡಬೇಕಾಯಿತು. ಕಣ್ಣು ಕೆಂಪಾಗಿ ಮುಖ ಕಳೆಗುಂದಿತ್ತು. ಹೀಗೆ ಕಾಡುಮೇಡುಗಳನ್ನು ದಾಟಿ, ಒಂದು ಪರ್ವತ ಶ್ರೇಣಿಯ ತಪ್ಪಲಿಗೆ ಬಂದರು. ಆ ಪ್ರದೇಶಕ್ಕೆ ಅವಂತಿ ಕ್ಷೇತ್ರವೆಂಬ ಹೆಸರಿತ್ತು. ಅಲ್ಲಿ ಸಪ್ತಋಷಿಗಳಿಂದ ಸ್ಥಾಪಿತವಾದ ರಂಗನಾಥ ಸ್ವಾಮಿ ದೇವಾಲಯ, ಪಕ್ಕದಲ್ಲಿ ಒಂದು ಚಿಕ್ಕ ಕಲ್ಯಾಣತೀರ್ಥ ಇದ್ದುವು. ಮುನಿಕುಮಾರರಿಬ್ಬರೂ ಅಲ್ಲಿ ಸ್ನಾನಮಾಡಿ, ಆ ಕ್ಷೇತ್ರದ ಕುಟೀರವೊಂದರಲ್ಲಿ ತಂಗಿದರು.

ಆ ಪರ್ವತ ಶ್ರೇಣಿಯಲ್ಲಿ ಮೊದಲನೆಯದು, ನರಸಿಂಹಗಿರಿ. ಅನಂತರ ಚನ್ನಗಿರಿ, ಬ್ರಹ್ಮಗಿರಿ, ದಿವ್ಯಗಿರಿ, ಮತ್ತು ನಂದಗಿರಿ ಎಂದು ಸಾಲಾಗಿದ್ದುವು. ನರಸಿಂಹಗಿರಿಯಲ್ಲಿ ಉಗ್ರ ನರಸಿಂಹಸ್ವಾಮಿಯ ದೇವಾಲಯವಿತ್ತು. ತಪಸ್ವಿಗಳು ಇಲ್ಲಿ ವಾಸಮಾಡುತ್ತಾ ಸ್ವಾಮಿಯ ಆರಾಧನೆಯಲ್ಲಿ ನಿರತರಾಗಿದ್ದರು. ಚನ್ನಗಿರಿಯಲ್ಲಿ ವಿಷ್ಣುಮೂರ್ತಿ ಮಹಾಮುನಿಯು ಬಹುಕಾಲ ತಪಸ್ಸು ಮಾಡಿ ಸಿದ್ಧಿ ಪಡೆದಿದ್ದನು. ಮಹಾಪಾತಕನಾಶಿನಿಯಾದ ಪಿನಾಕಿನಿ ನದಿಯು ಇಲ್ಲಿಯೇ ಹುಟ್ಟುವುದು. ಬ್ರಹ್ಮಗಿರಿಯಲ್ಲಿ ಬ್ರಹ್ಮದೇವನು ಸಾವಿತ್ರಿ, ಸರಸ್ವತಿ ದೇವಿಯರೊಡನೆ ಬಹುಕಾಲ ತಪಸ್ಸು ಮಾಡಿಕೊಂಡಿದ್ದು, ತನಗುಂಟಾಗಿದ್ದ ಮಿಥ್ಯಾದೋಷ ನಿವೃತ್ತಿ ಮಾಡಿಕೊಂಡನು. ಇದು ಅರ್ಕಾವತಿಗೆ ಮೂಲಸ್ಥಾನ. ದಿವ್ಯಗಿರಿಯಲ್ಲಿ ದೇವತೆಗಳೂ, ಮಹಾತ್ಮರೂ ವಾಸಮಾಡಿಕೊಂಡಿದ್ದರು. ಇಲ್ಲಿ ಸ್ವರ್ಣಮುಖಿ ನದಿ ಗುಪ್ತಗಾಮಿನಿಯಾಗಿ ಹರಿಯುತ್ತದೆ. ನಂದಗಿರಿಯಲ್ಲಿ ಪರಮೇಶ್ವರನ ಪ್ರಮಥ ಗಣಾಧ್ಯಕ್ಷ ನಂದಿಯು ತಪಸ್ಸು ಮಾಡಿ ಸಿದ್ಧಿ ಹೊಂದಿದನು. ಯೋಗ ಮತ್ತು ಭೋಗನಂದೀಶ್ವರ ದೇವಾಲಯಗಳು ಇಲ್ಲಿವೆ.

ಇಂತಹ ಪಂಚಗಿರಿ, ಪಂಚನದೀ ಕ್ಷೇತ್ರಗಳಲ್ಲಿ ವಕುಳ ಚಂಪಕಾದಿ

ವೃಕ್ಷಗಳೂ, ಪುಣ್ಯ ತೀರ್ಥಗಳೂ ಇವೆ. ದುಷ್ಟಪ್ರಾಣಿಗಳು ತಮ್ಮ ವೈರವನ್ನು ಬಿಟ್ಟು ಅನ್ಯೋನ್ಯವಾಗಿ ಇತರ ಸಾಧು ಮೃಗಗಳೊಡನೆ ವಾಸಿಸುತ್ತಿವೆ. ಋಷಿ ಕುಮಾರರಿಬ್ಬರೂ, ಇಲ್ಲಿಯ ತೀರ್ಥಗಳಲ್ಲಿ ಸ್ನಾನಮಾಡಿ, ಅಲ್ಲಿನ ಅಪೂರ್ವ ಪ್ರಕೃತಿ ಸೌಂದರ್ಯ ನೋಡಿ ಆನಂದ ಪಡುವುದು, ಪುಣ್ಯಾಶ್ರಮಗಳಲ್ಲಿ ತಪಸ್ವಿಗಳ ಸಂದರ್ಶನ ಮಾಡಿ, ವೇದಾಂತ ವಿಷಯ ಸಂಗ್ರಹ ಮಾಡುವುದು. ತಮ್ಮ ಕುಟೀರದಲ್ಲಿ ವೇದಾಧ್ಯಯನ, ದೇವತಾರ್ಚನೆ ಮುಂತಾದ ಸತ್ಕಥಾ ಕಾಲಕ್ಷೇಪ ಮಾಡಿ, ಅಲ್ಲಿಂದ ಮುಂದೆ ಶ್ವೇತಾದ್ರಿಗೆ ಪ್ರಯಾಣ ಮಾಡಿದರು

ಶ್ವೇತಾದ್ರಿ ಬೆಟ್ಟವೂ, ತಿರುಪತಿಯ ವೆಂಕಟಾದ್ರಿಯಂತೆ ಪ್ರಸಿದ್ಧಿಯಾಗಿದೆ. ಇಲ್ಲಿನ ಗಜಾಕುಂಡವೇ ಅಲ್ಲಿಯ ಸ್ವಾಮಿ ಪುಷ್ಕರಿಣಿ. ಇಲ್ಲಿಯ ಭಾರ್ಗವಿ ನದಿಯೇ ಅಲ್ಲಿಯ ಆಕಾಶಗಂಗೆ. ಇಲ್ಲಿಯ ಗಂಗಾಧರೇಶ್ವರನೇ ಅಲ್ಲಿಯ ಕಪಿಲೇಶ್ವರ. ಇದರ ಪಕ್ಕದಲ್ಲಿರುವ ತಾಪಹರಣೀ ತೀರ್ಥವೇ ಅಲ್ಲಿಯ ಕಪಿಲ ತೀರ್ಥ. ಅಂತೂ ಎರಡೂ ಮಹಾತ್ಮೆಯಲ್ಲಿ ತುಲನಾತ್ಮಕವಾದುವು. ಎರಡರಲ್ಲಿಯೂ ಋಷ್ಯಾಶ್ರಮಗಳೂ, ಪುಣ್ಯತೀರ್ಥಗಳೂ, ಶ್ರೀಗಂಧ, ಅಶೋಕ, ಪುನ್ನಾಗ, ನೆಲ್ಲಿ, ಮುಂತಾದ ವೃಕ್ಷಗಳು ತುಂಬಿದುವು. ಎರಡನೆಯ ವೆಂಕಟಾದ್ರಿಯೇ ಶ್ವೇತಾದ್ರಿ. ಇದರ ಸ್ವಲ್ಪ ಭಾಗ ಸುವರ್ಣದಂತೆಯೂ, ಇನ್ನೂ ಸ್ವಲ್ಪ ಭಾಗ ಸ್ಫಟಿಕದಂತೆಯೂ, ಮತ್ತೆ ಸ್ವಲ್ಪ ಭಾಗ ಇಂದ್ರನೀಲ ಮಣಿಯಂತೆಯೂ ಕಾಂತಿಯುತವಾಗಿದೆ. ವಸಿಷ್ಠ ಮಹಾಮುನಿಯು ಅರುಂಧತಿ ಸಮೇತನಾಗಿ ಇಲ್ಲಿ ತಪಸ್ಸು ಮಾಡುತ್ತಿದ್ದಾಗ, ಶ್ರೀನಿವಾಸನು ಇಲ್ಲಿ ಪ್ರತ್ಯಕ್ಷನಾದನು. ಆಗ ಅವನು ಬಿಳಿಗಿರಿರಂಗಸ್ವಾಮಿ ಎಂದು ಪ್ರಸಿದ್ಧಿ ಪಡೆದನು.

ಬಿಳಿಗಿರಿರಂಗಸ್ವಾಮಿಯು ಶಂಖ ಚಕ್ರಗಳಿಂದ ಶೋಭಿತನಾಗಿದ್ದಾನೆ. ಜೋಲು ಬಿದ್ದಿರುವ ದೀರ್ಘ ಹಸ್ತಗಳು, ವಕ್ಷಸ್ಥಳದಲ್ಲಿ ಶ್ರೀವತ್ಸ ಕೌಸ್ತುಭ, ರಂಜಿಸುವ ಕಿರೀಟ, ಸೂರ್ಯಕಾಂತಿಗೆ ಸಮಾನವಾದ ಕರ್ಣಕುಂಡಲ, ಇವುಗಳಿಂದ ಮೆರೆಯುತ್ತಿದ್ದಾನೆ. ಸ್ವಾಮಿಯು ಕೇಯೂರಾಂಗದನೂಪುರ ದಿವ್ಯ ಪೀತಾಂಬರಧಾರಿಯಾಗಿ, ಕೋಟಿಮನ್ಮಥಾಕಾರನಾಗಿ, ಶ್ರೀ ಲಕ್ಷ್ಮೀ ಸಮೇತನಾಗಿ ದರ್ಶನ ಕೊಡುತ್ತಿದ್ದಾನೆ. ಅಲ್ಲಿಗೆ ಬರುತ್ತಿದ್ದ ಭಕ್ತರೆಲ್ಲ ಪರಮಾತ್ಮನನ್ನು ನೋಡಿ ಧನ್ಯರಾಗಿ ಹೀಗೆ ಸ್ತೋತ್ರ ಮಾಡುತ್ತಿದ್ದರು.

'ಸರ್ವವ್ಯಾಪಕಾ, ಪರಮಾತ್ಮಾ, ನಿನಗೆ ನಮಸ್ಕಾರ. ಜರಾಮರಣ ವರ್ಜಿತಾ, ನಿಷ್ಕಳಂಕ ನಿರಾಧಾರ! ನಿತ್ಯಾ, ನಿನಗೆ ನಮಸ್ಕಾರ. ಆದಿಮಧ್ಯಾಂತ ರಹಿತಾ, ಯೋಗಿ ಹೃದಯಾಗಮ್ಯಾ, ಸಚ್ಚಿದಾನಂದ ಸ್ವರೂಪಾ, ನಿನಗೆ ನಮಸ್ಕಾರ. ವೇದವೇದ್ಯಾ, ಶರಣಾಗತರಕ್ಷಕಾ, ಇದೋ ನಿನಗೆ ನಮಸ್ಕಾರ.'

ಇಂತಹ ಪವಿತ್ರ ಪರ್ವತಕ್ಕೆ ಗೌತಮ ಉದಂಕರಿಬ್ಬರೂ ಬಂದು ಪರಮಾತ್ಮನನ್ನು ಸಂದರ್ಶನ ಮಾಡಿ, ಸ್ತೋತ್ರ ಮಾಡಿದರು.

ಆಗ ಉದಂಕನು, ಗೌತಮನನ್ನು ಕುರಿತು ಹೀಗೆ ಹೇಳಿದನು.

"ಗೌತಮಾ! ಪರಮಾತ್ಮನು ಇಲ್ಲೇಕೆ ಬಂದು ನೆಲಸಿದನು. ಇದಕ್ಕೆ ಕಾರಣವೇನಿರಬಹುದು ತಿಳಿಸುವೆಯಾ?"

'ಉದಂಕಾ' ಕಾರಣವಿಲ್ಲದೆ ಪರಮಾತ್ಮನು ಇಂತಹ ಪವಿತ್ರ ಸ್ಥಳದಲ್ಲಿ ನೆಲಸುವನೇ! ಪರಶುರಾಮನು ತನ್ನ ಮಾತೃಹತ್ಯಾ ದೋಷ ನಿವಾರಣೆಗಾಗಿ, ಏನುಮಾಡಬೇಕೆಂದು ತನ್ನ ತಂದೆಯನ್ನು ಕೇಳಿದಾಗ, ತಂದೆಯು, 'ಯಾದವಗಿರಿಗೆ ಐದು ಗಾವುದ ದೂರದಲ್ಲಿ, ಕಾವೇರಿ ನದಿಗೆ ದಕ್ಷಿಣದಲ್ಲಿ ಒಂದು ಗಾವುದ ದೂರದಲ್ಲಿ ನಾನಾವಿಧ ಮೃಗ, ಪಕ್ಷಿ, ಸಿದ್ಧ, ಯಕ್ಷ, ಕಿನ್ನರರಿಂದ ಕೂಡಿದ ಶ್ವೇತಾದ್ರಿ ಎಂಬ ಪರ್ವತಕ್ಕೆ ಹೋಗಿ ಅಲ್ಲಿಯ ಶಿಖರದಲ್ಲಿ ನೆಲಸಿರುವ ನಾರಾಯಣನನ್ನು ಪ್ರಾರ್ಥಿಸಿ, ಅವನ ಅನುಗ್ರಹದಿಂದ ನಿನ್ನ ಪಾಪವನ್ನು ಕಳೆ' ಎಂದನು ಜಮದಗ್ನಿ ಋಷಿ. ಅದರಂತೆ ಪರಶುರಾಮನು ಇಲ್ಲಿಗೆ ಬಂದು ಶ್ರೀಮನ್ನಾರಾಯಣನನ್ನು ಕುರಿತು ತಪಸ್ಸು ಮಾಡಿದನು.

ಭಗವಂತನು ಅವನ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷನಾಗಿ ಹೀಗೆ ಹೇಳಿದನು 'ಪರಶುರಾಮಾ! ನೀನು ಗರುಡನನ್ನು ಪ್ರಾರ್ಥಿಸಿ, ವಿರಜಾ ನದಿಯ ತೀರ್ಥವನ್ನು ತರಿಸಿಕೊಂಡು, ನನ್ನ ಪಾದಕ್ಕೆ ಅಭಿಷೇಕಮಾಡು. ಆ ತೀರ್ಥದಿಂದ ಒಂದು ನದಿಯು ಉದ್ಭವವಾಗುವುದು. ಅದರಲ್ಲಿ ನೀನು ಸ್ನಾನಮಾಡಿದರೆ, ನಿನ್ನ ದೋಷ ಪರಿಹಾರವಾಗುವುದು.'

ಪರಶುರಾಮನು ಹಾಗೆಯೇ ಮಾಡಿದನು. ಆ ಮಂಗಳ ತೀರ್ಥದಿಂದ ಹುಟ್ಟಿದ ನದಿಯೇ ಭಾರ್ಗವೀ ನದಿ. ಅದರಲ್ಲಿ ಅವನು ಸ್ನಾನಮಾಡಿ ತನ್ನ ಪಾಪ ಕಳೆದು ಹಿಮಾಲಯಕ್ಕೆ ಹೊರಟುಹೋದನು. ಭಾರ್ಗವೀ ನದಿಯ

ಪಡದಲ್ಲಿ ಆಕಾಶ ಮುಟ್ಟುವಷ್ಟು ಎತ್ತರವಿರುವ ಸಂಪಿಗೆ ಮರಗಳು, ಇತರ ಮರಗಳೂ ಇವೆ. ಇಲ್ಲಿ ಒಂದು ದೊಡ್ಡ ಕೆಂಡ ಸಂಪಿಗೆ ಮರದ ಕಾಂಡ ಸುಮಾರು ೬೦-೭೦ ಗಜ ಸುತ್ತಳತೆ ಇದೆ. ಈ ಮರದಡಿಯಲ್ಲಿ ವಾಲಖಿಲ್ಯ ವೈಖಾನಸ ಮಹಾಮುನಿಗಳು ಬಹುಕಾಲ ಪರಮೇಶ್ವರನನ್ನು ಕುರಿತು ತಪಸ್ಸು ಮಾಡುತ್ತಿದ್ದರು.

'ವೇದದಲ್ಲಿ ಪ್ರಣವದಂತೆ, ಸರ್ಪಗಳಲ್ಲಿ ಆದಿಶೇಷನಂತೆ ಪಕ್ಷಿಗಳಲ್ಲಿ ಗರುಡನಂತೆ, ವೃಕ್ಷಗಳಲ್ಲಿ ಅಶ್ವತ್ಥದಂತೆ, ಮೃಗಗಳಲ್ಲಿ ಸಿಂಹದ ಹಾಗೆ, ನದಿಗಳಲ್ಲಿ ಭಾರ್ಗವಿಯು ಬಹು ಶ್ರೇಷ್ಠವಾದುದು.' ಎಂದು ಗೌತಮನು ಹೇಳಿದನು.

'ಗೌತಮಾ! ಈ ಬೆಟ್ಟದಲ್ಲಿ ಇನ್ನೇನಾದರೂ ಪ್ರೇಕ್ಷಣೀಯ ಸ್ಥಳವಿದೆಯೇ?' ಎಂದು ಉದಂಕನು ಕೇಳಿದನು.

'ಉದಂಕಾ! ಅಂತಹ ಸ್ಥಳಗಳಿಗೇನು ಕಡಿಮೆ ಇಲ್ಲಿ? ಅಗೋ ನೋಡು, ಇಲ್ಲಿಗೆ ಸ್ವಲ್ಪ ದೂರದಲ್ಲಿ ಕಾಣುವ ದೇವಾಲಯದಲ್ಲಿ ವಿಷ್ಣು ಮಹೇಶ್ವರರಿಬ್ಬರೂ ನೆಲಸಿರುವುದೇ ವಿಶೇಷ. ಅವನಿರುವಲ್ಲಿ ಇವನಿದ್ದಾನೆ. ಇವನಿರುವಲ್ಲಿ ಅವನಿರುವುದು ಸಹಜವಲ್ಲವೇ?' ಎಂದನು ಗೌತಮ.

ಮಹೇಶ್ವರನು ಇಲ್ಲಿ ಬಂದು ನೆಲಸುವುದಕ್ಕೆ ಕಾರಣವಾದರೂ ಏನು? ದಯವಿಟ್ಟು ತಿಳಿಸುವೆಯಾ' ಎಂದು ಕೇಳಿದನು.

ಕಾರಣವಿಲ್ಲದೆ ಯಾವುದೂ ನಡೆಯುವುದಿಲ್ಲ ಉದಂಕಾ!

ಬಹುಕಾಲದ ಹಿಂದೆ ಭಸ್ಮಾಸುರನೆಂಬ ರಾಕ್ಷಸನು ಪರಮೇಶ್ವರನನ್ನು ಕುರಿತು ತಪಸ್ಸು ಮಾಡಿದನು. ಪರಮೇಶ್ವರನು ಅವನ ಭಕ್ತಿಗೆ ಮೆಚ್ಚಿ ಪ್ರತ್ಯಕ್ಷನಾಗಿ ವರಬೇಡುವಂತೆ ಹೇಳಿದನು. ಆಗ ರಾಕ್ಷಸನು, ತಾನು ಯಾರ ತಲೆಯ ಮೇಲೆ ಕೈ ಇಟ್ಟರೆ, ಅವರು ಭಸ್ಮವಾಗುವಂತೆ ಕರುಣಿಸಬೇಕೆಂದು ಬೇಡಿದನು. ಹಾಗೆಯೇ ಆಗುವುದೆಂದು ಪರಮೇಶ್ವರನು ಹೇಳಿದನು. ವರವನ್ನು ಪರೀಕ್ಷಿಸಬೇಡವೆ? ರಾಕ್ಷಸನು ಸುತ್ತಲೂ ನೋಡಿದ. ಯಾರೂ ಇರಲಿಲ್ಲ. ಎದುರಿಗೆ ಈಶ್ವರನು ಮಾತ್ರ ಇದ್ದ. ಅವನ ತಲೆಯ ಮೇಲೆ ಕೈಯಿಡಲು ಕೈಯೆತ್ತಿ ಮುಂದೆ ಬಂದನು. ರಾಕ್ಷಸ ಬುದ್ಧಿ; ಕೃತಜ್ಞತೆ ಹೇಗೆ ತಾನೆ ಹುಟ್ಟುವುದು. ಇದನ್ನು ಕಂಡು ಈಶ್ವರನಿಗೆ ಭಯವಾ

ಯಿತು. ಕೊಟ್ಟ ವರ ಹಿಂದಕ್ಕೆ ತೆಗೆದುಕೊಳ್ಳುವಂತಿರಲಿಲ್ಲ. ಕೂಡಲೆ ಬಿಳಿಗಿರಿವಾಸನ ಹತ್ತಿರ ಬಂದು ನಡೆದುದನ್ನು ಹೇಳಿ, ರಾಕ್ಷಸನು ಅಟ್ಟಿಬರುವ ವಿಷಯವನ್ನು ತಿಳಿಸಿದ. ಭಕ್ತರನ್ನು ಕಾಪಾಡುವುದು ವಿಷ್ಣುವಿನ ಕೆಲಸವಲ್ಲವೇ? ರಾಕ್ಷಸನು ಬರುವ ವೇಳೆಗೆ ವಿಷ್ಣುವು ಮೋಹಿನಿ ರೂಪ ತಾಳಿ ಎದುರಿಗೆ ನಿಂತ. ತೊಂಡೆಹಣ್ಣಿನಂತಿರುವ ತುಟಿ, ತುಂಬಿದ ಕೇಶರಾಶಿ, ಮಂಗಳಕರನೋಟ, ಮುತ್ತಿನ ಮಣಿಯಂತಿರುವ ಮೂಗು, ನವರತ್ನ ಆಭರಣಗಳಿಂದ ಅಲಂಕಾರವಾಗಿರುವ ಮೋಹಿನಿಯನ್ನು ಕಂಡು ರಾಕ್ಷಸನು ಬೆರಗಾಗಿ, 'ತನ್ನನ್ನು ವರಿಸುವಂತೆ' ಬೇಡಿದ.

ಆಗ ಮೋಹಿನಿಯು 'ಎಲೈ ರಾಕ್ಷಸಾ! ನಿನ್ನ ಶರೀರ ಕಶ್ಮಲದಿಂದ ಕೂಡಿದೆ. ಬಹುವಾಗಿ ಆಯಾಸಗೊಂಡಿದ್ದೀಯೆ. ಅಗೋ ಕಾಣುವ ಗಜಾಕುಂಡ ತೀರ್ಥದಲ್ಲಿ, ಶಾಸ್ತ್ರರೀತಿಯಾಗಿ ಸಂಕಲ್ಪ ಪೂರ್ವಕ ಸ್ನಾನಮಾಡಿ, ಶುಚಿರ್ಭೂತನಾಗಿ ಬಾ. ನಾನು ಅಲ್ಲಿಯವರೆಗೂ ಇಲ್ಲಿಯೆ ಇರುವೆನು,' ಎಂದು ಹೇಳಿದಳು.

ರಾಕ್ಷಸನಿಗೆ ಹಿಂದೆ ನಡೆದುದು ಆಕ್ಷಣದಲ್ಲಿ ಮರೆತು, ತೀರ್ಥದಲ್ಲಿ ಆಚಮನ ಮಾಡಿ, ಸಂಕಲ್ಪ ಮಾಡುವುದಕ್ಕಾಗಿ ತನ್ನ ಕೈಯನ್ನು ಮರೆತು, ತನ್ನ ತಲೆಯಮೇಲೆ ಇಟ್ಟುಕೊಂಡನು. ಕೂಡಲೇ ಭಸ್ಮೀಭೂತನಾದನು.

ಹಾಗಾದುದನ್ನು ಕಂಡು ಈಶ್ವರನು ಸಂತೋಷಗೊಂಡು ಶ್ವೇತಾದ್ರಿವಾಸನ ಉಪಾಯವನ್ನು ಕೊಂಡಾಡಿ. ತಾನು ಅವನ ಸಾನ್ನಿಧ್ಯದಲ್ಲಿಯೇ ನೆಲಸುವುದಾಗಿ ಕೇಳಿದನು. ಅವನ ಇಷ್ಟದಂತೆ, ಅಗೋ ಅಲ್ಲಿ ಕಾಣುವ ಗಂಗಾಧರೇಶ್ವರ ದೇವಾಲಯದಲ್ಲಿ ಅವನಿದ್ದಾನೆ. ಅದರ ಪಕ್ಕದಲ್ಲಿರುವ ತೀರ್ಥವೇ ಸರ್ವ ತಾಪವೂ ಪರಿಹಾರವಾಗುವುದು.

ಶ್ವೇತಾದ್ರಿಯ ಪ್ರೇಕ್ಷಣೀಯ ಸ್ಥಳಗಳನ್ನೆಲ್ಲಾ ನೋಡಿ, ಸ್ವಾಮಿಯ ದರ್ಶನ ಮಾಡಿ ಅಲ್ಲಿ ಕೆಲವು ದಿವಸಗಳಿದ್ದು, ತಮ್ಮ ಪ್ರವಾಸವನ್ನು ಮುಂದುವರಿಸಿದರು.

ಅಲ್ಲಿಂದ ದಕ್ಷಿಣಾಭಿಮುಖವಾಗಿ ಹೊರಟು ನಾರಾಯಣಗಿರಿಗೆ ಬಂದರು. ಅಲ್ಲಿನ ಆಕರ್ಷಣೀಯ ನೋಟವನ್ನು ಕಂಡು ಉದಂಕನು ಆಶ್ಚರ್ಯಪಟ್ಟು ಅದರ ಪೂರ್ವ ಕಥೆ ಏನೆಂದು ಗೌತಮನನ್ನು ಕೇಳಿದನು.

ಉದಂಕಾ! ಸಕಾಲದಲ್ಲಿ ಜ್ಞಾಪಿಸಿದೆ. ಅಗತ್ಯವಾಗಿ ತಿಳಿಸುತ್ತೇನೆ ಕೇಳು. ಪೂರ್ವದಲ್ಲಿ ಬ್ರಹ್ಮನು ಮಹಾವಿಷ್ಣುವಿನ ನಾಭಿ ಕಮಲದಲ್ಲಿ ಹುಟ್ಟಿ ಬೆಳೆಯುತ್ತಿದ್ದಾಗ, ಮಹಾಲಕ್ಷ್ಮಿಯು, ಅವನಿಗೆ ವೇದ, ವೇದಾಂಗಗಳೆನ್ನೆಲ್ಲಾ ಉಪದೇಶಮಾಡುವಂತೆ ಭಗವಂತನಿಗೆ ಸೂಚಿಸಿದಳು. ಅದರಂತೆ ಬ್ರಹ್ಮನು ಉಪದೇಶ ಪಡೆದು, ಸೃಷ್ಟಿ ಸಾಮರ್ಥ್ಯ ಪಡೆದನು. ತಾನು ಸೃಷ್ಟಿ ನಿಮಿತ್ತವಾದರೂ, ಸಮಸ್ತ ಜೀವಕೋಟಿಗಳೂ, ಇಡೀ ಜಗತ್ತೂ ಆದಿ ದಂಪತಿಗಳ ಅನುಗ್ರಹದಿಂದ ಮಾತ್ರ ಉಳಿದಿವೆ ಎಂಬುದನ್ನು ಅರಿತಿದ್ದನು. ಶ್ರೀಮನ್ನಾರಾಯಣನೇ ತನಗೆ, ಪರಮ ಗುರುವೆಂದು ತಿಳಿದು, ಅವನನ್ನು ಪಲವು ವಿಧದಲ್ಲಿ ಸ್ತೋತ್ರ ಮಾಡಿದನು. ಪರಮಾತ್ಮನು ಅನಂತ ಗರುಡ ವಿಷ್ವಕ್ಸೇನಾದಿಗಳಿಂದ ಪರಿವೃತನಾಗಿ, ಸಕಲ ಭಕ್ತವೃಂದದೊಡನೆ ಬ್ರಹ್ಮನಿಗೆ ದರ್ಶನ ಕೊಟ್ಟನು. ಅವನನ್ನು ನೋಡಿ ಬ್ರಹ್ಮನು ಮನಸ್ಸಿನಲ್ಲಿ ಹಿಗ್ಗಿ. ಹೀಗೆ ಹೇಳಿದನು.

"ಲಕ್ಷ್ಮೀವಲ್ಲಭನೇ! ಭಕ್ತರ ಇಷ್ಟಾರ್ಥವನ್ನು ಸಲ್ಲಿಸುವ ಕಾಮಧೇನು ನೀನು. ಲೋಕ ರಕ್ಷಣಾರ್ಥವಾಗಿ ಅನೇಕ ಅವತಾರವನ್ನೆತ್ತಿ ದುಷ್ಟ ನಿಗ್ರಹ ಮಾಡಿದೆ. ಇಂತಹ ಸರ್ವ ಶ್ರೇಷ್ಠನಾದ ನಿನ್ನನ್ನು ನಾನು ನಿತ್ಯವೂ ಪೂಜೆ ಮಾಡಬೇಕು. ದಯವಿಟ್ಟು ಅರ್ಚಾಮೂರ್ತಿಯೊಂದನ್ನು ದಯಪಾಲಿಸು."

ವಿಧಾತನ ಪ್ರಾರ್ಥನೆಯಂತೆ ಸರ್ವೇಶ್ವರನು ತನ್ನ ಅರ್ಚಾಮೂರ್ತಿಯನ್ನು ಅವನಿಗೆ ಕೊಟ್ಟನು. ಕೆಲವು ಕಾಲದಮೇಲೆ, ಬ್ರಹ್ಮಪುತ್ರರಾದ ಸನಕ, ಸನಂದ ಸನತ್ಕುಮಾರರು, ತಾವು ಭೂಲೋಕಕ್ಕೆ ಹೋಗುವುದಾಗಿಯೂ, ಅಲ್ಲಿ ಆರಾಧನೆಗೆ ಆ ಅರ್ಚಾಮೂರ್ತಿಯನ್ನು ಕೊಡಬೇಕೆಂದೂ, ಬ್ರಹ್ಮನಲ್ಲಿ ಮೊರೆ ಇಟ್ಟರು. ಅವನು ಸಮ್ಮತಿಸಿ, ವಿಗ್ರಹವನ್ನು ಅವರಿಗೆ ಕೊಟ್ಟನು. ಅವರು, ಸಹ್ಯಾದ್ರಿ ಪರ್ವತದ ಪೂರ್ವದಿಕ್ಕಿನ, ಶ್ವೇತಮೃತ್ತಿಕೆಯಿಂದ ಪ್ರಕಾಶಿಸುವ, ಈ ಆನಂದಮಯ ಅದ್ರಿಗೆ ಬಂದು, ಇಲ್ಲಿ ಆ ವಿಗ್ರಹವನ್ನು ಪ್ರತಿಷ್ಠೆ ಮಾಡಿ, ಪರಮಾತ್ಮನ ಅಮಾನುಷ ಮಹಿಮೆಯನ್ನು ಕೊಂಡಾಡಿದರು. ಅಂದಿನಿಂದ ಇದು ನಾರಾಯಣಗಿರಿ ಆಯಿತು.

ಉದಂಕಾ! ನಾರಾಯಣಗಿರಿಯಲ್ಲಿ ಬಹುಶ್ರೇಷ್ಠ ತೀರ್ಥಗಳಿವೆ,

ನಾರಾಯಣಗಿರಿಗೆ ದಕ್ಷಿಣದಲ್ಲಿ ವೇದಪುಷ್ಕರಿಣಿ ತೀರ್ಥವಿದೆ. ಇಲ್ಲಿ ಪರಮಾತ್ಮನು, ದತ್ತಾತ್ರೇಯ ರೂಪಿಯಾಗಿ, ವೇದಾರ್ಥವನ್ನು ಪ್ರಚುರಪಡಿಸಿದನಂತೆ, ಇಲ್ಲಿ ಪರಿಧಾನ ಶಿಲೆಯೊಂದು ಇದೆ. ಸನ್ಯಾಸಾಶ್ರಮ ಸ್ವೀಕರಿಸುವವರು ಆ ಶಿಲೆಯ ಮೇಲೆ ಕಾಷಾಯ ಇಟ್ಟು ಸ್ವೀಕರಿಸುವರು.

ವಾಯುವ್ಯದಿಕ್ಕಿನಲ್ಲಿ ಯಾದವ ತೀರ್ಥವಿದೆ. ಯಾದವೇಂದ್ರ ರಾಜನು ಇಲ್ಲಿ ಯಜ್ಞ ಮಾಡಿ ಇಂದ್ರಪದವಿ ಪಡೆದನು. ಇದರ ಪಕ್ಕದಲ್ಲಿ ಯಾದವ ನದಿ ಇದೆ. ನಾರಾಯಣಗಿರಿಯ ಪಶ್ಚಿಮ ಭಾಗದಲ್ಲಿ ದರ್ಭ ತೀರ್ಥವಿದೆ. ಇಲ್ಲಿ ಶಾಂಡಿಲ್ಯ ಮುನಿಗಳ ಆಶ್ರಮವಿತ್ತು. ಇದರ ಉತ್ತರಕ್ಕೆ ಪಲಾಶತೀರ್ಥ, ವಿಶ್ವಾಮಿತ್ರ ಋಷಿಯಿಂದ ಶಾಪಗ್ರಸ್ತನಾದ ವಸಿಷ್ಠಪುತ್ರನು ಇಲ್ಲಿ ಸ್ನಾನ ಮಾಡಿ, ತನ್ನ ಚಂಡಾಲತ್ವ ನೀಗಿದನು. ಪಲಾಶತೀರ್ಥದ ಪಕ್ಕದಲ್ಲಿ ಪದ್ಮ ತೀರ್ಥ, ಸನತ್ಕುಮಾರನು ಇಲ್ಲಿದ್ದ ಪದ್ಮಗಳಿಂದ ನಿತ್ಯವೂ ಶ್ರೀಮನ್ನಾರಾಯಣನ ಅರ್ಚನೆ ಮಾಡುತ್ತಿದ್ದನು. ಎಲ್ಲಕ್ಕಿಂತ ಮೇಲಾಗಿ ಕಲ್ಯಾಣತೀರ್ಥವು ಶ್ರೇಷ್ಠವಾದುದು. ಶ್ರೀಮನ್ನಾರಾಯಣನು, ವರಾಹ ರೂಪಿಯಾಗಿ ಭೂಮಿಯನ್ನು ಉದ್ಧರಿಸಿ, ಸಮುದ್ರ ಮೇಲಕ್ಕೆ ಬಂದಾಗ, ಅವನಿಂದ ಉದ್ಭವವಾದ ತೀರ್ಥ ಇದು. ಇದರ ದಡದಲ್ಲಿ ಆದಿವರಾಹಸ್ವಾಮಿ ದೇವಾಲಯವಿದೆ. ಸನತ್ಕುಮಾರನು ಮೊದಲು ಇಲ್ಲಿ ಸ್ನಾನಮಾಡಿ, ಅಲ್ಲಿ ನೆರೆದಿದ್ದ ಋಷಿಗಳೊಡನೆ ಭಗವಂತನನ್ನು ಕುರಿತು, 'ಕಲ್ಯಾಣ, ಕಲ್ಯಾಣ' ಎಂದು ಸ್ತುತಿಸಿದನು. ಅಂದಿನಿಂದ ಇದಕ್ಕೆ ಕಲ್ಯಾಣಿ ಎಂದು ಹೆಸರಾಯಿತು. ಇದರ ಸುತ್ತಲೂ ಕೈಸಾಲೆ, ಮಂಟಪ, ಮಠಗಳಿವೆ. ಶ್ರೀಮಾಧವ ಆದಿಶೇಷ, ಗಜೇಂದ್ರವರದ, ಕರಣೀಕ ನಾರಾಯಣ, ದೇವರ ವಿಗ್ರಹ ಪ್ರತಿಷ್ಠಿತವಾಗಿವೆ. ಪಂಚಭಾಗವತ ಕ್ಷೇತ್ರ, ಜ್ಞಾನಾಶ್ವತ್ಥವೂ ಇಲ್ಲಿಯೇ ಇವೆ.

ಗೌತಮಾ! ಭಗವಂತನು ಇಂತಹ ಇನ್ನೆಷ್ಟು ಪುಣ್ಯಸ್ಥಳಗಳನ್ನು ನಿರ್ಮಿಸಿರುವನೋ? ಆಶ್ಚರ್ಯದ ಮೇಲೆ ಆಶ್ಚರ್ಯ ಕಾಣುತ್ತಿದ್ದೇನೆ. ಎಷ್ಟು ರಮ್ಯವಾದ ಕ್ಷೇತ್ರ, ಇದು?

ಉದಂಕಾ! ನೀನು ಹೇಳುವುದು ನಿಜ. ಭಗವಂತನ ಲೀಲೆಯು ಅದ್ಭುತವನ್ನು ತಿಳಿಯಲು ಮಾನವರಿಗೆ ಸಾಧ್ಯವೇ? ಇಲ್ಲ. ಜ್ಞಾನ, ಭಕ್ತಿ, ವೈರಾಗ್ಯ ಸಾಧನೆಗಾಗಿ ಪರಮಾತ್ಮನು ಇಂತಹ ಸ್ಥಳಗಳನ್ನು ನಿರ್ಮಿಸಿದ್ದಾನೆ.

ಯೂನವನು ಇಲ್ಲಿಗಾದರೂ ಬಂದು, ಅವನ ನಾಮಸ್ಮರಣೆ ಮಾಡಿ, ಅರಿಷಡ್ವರ್ಗಗಳನ್ನು ಜಯಿಸಿ, ಮೋಕ್ಷ ಸಾಧನೆ ಮಾಡಲೆಂದೇ, ಇವುಗಳ ನಿರ್ಮಾಣವಾಗಿದೆ. ನಾವು ಇವೆಲ್ಲವನ್ನು ನೋಡಿ ಪುನೀತರಾಗೋಣ ನಡೆ.

ಪಕ್ಕದಲ್ಲಿದ್ದ ಗೋವರ್ಧನ ಪರ್ವತಕ್ಕೆ ಒಂದು ದಿನ ಅವರು ಹೋದರು. ಅಲ್ಲಿನ ಸರೋವರದಲ್ಲಿ ಸ್ನಾನಮಾಡಿ ನಿತ್ಯಕರ್ಮಗಳನ್ನು ಮಾಡುತ್ತಿದ್ದಾಗ, ಯಾರೋ ವೇದಗಾನ ಮಾಡುತ್ತಿದ್ದ ಇಂಪಾದ ಧ್ವನಿ ಅವರಿಗೆ ಕೇಳಿಸಿತು. ಅಂತಹ ನಿರ್ಜನ ಪ್ರದೇಶದಲ್ಲಿ, ಅಷ್ಟು ಸ್ಫುಟವಾಗಿ, ಸ್ವರಸಮೇತ ವೇದಾಧ್ಯಯನ ಮಾಡಬೇಕಾದರೆ, ಯಾವುದೋ ಸಿದ್ಧಾಶ್ರಮ ಹತ್ತಿರವಿರಲೇಬೇಕೆಂದು ಅವರು ನಿಶ್ಚಯಮಾಡಿದರು. ಹತ್ತಿರದಲ್ಲೆಲ್ಲಾದರೂ ಆಶ್ರಮ ಇದ್ದರೆ ನೋಡಿ ಬರುವಂತೆ ಗೌತಮನು ಉದಂಕನಿಗೆ ಹೇಳಿದನು.

ಸುತ್ತಮುತ್ತ ನೋಡಿ ಬಂದು, ಏನೂ ಕಾಣಿಸಲಿಲ್ಲವೆಂದು ಉದಂಕನು ಉತ್ತರವಿತ್ತನು. ಗೌತಮನಿಗೆ ತೃಪ್ತಿಯಾಗಲಿಲ್ಲ. ವೇದಗಾನ ಬರುತ್ತಿದ್ದ ದಿಕ್ಕನ್ನೇ ಅನುಸರಿಸಿ ಮುಂದೆ ಹೋದನು. ಹೋದಂತೆಲ್ಲಾ ಧ್ವನಿಯು ಸ್ಫುಟವಾಯಿತು. ಅಲ್ಲೊಂದು ಕಾಲುದಾರಿ ಇದ್ದಿತು. ಅದನ್ನೇ ಅನುಸರಿಸಿ ಇನ್ನೂ ಸ್ವಲ್ಪ ಮುಂದೆ ಹೋದನು. ಜೊತೆಯಲ್ಲಿ ಉದಂಕನೂ ಬರುತ್ತಿದ್ದ. ಗೋವರ್ಧನ ಗಿರಿಯ ತುದಿಯವರೆಗೂ ಬಂದಾಯಿತು. ಮುಂದೆಲ್ಲಿಗೆ ಹೋಗುವುದು? ಸುತ್ತಲೂ ಅಲ್ಲಲ್ಲಿ ದೊಡ್ಡ ದೊಡ್ಡ ಬಂಡೆಗಳಿದ್ದುವು. ಒಂದು ಕಡೆ ಎತ್ತರವಾದ ಶಿಖರದ ಬಂಡೆ. ಇನ್ನೊಂದು ಕಡೆ, ಪಾತಾಳದಷ್ಟು ಆಳವಾದ ಕಂದಕ. ಸ್ವಲ್ಪ ಮೈ ಮರೆತು ಜಾರಿದರೆ, ಸಾಕು, ಶರೀರದ ಮೂಳೆಗಳೆಲ್ಲಾ ನುಚ್ಚುನೂರಾಗಿ ಮುರಿದು ಹೋಗುವ ಸನ್ನಿವೇಶ. ಅಲ್ಲಿಗೂ ವೇದಗಾನ ಕೇಳಿ ಬರುತ್ತಲೇ ಇತ್ತು.

ಅಲ್ಲಿಯೇ ನಿಂತು ಗೌತಮನು ಸುತ್ತಲೂ ಚೆನ್ನಾಗಿ ನೋಡಿದನು. ಒಂದು ದೊಡ್ಡ ಬಂಡೆಯ ತಳದಲ್ಲಿ ಒಂದು ಸಣ್ಣ ರಂಧ್ರ ಕಣ್ಣಿಗೆ ಬಿತ್ತು. ಬಂಡೆಯ ಮೇಲೆ ನಡೆಯಲು ಬಲು ಜಾರಿಕೆ ಇತ್ತು. ಆದರೆ ಅಲ್ಲಲ್ಲಿ ಸಣ್ಣ ಗುಂಡುತುಗಳಿದ್ದುವು. ಗೌತಮನು ಮೆಲ್ಲನೆ ಆ ಗುಳುಗಳಲ್ಲಿ ಕಾಲಿನ ಬೆರಳನ್ನು ಗಟ್ಟಿಯಾಗಿ ಊರಿ ಅಂಬೆಗಾಲಿನಲ್ಲಿ ನಡೆದು ಬಂಡೆಯ ಬುಡದ ದ್ವಾರದ ಮುಂದಕ್ಕೆ ಬಂದನು. ಒಳಗೆ ನೋಡಿದರೆ ಕತ್ತಲೆ. ಅಲ್ಲಿಂದಲೇ,

ಧ್ವನಿ ಬರುತ್ತಿದ್ದಿತೆಂಬ ವಿಷಯ ಮನದಟ್ಟಾಯಿತು. ಹೇಗಾದರೂ ಆಗಲೆಂದು ದ್ವಾರದಲ್ಲಿ ಇಳಿದನು. ಇಳಿಯುವಾಗ ಕಾಲಿಗೆ ಯಾವ ಸಹಾಯವೂ ದೊರೆಯದಿದ್ದುದರಿಂದ, ೫-೬ ಅಡಿ ಕೆಳಕ್ಕೆ ಬಿದ್ದುಬಿಟ್ಟನು. ಅಲ್ಲಿ ಮೆತ್ತನಾದ ಸ್ಥಳವಿದ್ದುದರಿಂದ ಅವನಿಗೆ ನೋವೇನೂ ಆಗಲಿಲ್ಲ. ಉದಂಕನನ್ನೂ ಇಳಿಸಿಕೊಂಡನು.

ಅಲ್ಲಿಂದ ಮುಂದಕ್ಕೆ ಹೋದಂತೆಲ್ಲಾ ಸ್ವಲ್ಪ ಸ್ವಲ್ಪ ಬೆಳಕು ಬರುತ್ತಿತ್ತು. ಸುಮಾರು ಇಪ್ಪತ್ತು ಗಜ ದೂರ ಗುಹಾದ್ವಾರದಲ್ಲಿ ಹೋದಮೇಲೆ, ವಿಶಾಲ ಗುಹೆಯೊಂದು ಸಿಕ್ಕಿತು. ಅಲ್ಲಿಯೇ ಒಂದು ಕಡೆ ಒಬ್ಬ ತಪಸ್ವಿಯು ಕೃಷ್ಣಾಜಿನದ ಮೇಲೆ ಕುಳಿತಿದ್ದನು. ಅವನ ತೇಜೋಮೂರ್ತಿಯನ್ನು ಇಬ್ಬರು ಮುನಿಕುಮಾರರೂ ನೋಡುತ್ತ ದೀರ್ಘದಂಡ ನಮಸ್ಕಾರ ಮಾಡಿದರು. ಎಸಳಾದ ಮೂಗು, ವಿಶಾಲವಾದ ಎದೆ, ಎತ್ತರವಾದ ಭುಜ, ಉದ್ದವಾಗಿದ್ದ ಬಿಳಿಯಗಡ್ಡ, ತೆಳನೆಯ ಹೊಟ್ಟೆಯ ಮೇಲಿನ ಮೂರು ಮಡಿಕೆ, ಅದರಲ್ಲಿ ಹುದುಗಿಹೋಗಿದ್ದ ನಾಭಿ, ಪದ್ಮಾಸನಸ್ಥನಾಗಿ ಧ್ಯಾನದಲ್ಲಿದ್ದ ಮುನಿಯನ್ನು ಕಂಡು, ಗೌತಮನಿಗೆ ಪೂಜ್ಯ ಭಾವನೆ ಹುಟ್ಟಿತು. ಇಬ್ಬರೂ ಆ ಮಹಾತ್ಮನನ್ನೇ ಗೌರವ ದೃಷ್ಟಿಯಿಂದ ನೋಡುತ್ತ ಸ್ವಲ್ಪ ಕಾಲ ನಿಂತಿದ್ದರು.

ಮುನಿಯು ಕಣ್ಣು ತೆರೆದು, ಗೌತಮನ ಕಡೆ ನೋಡಿ 'ಶ್ರೀರಂಗಪುರದಿಂದ ಬಂದಿರುವ ಮುನಿಕುಮಾರನಲ್ಲವೇ ನೀನು' ಎಂದನು.

ಗೌತಮನಿಗೆ ಆಶ್ಚರ್ಯವಾಯಿತು. ತ್ರಿಕಾಲಜ್ಞರಿಗೆ ಇದು ಸಹಜವಾಗಿಯೇ ತಿಳಿಯುವುದೆಂದುಕೊಂಡನು. ಗುರುದೇವನು ತಿಳಿಸಿದ ಮಹಾತ್ಮನೇ ಇವರಿರಬಹುದೆಂದು ಊಹಿಸಿ, 'ಹೌದು, ಮಹಾತ್ಮರೇ' ಎಂದು ಉತ್ತರಕೊಟ್ಟನು.

'ವತ್ಸಾ! ಗೌತಮಾ! ನಿನ್ನ ಗುರುದೇವನು ಏತಕ್ಕಾಗಿ ನಿನ್ನನ್ನು ಇಲ್ಲಿಗೆ ಕಳುಹಿಸಿರುವನೆಂಬುದನ್ನು ನಾನು ಅರಿತಿದ್ದೇನೆ. ನೀನು ಕಾತುರನಾಗಬೇಡ. ಇಲ್ಲಿಯೇ ಸ್ವಲ್ಪ ಕಾಲ ಇರು. ಒಳಗೆ ಹೋಗಿ ವಿಶ್ರಮಿಸಿಕೋ. ನಿನ್ನ ಇಷ್ಟಾರ್ಥ ಸಿದ್ಧಿಸುವ ಕಾಲ ಸಮೀಪವಾಗುತ್ತಿದೆ' ಎಂದು ಅಪ್ಪಣೆ ಇತ್ತನು.

ತೀರ್ಥಯಾತ್ರೆ, ಪುಣ್ಯಸ್ಥಳದ ದರ್ಶನ, ಸಾಧುಸತ್ಪುರುಷರ ಸಮಾಗಮ

ಎಲ್ಲವೂ ಸಾಮಾನ್ಯವಾಗಿ ಎಲ್ಲರಿಗೂ ಲಭಿಸುವುದಿಲ್ಲ. ಎಲ್ಲರಿಗೂ ಇಂತಹ ಅವಕಾಶ ದೊರೆಯುವುದೂ ಇಲ್ಲ. ಮಹಾತ್ಮನು ಇದ್ದಲ್ಲಿಯೇ ಇದ್ದುಕೊಂಡು, ಯಾರ ಕಣ್ಣಿಗೂ ಬೀಳದೆ, ತಮ್ಮ ಯೋಗಬಲದಿಂದ, ಬ್ರಹ್ಮಜ್ಞಾನಶಕ್ತಿಯಿಂದ, ಜಗತ್ತಿಗೆ ಹಿತವನ್ನು ಕೋರುವನು. ಎಲ್ಲರಿಗೂ ಮಂಗಳವಾಗಲೆಂದು ಹರಸುವನು. ಪರಮಾತ್ಮನ ಮಹಿಮೆ ತಿಳಿಯಬೇಕಾದರೆ, ಇಂತಹ ಮಹಾಪುರುಷರ ದರ್ಶನ ಮಾಡಬೇಕು. ಅವರ ಪ್ರಭಾವವನ್ನು ತಿಳಿದು ಅವರಲ್ಲಿ ಉಪದೇಶ ಪಡೆಯಬೇಕು. ಆ ಮಹಾತ್ಮನ ಅಪ್ಪಣೆಯಂತೆ ಗೌತಮನು ಆಶ್ರಮದಲ್ಲಿ ಕೆಲವು ಕಾಲ ನಿಂತನು. ಅವರಲ್ಲಿ ಉಪದೇಶ ಪಡೆದನು. ವಿದ್ಯಾಪಾರಂಗತನಾದ ಗೌತಮನಿಗೆ, ಆ ಮಹಾತ್ಮನಿಂದ ಹೆಚ್ಚಿನ ಜ್ಞಾನ ಸಂಗ್ರಹ ಮಾಡುವುದು ಕಷ್ಟವಾಗಲಿಲ್ಲ. ಪ್ರಪಂಚ ವ್ಯವಹಾರ ಜ್ಞಾನವನ್ನು ಪೂರ್ತಿಯಾಗಿ ಪಡೆದನು. ಅವರ ಅನುಗ್ರಹದ ಫಲವಾಗಿ, ಗೌತಮನ ತೇಜಸ್ಸು ಹೆಚ್ಚಿತು. ಚಿತ್ತ ಚಾಂಚಲ್ಯ ಮರೆಯಾಯಿತು. ಹೀಗೆ ಗೌತಮನು ಆ ಮಹಾತಪಸ್ವಿಯ ಅಂತರಂಗ ಪ್ರೀತಿಗೆ ಪಾತ್ರನಾಗಿ, ತನ್ನ ವಿದ್ಯಾರ್ಜನೆಯನ್ನು ಸಾಂಗವಾಗಿಸಿದನು.

'ವತ್ಸಾ! ಗೌತಮಾ! ನೀನು ಆಶ್ರಮ ಬಿಟ್ಟು ಬಹಳ ದಿನಗಳಾದುವು. ಎಲ್ಲರೂ ನಿನ್ನ ಅಗಲಿಕೆಯಿಂದ ನೊಂದಿದ್ದಾರೆ. ನಿನ್ನ ಗುರುದೇವನೂ ಕೂಡ, ನಿನ್ನ ಆಗಮನದ ನಿರೀಕ್ಷೆಯಲ್ಲಿದ್ದಾನೆ. ಆಶ್ರಮವಾಸಿಗಳೆಲ್ಲಾ ನಿನ್ನ ಬರುವಿಕೆಯನ್ನೇ ಎದುರು ನೋಡುತ್ತಿರುವರು. ಇನ್ನು ತಡಮಾಡದೆ ನಾಳೆ ಉಷಃಕಾಲಕ್ಕೆ ಎದ್ದು, ಈ ಸರಳ ಮಾರ್ಗದಲ್ಲಿ ಉದಂಕನೊಡನೆ, ಪ್ರಯಾಣ ಬೆಳೆಸಿ, ಶ್ರೀರಂಗಪುರವನ್ನು ಸೇರು' ಎಂದು ಅಪ್ಪಣೆ ಇತ್ತನು.

ಅಸೂಯೆ

ಗೌತಮನು ಯಾತ್ರೆಯ ಕಾಲದಲ್ಲಿ ಸೃಷ್ಟಿ ಸೌಂದರ್ಯದ ಸವಿಯನ್ನು ಕಂಡನು. ಯೋಗಿಗಳ, ತಪಸ್ವಿಗಳ, ಮಹರ್ಷಿಗಳ ದರ್ಶನ, ಹಿತೋ

ಪದೇಶದಿಂದ ವಿಷಯಸಂಗ್ರಹಮಾಡಿ, ಹೆಚ್ಚು ಸುಸಂಸ್ಕೃತನಾದನು. ಅವನ ಜ್ಞಾನ ಮತ್ತಷ್ಟು ವೃದ್ಧಿ ಆಯಿತು. ದಾರಿಯಲ್ಲಿ ಸಿಕ್ಕಿದ ರೈತರ, ಭಂಗಿಗಳ, ಕೆಲಸಗಾರರ ಜೀವನದ ಕಷ್ಟ ನಷ್ಟಗಳನ್ನು ನೋಡಿ, ಅವನ ಭಾವನೆ ಜಾಗೃತವಾಯಿತು. ಅರಿಷಡ್ವರ್ಗಗಳನ್ನು ಜಯಿಸಿದ್ದನು. ಇವನಲ್ಲುಂಟಾಗಿದ್ದ ಬದಲಾವಣೆಗಳನ್ನು ಕಂಡು ಗುರುದೇವನಿಗೆ ಅಪರಿಮಿತ ಸಂತೋಷವಾಯಿತು. "ಗೌತಮಾ' ನೀನು ಇಂದು ಸಂಪೂರ್ಣ ವಿದ್ಯಾವಂತನಾದೆ. ಅನುಘನು ಕೀರ್ತಿಶಾಲಿಯಾಗು. ಇಂತಹ ಸಚ್ಛಿಷ್ಯನನ್ನು ಹೊಂದಿದ ನಾನೇ ಪುಣ್ಯಶಾಲಿ, ಎಂದನು.

ಗೌತಮನು ಆಶ್ರಮ ಕಾರ್ಯನಿರ್ವಾಹವನ್ನು ವಹಿಸಿಕೊಂಡನು. ಎಂದಿನಂತೆ ಕೆಲಸ ಕಾರ್ಯಗಳೆಲ್ಲಾ ಸಾಂಗವಾಗಿ ನೆರವೇರುತ್ತಿದ್ದುವು. ಒಂದು ಸಾಯಂಕಾಲ, ಕಾವೇರೀ ತೀರದಲ್ಲಿ, ಬಂಡೆಯಮೇಲೆ ಕುಳಿತು ಸೂರ್ಯಾಸ್ತಮಯದ ಸೊಬಗನ್ನು ಸವಿಯುತ್ತಾ ಕುಳಿತಿದ್ದಾನೆ; ಯಾರೋ ಬಂದ ಶಬ್ದವಾಯಿತು. ತಿರುಗಿನೋಡಲು ಆತ್ರೇಯಿ ನಿಂತಿದ್ದಾಳೆ.

ಗೌತಮ—ಆತ್ರೇಯಿ! ಅರಮನೆಯಲ್ಲಿ ಎಲ್ಲರೂ ಕ್ಷೇಮವಷ್ಟೆ? ನೀನೊಬ್ಬಳೇ ಬಂದೆಯಲ್ಲ. ನಿನ್ನ ಗೆಳತಿ ಎಲ್ಲಿ?

ಆತ್ರೇಯಿ—ಮುನಿಕುಮಾರಾ! ಅವಳೈ – ರಾಜಕುಮಾರಿ ಇಷ್ಟರಲ್ಲೇ, ಸಾಮ್ರಾಜ್ಞಿಯಾಗುವುದರಲ್ಲಿದ್ದಾಳೆ. ಅವಳಿಗೆ ನಾನು ಸಮನೇ?

ಗೌತಮ — ಅವಳಲ್ಲಿ ಅಷ್ಟೊಂದು ಬದಲಾವಣೆ ಆಗಿದೆಯೇ? ಇರಲಾರದು. ಹೀಗಾಗುವುದು ಅವಳ ಸ್ವಭಾವಕ್ಕೆ ವಿರೋಧ. ಹುಡುಗಾಟಕ್ಕಾಗಿ ನೀನು ಹಾಗೆ ಹೇಳುತ್ತಿರಬಹುದಲ್ಲವೆ?

ಆತ್ರೇಯಿ—ಇದರಲ್ಲಿ ಹುಡುಗಾಟಿಕೆ ಏನು? ಈಗ್ಗೆ ಸ್ವಲ್ಪದಿನಗಳಲ್ಲಿ ಅರಮನೆಯಲ್ಲಿ ಒಂದು ಸ್ವಯಂವರ ಪ್ರಯತ್ನ ಸಭೆ ನಡೆಯಿತು. ಆಗ ಬಂದಿದ್ದ ರಾಜಮಹಾರಾಜರಲ್ಲಿ ಇಂದ್ರಸೇನ ರಾಜನ ಮಹಾ ವೈಭವವನ್ನು ನೋಡಿ ಅದೇವಿಯು ಮೋಹಿತಳಾಗಿದ್ದಾಳೆ. ಮುಂದಿನ ವಿಜಯದಶಮಿ ದಿವಸ ಸ್ವಯಂವರ ನಡೆಯಬೇಕೆಂದು ನಿಶ್ಚಯವಾಗಿದೆ. ಅಂದಿನಿಂದಲೇ ಅವಳಲ್ಲಿ ಬದಲಾವಣೆ.

ಗೌತಮ— ನಾನು ಯಾತ್ರೆ ಹೋಗಿದ್ದ ಕಾಲದಲ್ಲಿ ಅಹಲ್ಯೆ ಏನಾದರೂ ನನ್ನನ್ನು ಜ್ಞಾಪಿಸಿಕೊಂಡಳೇ?

ಆತ್ರೇಯಿ— ಏನೂ ಇಲ್ಲ. ಅವಳಲ್ಲಿ ಆ ಉತ್ಸಾಹವಿದ್ದಿದ್ದರೆ, ಇಷ್ಟುಹೊತ್ತಿಗೆ ಇಲ್ಲಿಗೆ ಬರಬೇಕಾಗಿತ್ತಲ್ಲವೇ? ಅವಳ ಉದಾಸೀನಕ್ಕೆ ಇದಕ್ಕಿಂತ ದೊಡ್ಡ ನಿದರ್ಶನ ಬೇಕೆ?

ಆತ್ರೇಯಿಯ ಮಾತಿನಲ್ಲಿದ್ದ ಬಿಂಕವನ್ನು ನೋಡಿ ಗೌತಮನು ವ್ಯಥೆಪಟ್ಟನು. ಅಹಲ್ಯೆಯ ವಿಚಾರದಲ್ಲಿ ಸ್ವಲ್ಪ ಅನುಮಾನ ಹುಟ್ಟುವಂತಾಯಿತು.

ಆತ್ರೇಯಿ— ಮುನಿಕುಮಾರರೇ! ನೀವೇಕೆ ಚಿಂತಿಸಬೇಕು. ಅಹಲ್ಯೆಯೊಬ್ಬಳೇ ಸುಂದರಿ ಎಂಬ ಭಾವನೆ ತಮಗಿದೆಯೇ? ನಿಮ್ಮಂತಹ ತಪಸ್ವಿಗಳು ಮುನಿಕನ್ಯೆಯನ್ನು ವಿವಾಹ ಮಾಡಿಕೊಳ್ಳುವುದು ಸೂಕ್ತವಲ್ಲವೇ?

ಗೌತಮ— ಏನು ಹೇಳುತ್ತಿರುವೆ, ಆತ್ರೇಯಿ!

ಆತ್ರೇಯಿ— ಏನೂ ಇಲ್ಲ, ಅಹಲ್ಯೆಗೆ ಅಟ್ಟಹಾಸ ಬೇಕು. ರಾಜವೈಭವದಲ್ಲಿ ಹೆಚ್ಚು ಆಶೆ. ಭೋಗಲಾಲಸೆಗಳ ಮೇಲೆ ಮಮತೆ. ಹೀಗಿರುವಾಗ ಅವಳ ವಿವಾಹದ ಆಶೆಯನ್ನೂ ದೂರವಿಡಿ, ಇನ್ನೊಬ್ಬ ಅನುರೂಪ ಕನ್ಯೆಯನ್ನು ವಿವಾಹ ಮಾಡಿಕೊಳ್ಳುವುದು ಒಳ್ಳೆಯದಲ್ಲವೇ?

ಗೌತಮ— ನಿನ್ನ ಎಲ್ಲೆ ಮೀರಿದ ಮಾತುಗಳನ್ನು ಸಾಕುಮಾಡು. ನಿನ್ನ ಬುದ್ಧಿವಾದಕ್ಕೆ ಇಲ್ಲಿ ಸ್ಥಳವಿಲ್ಲ. ಮನುಷ್ಯನಿಗೆ ಪ್ರೀತಿ ಹುಟ್ಟುವುದು ಒಂದೇಸಲ. ಅದೂ ಒಬ್ಬಳಲ್ಲಿ ಮಾತ್ರ. ಅಹಲ್ಯೆಯನ್ನು ಬಿಟ್ಟು ಮಿಕ್ಕವರೆಲ್ಲಾ ನನ್ನ ಸೋದರಿಯರು. ಪ್ರಣಯದ ಮಾತನ್ನು ಇಲ್ಲಿ ಎತ್ತಬೇಡ. ನಿನ್ನ ಮನಸ್ಸು ಅರಿತಿದ್ದೇನೆ. ಅಸೂಯೆ ತೋರಿಸುವುದಕ್ಕೆ ಇದು ಸ್ಥಳವಲ್ಲ. ಇಲ್ಲಿಂದ ಹೊರಟುಹೋಗು.

ಗೌತಮನ ಮಾತುಗಳು ಆತ್ರೇಯಿಗೆ ಕಠೋರವಾಗಿ ಕಂಡವು. ಅವಳಿಗೆ ಆಶಾಭಂಗವಾಯಿತು. ಸ್ವಲ್ಪದೂರ ಹೋಗಿ ಮರೆಯಲ್ಲಿ ಕುಳಿತು ಅತ್ತಳು. ಆಮೇಲೆ ತಾನೇ ಸಮಾಧಾನ ಮಾಡಿಕೊಂಡು, ಪ್ರತೀಕಾರ ಭಾವನೆಯಿಂದ ಅಲ್ಲಿಂದೆದ್ದು ಅರಮನೆಯ ಕಡೆಗೆ ಹೊರಟಳು.

ಅತ್ರೇಯಿಯು ಬಿತ್ತಿದ ವಿಷಬೀಜ ಗೌತಮನ ಮನಸ್ಸಿನಲ್ಲಿ ಅಂಕುರಿ ಸಾದರೂ ಕೂಡ, ಅಹಲ್ಯೆಯ ಮೇಲಿನ ಮೋಹ ಕಡಿಮೆಯಾಗಿರಲಿಲ್ಲ. ಸ್ವಯಂವರದಲ್ಲಿಯೇ ಅವಳನ್ನು ಗೆಲ್ಲಬೇಕೆಂದು ಸಂಕಲ್ಪ ಮಾಡಿದನು. ಸ್ವಯಂವರ ವಿಷಯವನ್ನು ಗುರುವಿನಿಂದಲೇ ಅವನು ತಿಳಿಯಬೇಕಾಗಿತ್ತು. ಗುರುವನ್ನು ಕೇಳುವುದೆಂತು? ಹೇಗಾದರೂ ಆಗಲಿ ಗುರುದೇವನ ಬಳಿಗೆ ಹೋಗುವುದು ಒಳ್ಳೆಯದೆಂದು, ಯೋಚಿಸಿ ಅಲ್ಲಿಂದ ಹೊರಟನು.

ಗುರುದೇವನು ಗೌತಮನನ್ನು ನೋಡಿದ ಕೂಡಲೇ ಅವನ ಮನಸ್ಸಿನ ಆಲೋಚನೆಗಳನ್ನು ತಿಳಿದನು. 'ವತ್ಸಾ! ಗೌತಮಾ! ಅಹಲ್ಯೆಯ ಪ್ರೇಮದ ವಿಷಯದಲ್ಲಿ ಅನುಮಾನ ಪಡಬೇಡ. ನಿನ್ನ ಪ್ರೇಮಕ್ಕಿಂತ ಅವಳ ಪ್ರೇಮ ಹೆಚ್ಚಿನದು. ಅವಳು ನಿನ್ನಮೇಲೆ ಪರಿಶುದ್ಧ ಪ್ರೇಮ ತೋರಿಸಿದ್ದಾಳೆ. ನೀನು ಈಗ ಮುನಿ, ಜ್ಞಾನಿ, ಸಂಯಮಿ, ಗೃಹಸ್ಥನಾಗಬೇಕೆಂದು ಇಚ್ಛಿ ಸುವುದು ನ್ಯಾಯವಾಗಿದೆ. ಮಹಾತ್ಮರ ಸಂದರ್ಶನ ಮಾಡಿ ಜ್ಞಾನ, ಶಕ್ತಿ, ವೈರಾಗ್ಯಗಳ ಗೂಢ ಶಕ್ತಿಯನ್ನರಿತು ಬಂದಿರುವೆ. ಪ್ರಾಯೋಗಿಕ ಪರಿಶುದ್ಧ ಜೀವನಕ್ಕೆ, ನಿನ್ನ ಆತ್ಮ ಜ್ಞಾನದ ತಳಹದಿ ಚೆನ್ನಾಗಿದೆ. ಅಹಲ್ಯೆಯ ಸ್ವಯಂವರದಲ್ಲಿ ನೀನೇ ವಿಜಯಶಾಲಿಯಾಗುವೆ. ಸಂದೇಹ ಪಡಬೇಡ ಧೈರ್ಯದಿಂದಿರು, ಎಂದು ಗುರುದೇವನು ಅಪ್ಪಣೆ ಇತ್ತನು.

ಸ್ವಯಂವರ

ವಿಜಯದಶಮಿ ಅಂದು ಶ್ರೀರಂಗಪುರದ ಅರಮನೆಯಲ್ಲಿ ರಾಜಸಭೆ ಸೇರಿದೆ. ರಾಜಮಹಾರಾಜರುಗಳೆಲ್ಲ ಸರ್ವಾಲಂಕಾರ ಭೂಷಿತರಾಗಿ ಉಚಿ ತಾಸನದಲ್ಲಿ ಕುಳಿತಿದ್ದಾರೆ. ಆಸ್ಥಾನ ಪಂಡಿತರು, ಮಂತ್ರಿಗಳು, ಪ್ರಜಾನಾ ಯಕರು, ಪ್ರೇಕ್ಷಕರೆಲ್ಲಾ ಸಿಂಹಾಸನದ ಎದುರು ಭಾಗದಲ್ಲಿ ನೆರೆದಿದ್ದಾರೆ. ರಾಣೀವಾಸದ ಜನರು ಸುವರ್ಣಾಲಂಕಾರ ಭೂಷಿತೆಯರಾಗಿ, ರಾಜ ಯೋಗ್ಯ ಉಡುಪು ಧರಿಸಿಕೊಂಡು, ಕುತೂಹಲದಿಂದ ನೋಡುತ್ತಿದ್ದಾರೆ.

ಇಂತಹ ತುಂಬು ಸಭೆಗೆ ಶ್ರೀರಂಗರಾಜನೂ, ಗುರುದೇವನೂ ಜೊತೆಯಲ್ಲಿ ಬಂದು ತಮ್ಮ ತಮ್ಮ ಆಸನವನ್ನು ಅಲಂಕರಿಸಿದರು.

ಸಭೆಯನ್ನು ಉದ್ದೇಶಿಸಿ, ಶ್ರೀರಂಗರಾಜನು ಈ ರೀತಿ ಹೇಳಿದನು. 'ಮಾನ್ಯ ಮಹಾಶಯರೇ! ಇಂದಿನ ಸ್ವಯಂವರದ ಪಣವನ್ನು ಗುರುದೇವನೇ ಈಗ ತಮ್ಮೆಲ್ಲರಿಗೂ ವಿವರಿಸುವನು. ರಾಜಮಹಾರಾಜರಿಗೆ ಇದು ಸ್ವಲ್ಪ ವಿಚಿತ್ರವಾಗಿ ಕಾಣಬಹುದು. ಬರೀ ಶೂರತ್ವದಿಂದ ಮಾನವನ ಬಾಳು ಭವ್ಯವಾಗುವುದಿಲ್ಲ. ಜೊತೆಗೆ ಲೋಕವ್ಯವಹಾರ ಜ್ಞಾನ ಚೆನ್ನಾಗಿ ಬರಬೇಕು. ಅಂತಹ ಜ್ಞಾನಿಯು ಎಂತಹ ಕಷ್ಟವನ್ನಾದರೂ ಎದುರಿಸಬಲ್ಲನು. ಎಂತಹ ಕಠಿಣ ಸಮಸ್ಯೆಯನ್ನಾದರೂ ಬಿಡಿಸಬಲ್ಲನು. ಆದುದರಿಂದ ಇಂತಹ ಪ್ರಪಂಚ ವ್ಯವಹಾರ ವಿಷಯಗಳಲ್ಲಿ ಗುರುದೇವನು, ಕೆಲವು ಪ್ರಶ್ನೆಗಳನ್ನು ನಿರೂಪಿಸುವರು. ಅದಕ್ಕೆ ಸಪ್ರಮಾಣವಾದ ಉತ್ತರವನ್ನು ಯಾರು ಕೊಡುವರೋ ಅವರನ್ನು ಅಪಳ್ಳಿ ವರಿಸುವಳು. ಉತ್ತರ ಹೇಳುವುದಕ್ಕೆ ಕಾಲನಿಯಮವುಂಟು. ಆಸ್ಥಾನದ ಮಹಾ ಪಂಡಿತರೇ ಇಂದಿನ ಪರೀಕ್ಷಕರು. ಅವರ ನಿರ್ಣಯವೇ ಕೊನೆಯ ತೀರ್ಮಾನ' ಎಂದು ಹೇಳಿ ಕುಳಿತನು.

ಅನಂತರ ಗುರುದೇವನು ಎದ್ದು ನಿಂತು ಕೆಲವು ಪ್ರಶ್ನೆಗಳನ್ನು ಸಭೆಯ ಮುಂದೆ ಇಟ್ಟನು.

೧. ವೃತ್ತ ವಿತ್ತಗಳಲ್ಲಿ ಯಾವುದು ದೊಡ್ಡದು?

೨. ಜಗತ್ತಿನಲ್ಲಿ ಮನ್ನಣೆಗೆ ಅರ್ಹರಾರು?

೩. ದೈವಭಕ್ತಿಯ ಸ್ವರೂಪ, ಮಹತ್ವ ಹೇಗೆ?

ಉತ್ತರ ಹೇಳುವವರಿಗೆ ಕಾಲನಿಯಮ ಅರ್ಧ ಘಳಿಗೆ ಮಾತ್ರ. ಉತ್ತರ ಸ್ಪಷ್ಟವಾಗಿರಬೇಕು. ಸಂಕ್ಷೇಪವಾಗಿರಬೇಕು.

ಇದನ್ನು ಕೇಳಿ ರಾಜಮಹಾರಾಜರಿಗೆ ಆಶ್ಚರ್ಯವೆನಿಸಿತು. ಈ ವಿಚಾರೀಯ ಸ್ವಯಂವರ ಪಣವನ್ನು ನೋಡಿ ಅವರಿಗೆ ಅಸಮಾಧಾನವಾಯಿತು. ಆದರೆ ಈ ನಿಯಮಗಳಿಗೆ ಅವರು ಮೊದಲೇ ಬದ್ಧರಾಗಿದ್ದರು. ಈಗೇನೂ ಮಾಡುವಂತಿರಲಿಲ್ಲ. ಅವರಲ್ಲಿ ಒಬ್ಬ ರಾಜನು ಧೈರ್ಯ ಮಾಡಿ ಮುಂದೆ ಬಂದು ನಿಂತನು. ಉತ್ತರ ಹೇಳಲು ಪ್ರಾರಂಭ ಮಾಡಿದನು. ಅವನ

ಉತ್ತರವೆಲ್ಲಾ ಬರೀ ಅಸಂಬದ್ಧ ಪ್ರಲಾಪ. ಏನೋನೋ ಹೇಳುವುದಕ್ಕೆ ಪ್ರಾರಂಭಿಸಿದನು ವೇಳೆಯಾದುದರಿಂದ ಉತ್ತರ ಮುಗಿಸದೇ ಹೊರಟು ಹೋದನು. ಹೀಗೆಯೇ ಕೆಲವು ಮಹಾರಾಜರು ತಮಗೆ ತೋರಿದ್ದನ್ನ ಹೇಳಿದರು. ಆದರೆ ಅವೊಂದೂ ಸರಿಯಾಗಿರಲಿಲ್ಲ. ಸ್ವತಃ ಜ್ಞಾನ ಸಂತರು ಹೇಳುವ ಉತ್ತರಕ್ಕೂ ಗಿಣಿಯಂತೆ ಪಾಠ ಕಲಿತುಬಂದು ಉತ್ತರ ಹೇಳುವುದಕ್ಕೂ ವ್ಯತ್ಯಾಸ ಇಲ್ಲವೇ ? ರಾಜಮಹಾರಾಜರು ಹೇಳಿದ ಉತ್ತರ ಒಂದೂ ಸರಿಯಾಗಿರಲಿಲ್ಲ. ಪರೀಕ್ಷಕರಿಗೆ ಅವರ ಉತ್ತರವೆಲ್ಲಾ ಅಸಂಬದ್ಧವಾಗಿ ಕಂಡಿತು.

ಇನ್ನಾರಾದರೂ ಉತ್ತರ ಹೇಳುವವರಿದ್ದರೆ ಮುಂದೆ ಬರಬೇಕೆಂದು ರಾಜಾಜ್ಞೆ ಆಯಿತು. ಆಗ ಗೌತಮನು ಕೂಡಲೆ ಎದ್ದು ನಿಂತು, ನೇರವಾಗಿ ಗುರುದೇವನ ಬಳಿಗೆ ಬಂದು ದೀರ್ಘ ದಂಡ ನಮಸ್ಕಾರ ಮಾಡಿದನು. ರಾಜ ನಿಗೆ ವಂದಿಸಿದನು. ಸಭೆಗೆ ನಮಸ್ಕಾರ ಮಾಡಿದನು. ಅವನ ತೇಜಸ್ಸು, ಯೌವನ, ಸೌಂದರ್ಯವೆಲ್ಲವೂ ಜನರನ್ನು ಆಕರ್ಷಿಸಿತು. ಎಲ್ಲರೂ ಹರ್ಷ ದಿಂದ ಕರತಾಡನ ಮಾಡಿದರು. ಪರೀಕ್ಷಕರನ್ನು ಉದ್ದೇಶಿಸಿ ಅವನು ಹೀಗೆ ಉತ್ತರವಿತ್ತನು.

೧). ವೃತ್ತ ಎಂದರೆ ಕಸುಬು ಅಥವಾ ವೃತ್ತಿ. ವಿತ್ತ ಎಂದರೆ ಹಣ. ಹಣಕ್ಕಿಂತ ವೃತ್ತಿಯೇ ಲೋಕದಲ್ಲಿ ದೊಡ್ಡದು. ಹಣವು ನಾಶವಾಗುವುದು. ವೆಚ್ಚ ಮಾಡಿದ ಹಾಗೆಲ್ಲಾ ಕಡಿಮೆ ಆಗುವುದು. ಸಾಮಾನ್ಯವಾಗಿ ಹಣವು ಅನೇಕರನ್ನು ದುರ್ಮಾರ್ಗಕ್ಕೆ ಎಳೆಯಲು ಪ್ರಯತ್ನಿಸುವುದು. ಲಕ್ಷ್ಮಿ ಚಂಚಲೆ, ಎಂಬ ನಾಣ್ನುಡಿ ಎಲ್ಲರ ಅನುಭವದಲ್ಲಿದೆ. ಹಣವು ಬಹುಕಾಲ ಒಂದೇಕಡೆ ನಿಲ್ಲುವುದು ಕಷ್ಟ. ವೃತ್ತಿಯ ವಿಚಾರ ಹಾಗಲ್ಲ. ಇದನ್ನು ಪೋಷಿ ಸಿದಷ್ಟೂ, ಹೆಚ್ಚಾಗಿ ಸಂರಕ್ಷಿಸಿದಷ್ಟೂ, ಅದರ ಮಹತ್ವ ಬೆಳೆಯುವುದು. ಅತ್ಯುತ್ತಮ ರೀತಿಯದಾಗುವುದು. ಇದಕ್ಕೆ ಪ್ರಮಾಣ ಈರೀತಿ ಇದೆ.

ವೃತ್ತಂ ಯತ್ನೇನ ಸಂರಕ್ಷೇತ್ !
ವಿತ್ತ ಮೇತಿಚ ಯಾತಿಚ !
ಅಕ್ಷೀಣೋ ವಿತ್ತತಃ ಕ್ಷೀಣ !
ವೃತ್ತತಸ್ತು ಹತೋ ಹತಃ !!

ಸಕುಲಂ ವೃತ್ತ ಹೀನಸ್ಯ!
ಪ್ರಮಾಣ ಮಿತಿ ಮೇವುತಾಃ!
ಅಂತೇ ಷ್ವಪಿಹಿ ಜಾತಾನಾಂ!
ವೃತ್ತಮೇವ ವಿಶಿಷ್ಯತೆ॥

ದುಷ್ಕುಲೀನಃ ಕುಲೀನೋವಾ!
ಮರ್ಯಾದಾಂ ಯೋನಲಂಘಯೇತ್!
ಧರ್ಮಾಪೇಕ್ಷೀ ಮೃದು ಹ್ರೀಮಾನ್!
ಸಕುಲೀನ ಶತಾದ್ವರಃ॥

೨) ಜಗತ್ತಿನಲ್ಲಿ ಯಾವನು ಸ್ವಜನರಲ್ಲಿ ದಕ್ಷತೆಯನ್ನೂ, ಇತರರಲ್ಲಿ ದಯೆಯನ್ನೂ, ದುಷ್ಟರಲ್ಲಿ ವೋಸವನ್ನೂ, ಸಾಧು ಜನರಲ್ಲಿ ಪ್ರೀತಿಯನ್ನೂ, ನೀಚರಲ್ಲಿ ಹೆಮ್ಮೆಯನ್ನೂ, ವಿದ್ವಾಂಸರಲ್ಲಿ ಚರ್ಚಾಸಾಮರ್ಥ್ಯವನ್ನೂ, ಶತ್ರುಗಳಲ್ಲಿ ಶೌರ್ಯಧೈರ್ಯಗಳನ್ನೂ, ಗುರುಜನರಲ್ಲಿ ಕ್ಷಮೆದಮೆಗಳನ್ನೂ, ಸ್ತ್ರೀಯರಲ್ಲಿ ಶಾಂತಧೂರ್ತತೆಯನ್ನೂ ಪ್ರದರ್ಶಿಸಿ, ಸಮಯಕ್ಕೆ ಉಚಿತವಾದ ಮಾರ್ಗವನ್ನು ಅವಲಂಬಿಸಿ ವರ್ತಿಸುವನೋ, ಅಂತಹ ಮನುಷ್ಯನು, ಎಲ್ಲರ ಮನ್ನಣೆಗೂ ಪಾತ್ರನಾಗುವನು. ಅವನ ಗುಣವು ಸರ್ವಾದರಣೀಯವಾಗುವುದು. ಇಂತಹವರು ಸಮಾಜದ ಗೌರವಕ್ಕೆ ಪಾತ್ರರಾಗುವರು. ಇದಕ್ಕೆ ಪ್ರಮಾಣ ಈ ರೀತಿ ಇದೆ.

ದಾಕ್ಷಿಣ್ಯ ಸ್ವಜನೇ. ದಯಾಪರಜನೇ,
ಶಠಂ ಸದಾ ದುರ್ಜನೇ,
ಪ್ರೀತೀ ಸಾಧುಜನೇ, ಸ್ಮಯಃ ಖಿಲಜನೇ,
ವಿದ್ವಜ್ಜನೇ ಚರ್ಚನಂ!
ಶೌರ್ಯಂ ಶತ್ರುಜನೇ, ಕ್ಷಮಾಗುರುಜನೇ,
ನಾರೀಜನೇ ಧೂರ್ತಗತ್!
ಇತ್ಥಂ ಏ ಪುರುಷಾಃ ಕಲಾಸು ಕುಶಲಂ
ಸ್ತೇಷ್ವೇವ ಲೋಕ ಸ್ಥಿತಿಃ॥

೩) ಇನ್ನು ದೈವಭಕ್ತಿ ಸ್ವರೂಪದ ವಿಷಯವಾಗಿ ಎರಡು ಮಾತನ್ನು ಹೇಳಬೇಕಾಗಿದೆ. ಪರಮಾತ್ಮನು ಸೃಷ್ಟಿಸಿರುವ ೮೪ ಲಕ್ಷ ಜೀವಕೋಟಿಗಳಲ್ಲಿ ಮಾನವ ಜನ್ಮಕ್ಕಿಂತ ಶ್ರೇಷ್ಠವಾಗುದು ಇನ್ನೊಂದಿಲ್ಲ. 'ದುರ್ಲಭೋ ಮಾನುಷೋದೇಹಃ' "ಸುಕೃತಾನ್ಮಾನವೋ ಭೂತ್ವಾ" "ಕದಾ ಚಿಲ್ಲಭತೇ ಜಂತು,

ರ್ಮಾನುಷ್ಯಂ ಪುಣ್ಯ ಸಂಚಯಾತ್" ಎಂಬ ಶಾಸ್ತ್ರಾಧಾರದಂತೆ, ಮಾನವ ಜನ್ಮ ಶ್ರೇಷ್ಠವಾದುದು. ಇಂತಹ ದುರ್ಲಭ ಜನ್ಮವನ್ನು ಸಾರ್ಥಕಪಡಿಸಿ ಕೊಳ್ಳಬೇಕಾದರೆ, ಕರ್ಮ, ಜ್ಞಾನ, ಭಕ್ತಿ, ಪ್ರಪತ್ತಿ ಎಂಬ ನಾಲ್ಕು ಮಾರ್ಗ ಗಳಿವೆ. ಕರ್ಮ ಅತ್ಯಂತ ಕಷ್ಟ. ಜ್ಞಾನ ಲಭಿಸುವುದು ಪರಮ ದುರ್ಲಭ. ಪ್ರಪತ್ತಿಗೆ ಅತಿಯಾದ ನಿಷ್ಠೆ ಅಗತ್ಯ. ಎಲ್ಲಕ್ಕಿಂತ ಸುಲಭವಾದ ಮಾರ್ಗ ಭಕ್ತಿ.

ಪರಮಾತ್ಮನ ದಿವ್ಯನಾಮವನ್ನು ಕೇಳುವುದು, ಬಾಯಲ್ಲಿ ನುಡಿಯು ವುದು, ಮನಸಲ್ಲಿ ಸ್ಮರಿಸುವುದು, ಅವನ ಪಾದ ಸೇವೆ ಮಾಡುವುದು, ಅವನನ್ನು ಪೂಜಿಸುವುದು, ಕಿಂಕರನಾಗಿ ಸೇವೆಮಾಡುವುದು, ಸ್ನೇಹದಿಂದ ವರ್ತಿಸುವುದು, ಆತ್ಮ ಸಮರ್ಪಣೆ ಮಾಡುವುದು, ಹೀಗೆ ಭಕ್ತಿ ಮಾರ್ಗದಲ್ಲಿ ಒಂಭತ್ತು ಬಗೆ ಇವೆ. ಪರೀಕ್ಷಿತ್ತು ಮಹಾರಾಜನು, ಭಗವಂತನ ನಾಮ ವನ್ನು ಕೇಳುವುದರಿಂದಲೂ, ಶುಕಮಹರ್ಷಿಯು ಕೀರ್ತನೆ ಮಾಡುವು ದರಿಂದಲೂ, ಪ್ರಹ್ಲಾದನು ಸ್ಮರಣದಿಂದಲೂ, ಶ್ರೀ ಮಹಾಲಕ್ಷ್ಮಿಯು ಪಾದ ಸೇವನದಿಂದಲೂ, ಪೃಥುಚಕ್ರವರ್ತಿಯು ಪೂಜೆಯಿಂದಲೂ, ಆಂಜನೇಯನು ನಮಸ್ಕಾರದಿಂದಲೂ, ಅರ್ಜುನನು ಸ್ನೇಹದಿಂದಲೂ, ಬಲಿಚಕ್ರವರ್ತಿಯು ಆತ್ಮ ಸಮರ್ಪಣದಿಂದಲೂ, ಮೋಕ್ಷ ಸಂಪಾದನೆ ಮಾಡಿದರು. ಇವರೆಲ್ಲ ಉತ್ತಮೋತ್ತಮ ಭಗವದ್ಭಕ್ತರು. ಪರಮಾತ್ಮನ ಸನ್ನಿಧಿಯಲ್ಲಿ ಭಕ್ತಿ ವೈರಾಗ್ಯಗಳು ಮುಖ್ಯವೇ ವಿನಹ, ಜಾತಿಮತಗಳಲ್ಲ ಎಂದು ಎತ್ತಿ ತೋರಿಸಿ ದರು ಮಹಾನುಭಾವರು.

ಭಗವಂತನಲ್ಲಿ ಭಕ್ತಿಯುಳ್ಳವನು ಶ್ವಪಚಕುಲದಲ್ಲಿ ಹುಟ್ಟಿದ್ದರೂ, ಕೂಡ, ಆತನು ಬ್ರಹ್ಮಣೋತ್ತಮನೆಂತಲೂ, ಭಗವದ್ಭಕ್ತಿಯಲ್ಲಿ ಯತಿಯಾಗಿದ್ದರೂ, ಆತನು ಶ್ವಪಚನಿಗಿಂತ ನಿಕೃಷ್ಟನೆಂದು ಪ್ರಹ್ಲಾದ ಹೇಳಿದ್ದಾನೆ. ಬೇಡನ ನಡತೆ ಎಂತಹುದು? ಧೃವನ ವಯಸ್ಸೆಷ್ಟು? ಗಜೇಂದ್ರನಿಗೆ ಇದ್ದ ಜ್ಞಾನವೆಷ್ಟು? ಕುಬ್ಜೆಯ ಸೌಂದರ್ಯ ಹೇಗಿತ್ತು? ಸುಧಾಮನ ಐಶ್ವರ್ಯವೇನು? ವಿದುರನ ಕುಲ ಎಂತಹುದು? ಉಗ್ರಸೇನನ ಪರ ಕ್ರಮವೆಷ್ಟು? ಆದರೂ ಕೂಡ ಇವರೆಲ್ಲ ಪರಮಾತ್ಮನ ಕೃಪೆಗೆ ಪಾತ್ರರಾಗಲಿಲ್ಲವೆ? ಇದಕ್ಕೆ ಅವರ ಭಕ್ತಿಯೇ ಕಾರಣವಾಗಿರಲಿಲ್ಲವೆ? ಪರಮಾತ್ಮನು ಕೇವಲ ಭಕ್ತಿಯಿಂದ ಸಂತುಷ್ಟ ಯಾಗುತ್ತಾನೆಂಬುದಕ್ಕೆ ಇದಕ್ಕಿಂತ ಹೆಚ್ಚಿನ ನಿದರ್ಶನ ಬೇಕೇ? ಭಕ್ತಿಗೆ

ಜಾತಿ, ಕುಲ, ವಿದ್ಯೆ, ರೂಪ, ಐಶ್ವರ್ಯ, ಇವೊಂದೂ ಮುಖ್ಯವಲ್ಲ. ಭಕ್ತನಿಗೆ ಎಲ್ಲವೂ ಸಮಾನ. ಭಕ್ತಿಗೆ ಮೀರಿದ ಸಾಧನ ಇನ್ನೊಂದಿಲ್ಲ. ಇದಕ್ಕೆ ಆಧಾರವಾಗಿ ಮಹನೀಯರು ಈ ಶ್ಲೋಕಗಳನ್ನು ಹೇಳಿದ್ದಾರೆ.

ಶ್ರೀ ವಿಷ್ಣೋ ಶ್ರವಣಾತ್ಪರೀಕ್ಷಿದಭವ ದ್ವೈಯಾಸಕಿಃ
ಕೀರ್ತನಾತ್, ಪ್ರಹ್ಲಾದ ಸ್ಮರಣೇ, ತದಂಘ್ರಿ ಭಜನೇ
ಲಕ್ಷ್ಮೀ ಪೃಥುಶ್ಚಾರ್ಚನೆ ಅಕ್ರೂರಸ್ತ್ವಭಿವಂದನೇಃಚ
ಹನುಮಾನ್ ದಾಸ್ಯೇಃಸಖಿತ್ವೇಽರ್ಜುನಃ, ಸರ್ವಸ್ವಾತ್ಮ
ನಿವೇದನೇ: ಬಲಿರಭೂತ್ಕೃವಲ ಮೋಕ್ಷಾಂಪದಂ ॥
ವ್ಯಾಧಸ್ಯಾ ಚರಣಂ ಧ್ರುವಸ್ಯಚವಯೋ
ವಿದ್ಯಾ ಗಜೇಂದ್ರಸ್ಯಕಾ,
ಕುಬ್ಜಾಯಾಃ ಕಿಮುನಾಮರೂಪ ಮಧಿಕಂ
ಕಿಂವಾ ಸುಧಾಮ್ನೋಧನಂ,
ವಂಶಃ ಕೋ ವಿದುರಸ್ಯ ಯಾದವಪತೇ
ರುಗ್ರಸ್ಯ ಕಿಂಪೌರುಷಂ
ಭಕ್ತ್ಯಾತುಷ್ಯತಿ ಕೇವಲಂ ನಚ ಗುಣೈಃ
ಭಕ್ತಿ ಪ್ರಿಯೋ ಮಾಧವಃ ॥ —

ಇಷ್ಟು ವಿಚಾರ ಪೂರಿತ ಉತ್ತರವನ್ನು ಕೇಳಿ ಎಲ್ಲರಿಗೂ ಸಂತೋಷವಾಯಿತು. ಗೌತಮನ ಜ್ಞಾನ ವಿಸ್ತಾರ, ವ್ಯವಹಾರಜ್ಞಾನ ಕಂಡು ಎಲ್ಲರಿಗೂ ಆಶ್ಚರ್ಯವಾಯಿತು. ಅವನೇ ವಿಜಯಶಾಲಿ ಎಂದು ಪರೀಕ್ಷಕರು ತೀರ್ಪು ಕೊಟ್ಟರು. ತಂದೆಯ ಅಪ್ಪಣೆಯಂತೆ ಅಪಲೈಯು ಗೌತಮನ ಕೊರಳಿನಲ್ಲಿ ವಿಜಯಮಾಲೆ ಹಾಕಿದಳು. ಅನಂತರ ಶ್ರೀರಂಗರಾಜನು ಸಭೆಯನ್ನು ಉದ್ದೇಶಿಸಿ, ಹೀಗೆ ಹೇಳಿದನು.

'ಮಾನ್ಯರೇ! ಇಂದಿನ ಸಭೆಯ ಪರೀಕ್ಷೆಯಲ್ಲಿ ಗೌತಮನು ವಿಜಯಶಾಲಿ ಎಂದು ಆಸ್ಥಾನ ಮಹಾ ವಿದ್ವಾಂಸರು ತೀರ್ಪು ಕೊಟ್ಟಿದ್ದಾರೆ. ಅವನ ವಿನಯಾದಿಗಳು ತಮಗೆ ಗೋಚರವಾಗಿವೆ. ಅವನ ಸೌಂದರ್ಯ, ಸೌಶೀಲ್ಯ, ತಾರುಣ್ಯಾದಿ ಗುಣಗಳನ್ನು ತಾವೇ ಪ್ರತ್ಯಕ್ಷ ನೋಡಿದ್ದೀರಿ. ಇಂತಹ ಸಭೆಯಲ್ಲಿ ಯಾರಾಗರೊಬ್ಬರಿಗೆ ವಿಜಯ ದೊರೆಯಲು ಸಾಧ್ಯ. ಮಾನಾಪಮಾನಗಳಿಗೆ ಇಲ್ಲಿ ಅವಕಾಶವಿಲ್ಲ. ನಾಳೆ ಗೌತಮನೊಡನೆ ಅಪಲೈಗೆ

ಅಗ್ನಿ ಸಾಕ್ಷಿಕವಾಗಿ ವಿವಾಹ ನೆರವೇರುವುದು. ಲಕ್ಷ್ಮಿ ಸರಸ್ವತಿಯ ಸಂಗಮ ವಾಗುವ ಈ ಮಹಾಸಮಯದಲ್ಲಿ ತಾವುಗಳೆಲ್ಲರೂ ಇದ್ದು, ವಿವಾಹದಲ್ಲಿ ಭಾಗಿಗಳಾಗಿ, ನನ್ನ ಅಲ್ಪ ಸತ್ಕಾರವನ್ನು ಕೈಗೊಂಡು ಸಂತೋಷಪಡಿಸ ಬೇಕಾಗಿ ಕೇಳಿಕೊಳ್ಳುತ್ತೇನೆ' ಎಂದನು.

ವಿವಾಹವು ಸಂಭ್ರಮದಿಂದ ನೆರವೇರಿತು. ಗೌತಮನಿಗೆ ರಾಜ್ಯ ಪಟ್ಟಾಭಿಷೇಕವೂ ಆಯಿತು. ಶ್ರೀರಂಗರಾಜನು, ಎಲ್ಲವನ್ನೂ ಗೌತಮನಿಗೆ ವಹಿಸಿ, ತಾನು ಗುರುವಿನ ಅಪ್ಪಣೆ ಪ್ರಕಾರ ವಾನಪ್ರಸ್ಥಾಶ್ರಮವನ್ನು ಕೈಗೊಂಡನು. ಅದೇ ಕಾಲದಲ್ಲಿ ಗುರುದೇವನೂ ಕೂಡ, ಗೌತಮನಿಗೆ ತನ್ನ ಆಶ್ರಮದ ಸರ್ವಾಧಿಕಾರವನ್ನೆಲ್ಲಾ ಬಿಟ್ಟುಕೊಟ್ಟು, ಶ್ರೀರಂಗರಾಜ ನೊಡಗೂಡಿ ವಿಂಧ್ಯ ಪರ್ವತದ ಕಡೆ ಪ್ರಯಾಣ ಬೆಳಸಿದನು. ಹೀಗೆ ಗೌತಮನಿಗೆ, ಏಕಕಾಲದಲ್ಲಿ ಗುರುಪೀಠದ ಯಾಜಮಾನ್ಯ, ಮತ್ತು ರಾಜ್ಯಾಡಳಿತ ಸರ್ವಾಧಿಕಾರ ಎರಡೂ ದೊರಿತವು.

ರಾಜನೀತಿ

ವನವಾಸಿ. ಮುನಿಕುಮಾರನಾಗಿ, ಆಶ್ರಮವಾಸಿಯಾಗಿದ್ದ ಗೌತ ಮನು ಇಂದು ದೊರೆಯಾಗಿದ್ದಾನೆ. ಗುರುದೇವನ ಆಶ್ರಮ ಗೌತಮ ಕ್ಷೇತ್ರ ವಾಯಿತು. ಮಹಾರಾಜ ಪದವಿ ಬಂದರೂ, ಗೌತಮನು ಆಶ್ರಮದ ಗುಡಿ ಸಲವಾಸ ಬಿಡಲಿಲ್ಲ. ರಾಜಭೋಗದ ವೈಭವ ವಿಲಾಸಗಳಲ್ಲಿ ಅವನಿಗೆ ಆಸೆ ಇಲ್ಲ. ರಾಜ್ಯಾಡಳಿತದ ಭಾರವನ್ನು ಮಂತ್ರಿಗಳಿಗೆ ವಹಿಸಿ, ತಾನು ಅರಮನೆ ಯಲ್ಲಿ ವಿಹರಿಸುವ ಇಚ್ಛೆ ಅವನಿಗಿಲ್ಲಿಲ್ಲ. ರಾಜ್ಯಪಾಲನೆಯು ಒಂದು ಬಗೆಯ ಪರಮ ಪವಿತ್ರ ಕರ್ತವ್ಯ. ಅದು ಎಷ್ಟು ಪವಿತ್ರವೋ, ಅಷ್ಟು ಕಠಿಣ. ರಾಜ್ಯ ಪರಿಪಾಲನೆ ಸಮರ್ಪಕವಾಗಿ ನೆರವೇರಬೇಕಾದರೆ, ರಾಜನು ಸ್ವಾರ್ಥ ತ್ಯಾಗಿಯಾಗಬೇಕು. ನಾಡಿನ ಜನರ ಕಷ್ಟ ನಷ್ಟಗಳನ್ನೂ, ಬದುಕು ಬಾಳನ್ನೂ, ಮನಗಾಣಬೇಕು. ಅವನ್ನು ಯೋಗ್ಯ ರೀತಿಯಲ್ಲಿ ಪರಿಹರಿಸ

ಬೇಕು. ಪ್ರಜಾ ಸೇವೆಯ ಪ್ರಥಮ ಸ್ಥಾನ ರಾಜನದು. ಪರಮಾತ್ಮನು ಕರುಣಿಸಿದ ಒಂದು ಪವಿತ್ರ ಸೇವಾವಕಾಶವೇ ರಾಜತ್ವ. ಪ್ರಜಾಪಾಲನೆ ಮಹಾ ಕರ್ತವ್ಯ. ಈ ಕರ್ತವ್ಯ ಪರಿಪಾಲನೆ ಸಾಂಗವಾಗಿ ನೆರವೇರಬೇಕಾದರೆ, ರಾಜನು ಇನ್ನೊಂದು ವ್ಯಾಸಂಗ ಹಚ್ಚಿಕೊಳ್ಳಬಾರದು. ಇದು ಗೌತಮನ ಅಭಿಪ್ರಾಯ.

ಅಹಲ್ಯೆಯ ದೃಷ್ಟಿ ಹಾಗಲ್ಲ. ಇಂದು ಅನುರೂಪ ಪತಿ ದೊರಕಿದ್ದಾನೆ. ಅಪರಿಮಿತ ಐಶ್ವರ್ಯವಿದೆ. ಸುಂದರ ಮತ್ತು ಮೋಹಕ ತಾರುಣ್ಯ ಇದೆ. ಆದುದರಿಂದ ತಾನು ಗೌತಮನೊಡನೆ ವೈಭವ ವಿಲಾಸದಲ್ಲಿರಬೇಕು. ಪ್ರಣಯ ಸುಖ ಸಾಮ್ರಾಜ್ಯಗಳಲ್ಲಿರಬೇಕು. ಚಂದ್ರಾರಣ್ಯ, ಆಶ್ರಮದ ಉಪವನ, ನದೀ ತೀರದ ಕೈತೋಟ, ಮುಂತಾದ ವಿಹಾರ ಸ್ಥಳಗಳಲ್ಲಿ ಸಂತೋಷದಿಂದ ಪತಿದೇವನೊಡನೆ ಕಾಲ ಕಳೆಯಬೇಕು. ತಂದೆಯ ರಾಜ್ಯಭಾರ ನೋಡಿದ್ದಳು. ಅವನು ತ್ಯಾಗಿಯಾಗಿರಲಿಲ್ಲ. ರಾಜಯೋಗ್ಯ ವೈಭವ ಬಿಡಲಿಲ್ಲ. ಮಂತ್ರಿಗಳೇ ಆಡಳಿತ ನಡೆಸುತ್ತಿದ್ದರೂ ಕೂಡ, ಎಲ್ಲವನ್ನೂ ರಾಜನಿಗೆ ವರದಿ ಮಾಡುತ್ತಿದ್ದರು. ರಾಜನಾದವನು ಸಂಸಾರ ಸೌಖ್ಯ ಬಿಟ್ಟು ಸಂನ್ಯಾಸಿಯಂತೆ ದುಡಿಯಬೇಕಾಗಿಲ್ಲವೆಂಬುದು ಅಹಲ್ಯೆಯ ಸಂಕಲ್ಪ.

ಅರಮನೆಯಲ್ಲಿದ್ದರೆ, ಮನಸ್ಸು ಚಂಚಲವಾಗಬಹುದೆಂದು ತಿಳಿದು, ಗೌತಮನು ಆಶ್ರಮದ ಕುಟೀರದಲ್ಲಿಯೇ ನಿಂತನು. ರಾಜಮುಕುಟವನ್ನು ಸಿಂಹಾಸನದಲ್ಲಿಟ್ಟು, ರಾಜ ಮುದ್ರೆಯನ್ನು ಮಾತ್ರ ರಾಜತ್ವದ ಗುರುತಿಗಾಗಿ ಹತ್ತಿರ ಇಟ್ಟುಕೊಂಡನು. ಪ್ರಜಾಕ್ಷೇಮ ಸಾಧನೆ, ಪ್ರಜಾರಕ್ಷಣೆಯೇ ತನ್ನ ರಾಜ್ಯಭಾರದ ಮುಖ್ಯ ಗುರಿಯಾಗಬೇಕೆಂದು ನಿಶ್ಚಯ ಮಾಡಿದನು. ಹೊಟ್ಟೆ ಹೊದಿಕೆಗಳಿಗೂ ಗತಿ ಇಲ್ಲದ ಜನರಿಂದ ಬಂದ ಕಂದಾಯದ ಹಣ ಅವರ ಪುರೋಭಿವೃದ್ಧಿಗಾಗಿ ವೆಚ್ಚವಾಗಬೇಕೇ ವಿನಹ, ರಾಜನ ಭೋಗ ವಿಲಾಸಗಳಿಗೆ ಅದನ್ನು ವಿನಿಯೋಗಿಸುವುದು, ಮಹಾಪಾಪವೆಂದು ಅವನು ಭಾವಿಸಿದನು.

ಅಹಲ್ಯೆಗೆ ಗೌತಮನನ್ನು ವಿರೋಧಿಸಿ ಮಾತನಾಡುವ ಶಕ್ತಿ ಇಲ್ಲ. ಅವನು ಹೇಳುವುದು ನ್ಯಾಯವಾಗಿತ್ತು. ಗೌತಮನಲ್ಲಿ ಅವಳಿಗೆ ಅತ್ಯಂತ ಗೌರವ, ಪರಿಶುದ್ಧ ಪ್ರೇಮ ಇದ್ದಿತು. ಅರಮನೆಯನ್ನು ಬಿಟ್ಟು ಅವಳು

ಆಶ್ರಮಕ್ಕೆ ಬರಬೇಕಾಯಿತು. ಆಶ್ರಮದ ಶಿಕ್ಷಣ ಕಾರ್ಯವೆಲ್ಲಾ ಯಥಾವಿಧಿ ಯಾಗಿ ನಡೆಯುತ್ತಿದ್ದವು. ಅವುಗಳಲ್ಲಿ ಯಾವ ಲೋಪವೂ ಇರಲಿಲ್ಲ. ಜೊತೆಗೆ ರಾಜ್ಯಾಡಳಿತ ಕಾರ್ಯ ಗೌತಮನ ಮೇಲೆ ಬಿದ್ದುದರಿಂದ, ಅವನಿಗೆ ಹೆಚ್ಚು ವಿಶ್ರಾಂತಿ ಕಾಲ ದೊರೆಯುತ್ತಿರಲಿಲ್ಲ. ಈ ಕಾರಣದಿಂದ, ಅಹಲ್ಯೆಗೆ, ಗೌತಮನು ತನ್ನ ವಿಷಯದಲ್ಲಿ ಉದಾಸೀನನಾಗಿರುವನೋ ಏನೋ ಎಂಬ ಭ್ರಾಂತಿ ಉಂಟಾಗುತ್ತಿತ್ತು.

ಗೌತಮನು ಇಂದು ರಾಜರ್ಷಿ. ಕಾವೇರಿ ತೀರದ ಕಲ್ಲು ಬಂಡೆಯೇ ಅವನ ಸಿಂಹಾಸನ. ಉಷಃಕಾಲಕ್ಕೆ ಎದ್ದು ಸ್ನಾನ ಸಂಧ್ಯಾದಿ ಪೂಜಾ ಕಾರ್ಯ ಮುಗಿಪಮೇಲೆ, ಮಂತ್ರಿಗಳು ಬಂದು ರಾಜನ ಸಲಹೆ ಪಡೆಯುತ್ತಿದ್ದರು. ಮಧ್ಯಾಹ್ನ, ಆಡಳಿತಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ಪರಿಶೀಲಿಸಿ, ಸೂಕ್ತ ಅಪ್ಪಣೆ ಕೊಡುತ್ತಿದ್ದನು. ಸಾಯಂಕಾಲ ಸಭೆ ಸೇರಿಸಿ, ತನ್ನ ನೂತನ ರಾಜನೀತಿಯನ್ನು ಸರ್ವರಿಗೂ ವಿವರಿಸುತ್ತಿದ್ದನು. ಎಲ್ಲರೂ ಈ ನೀತಿಯನ್ನು ಅನುಸರಿಸಿ, ತಮ್ಮ ತಮ್ಮ ಕಾರ್ಯ ನಿರ್ವಹಣೆಯಲ್ಲಿ ತೊಡಗಬೇಕಾಗಿತ್ತು. ಹೀಗೆ ಗೌತಮನ ರಾಜ್ಯಭಾರ ನಡೆಯುತ್ತಿತ್ತು.

ಆಶ್ರಮದ ಮುಂಭಾಗದ ಮೈದಾನದಲ್ಲಿ ಒಂದು ದೊಡ್ಡ ಸಭೆ ಸೇರಿದೆ. ಮಂತ್ರಿಗಳೂ, ಮುಖ್ಯಾಧಿಕಾರಿಗಳೂ, ಪುರಪ್ರಮುಖರೂ, ಪ್ರಜೆಗಳೂ ಎಲ್ಲರೂ ನೆರೆದಿದ್ದಾರೆ. ಗೌತಮನು ಸಕಾಲದಲ್ಲಿ ಬಂದು ಆಸನವನ್ನಲಂಕರಿಸಿ ದನು. ಸಭೆಯನ್ನು ಉದ್ದೇಶಿಸಿ, ತನ್ನ ನೂತನ ರಾಜ್ಯಭಾರಕ್ರಮವನ್ನು ಹೀಗೆ ವಿವರಿಸಿದನು.

"ಪ್ರಿಯಪ್ರಜೆಗಳೇ! ನಮ್ಮ ರಾಜ್ಯಪದ್ಧತಿಗೆ ಕೆಲವು ನಿಯಮಾವಳಿ ಗಳನ್ನು ಗೊತ್ತುಪಡಿಸಿದ್ದೇನೆ. ಅಧಿಕಾರಿಗಳು, ಅವನ್ನು ಆಚರಣೆಯಲ್ಲಿ ತಂದು ಪ್ರಜಾಸೇವೆಯ ಕೀರ್ತಿಗಳಿಸಬೇಕು. ಶ್ರೀರಂಗ ರಾಷ್ಟ್ರದಲ್ಲಿ ಬಡತನ ವೆಂಬುದು ಮೊದಲು ನಿರ್ಮೂಲವಾಗಬೇಕು. ರಾಷ್ಟ್ರದ ಏಳಿಗೆಗಾಗಿ ದುಡಿಯು ವವರು ಯಾರು? ಪ್ರಜೆಗಳಲ್ಲವೇ? ಅಂತಹವರಿಗೆ ರಾಷ್ಟ್ರದ ಸಂಪತ್ತಿನ ಸ್ವಲ್ಪ ಭಾಗವಾದರೂ ದೊರೆಯಬೇಡವೇ? ಒಬ್ಬನು ಭೋಗವಿಲಾಸಗಳಿಗೆ ಅಪರಿಮಿತವಾಗಿ ದುಂದು ವೆಚ್ಚಮಾಡುವುದೂ, ಇನ್ನೊಬ್ಬನು ಅವನ ನೆರೆಯು ವನು ಒಂದು ಹೊತ್ತು ಕೂಳೂ ಇಲ್ಲದೆ ನರಳುವುದೂ ಸರಿಯೇ? ಈ ದೇಶದ

ಪ್ರತಿಯೊಬ್ಬ ಪ್ರಜೆಗೂ, ಆರ್ಥಿಕ ಪ್ರಗತಿ ಪಡೆಯುವುದಕ್ಕೆ, ಆತ್ಮೋದ್ಧಾರ ಹೊಂದುವುದಕ್ಕೆ ಸಮಾನ ಅವಕಾಶವಿರಬೇಡವೇ? ಒಬ್ಬನ ದುಡಿಮೆಯ ಫಲದ ಬಹು ಭಾಗವನ್ನು ಇನ್ನೊಬ್ಬನು ಅನುಭವಿಸುವುದಕ್ಕೇನು ಅಧಿಕಾರ ವಿದೆ? ದುಡಿಮೆ ಕಾರನಿಗೆ ಮೊದಲು ಅದರ ಪ್ರತಿಫಲ ಸರಿಯಾದ ಕ್ರಮದಲ್ಲಿ ದೊರಕಬೇಕಲ್ಲವೇ? ಇಡೀ ರಾಷ್ಟ್ರಕ್ಕೆ ಅನ್ವಯವಾಗುವ ಅಭಿವೃದ್ಧಿ ಕಾರ್ಯ ವನ್ನು ಆಚರಣೆಯಲ್ಲಿ ತರಬೇಕು.

ರಾಷ್ಟ್ರೀಯವಾದ ಶಿಕ್ಷಣವು ರಾಷ್ಟ್ರೋನ್ನತಿಯ ಅಡಿಗಲ್ಲು. ಸಾರ್ವ ಜನಿಕ ಬಲಾತ್ಕಾರ ವಿದ್ಯಾಭ್ಯಾಸ ಕ್ರಮವನ್ನು ಆಚರಣೆಯಲ್ಲಿ ತರಬೇಕು. ಮಕ್ಕಳ ಪಾಲನಾ ಗೃಹಗಳನ್ನು ನಿರ್ಮಿಸಿ. ಅನಾಥರಿಗೆ ಆಶ್ರಮಗಳನ್ನು ಕಟ್ಟಿಸಿ. ಇಂತಹ ಕಟ್ಟಡ ನಿರ್ಮಾಣವಾಗುವವರೆಗೆ ಅರಮನೆಗೆ ಸೇರಿದ ಕಟ್ಟಡಗಳನ್ನೇ ಉಪಯೋಗಿಸಿ. ಅರಮನೆಯ ವಾಹನ ವಸ್ತುಗಳನ್ನು ಸಾರ್ವಜನಿಕ ಉಪಯೋಗಕ್ಕೆ ಇಡಿ. ಪ್ರತಿಯೊಬ್ಬ ವಿದ್ಯಾರ್ಥಿ, ವಿದ್ಯಾ ರ್ಥಿನಿಗೆ ಶಿಕ್ಷಣ ಮುಗಿಯುವ ವೇಳೆಗೆ ಸ್ವತಂತ್ರ ಜೀವನ ನಡೆಸುವಷ್ಟು ಯೋಗ್ಯತೆ ಬರುವಂತೆ ವೃತ್ತಿ ಶಿಕ್ಷಣವನ್ನು ಏರ್ಪಡಿಸಿ. ಆಡಳಿತದಲ್ಲಿ ಸಾರ್ವ ಜನಿಕರು ಹೆಚ್ಚು ಹೆಚ್ಚಾಗಿ ಭಾಗವಹಿಸುವಂತೆ ಏರ್ಪಡಿಸಿ. ಬಿನ್ನಭಾವನೆಗೆ ಅವಕಾಶ ಕೊಡಬೇಡಿ; ಪೈಪೋಟಿ ಇರದಂತೆ ಎಚ್ಚರಿಕೆಯಾಗಿರಿ. ಪ್ರಜಾ ಸಮುದಾಯದಿಂದಲೇ ಅಧಿಕಾರಿಗಳನ್ನು ಆರಿಸಬೇಕು. ಹೀಗೆ ಮಾಡುವಾಗ ದಕ್ಷತೆಗೂ, ಯೋಗ್ಯತೆಗೂ ಮಾನ್ಯತೆ ಇರಬೇಕು. ಅಧಿಕಾರಿಗಳ ಚುನಾವಣೆ ಮೆಟ್ಟಲು ಮೆಟ್ಟಲಾಗಿ ಬಡ್ತಿ ಹೊಂದಬೇಕು. ಅಧಿಕಾರವೆಂಬುದು ಒಂದು ಸೇವಾದೀಕ್ಷೆ. ಈ ಮನೋಭಾವದಿಂದ ಒಬ್ಬನು ಎಲ್ಲರಿಗಾಗಿ ಉತ್ಸಾಹದಿಂದ ಕೆಲಸ ಮಾಡಬೇಕು. ಪ್ರಜೆಗಳು ಸುಖ ಸಂತೋಷದಿಂದಿದ್ದರೆ, ರಾಷ್ಟ್ರವೂ ಅಭಿವೃದ್ಧಿ ಹೊಂದುವುದು. ಇದೇ ರಾಜನು ಗಳಿಸಬೇಕಾದ ಪುರುಷಾರ್ಥ. ರಾಜ್ಯಾಡಳಿತದ ಮುಖ್ಯ ಧ್ಯೇಯವೇ ಇದು. ಹೀಗಾದರೆತಾನೆ 'ರಾಜಾ ಪ್ರತ್ಯಕ್ಷ ದೇವತಾ' ಎಂಬ ನ್ಯಾಯಕ್ಕೆ ಮನ್ನಣೆ ಬರುವುದು.

"ಇಂತಹ ಆಡಳಿತ ಕ್ರಮವನ್ನು ಆಚರಣೆಯಲ್ಲಿ ತರುವುದಕ್ಕೆ ಮುಖ್ಯ ವಾಗಿ ಎರಡು ಸಾಧನಗಳು ಬೇಕು. ಒಂದು ನಂಬಿಕೆಯಾದ ದೇಶ ಪ್ರೇಮ ದಿಂದ ಕೂಡಿದ ವಿದ್ಯಾವಂತ ಜನರ ತಂಡ. ಇದನ್ನು ನೀವು ಗಳಿಸಬಹುದು.

ಇನ್ನೊಂದು ಧನಸಹಾಯ. ರಾಷ್ಟ್ರದ ಬೊಕ್ಕಸದಲ್ಲಿ ಹಣವಿಲ್ಲದಿದ್ದರೆ, ಅರಮನೆಯ ಭಂಡಾರದಲ್ಲಿರುವ ಹಣವನ್ನು ಉಪಯೋಗಿಸಿ. ಬಡವರೂ, ಅನಾಥರೂ, ನಿರ್ಗತಿಕರೂ, ಇದರಿಂದ ಸಂತುಷ್ಟರಾದರೆ, ಅದಕ್ಕಿಂತ ಹೆಚ್ಚಿನ ಪವಿತ್ರ ಕಾರ್ಯ ಇನ್ನಾವುದಿದೆ? ಇಂತಹ ಉತ್ತಮ ಕಾರ್ಯಕ್ಕಾಗಿ ಅಲ್ಲವೇ, ಪರಮಾತ್ಮನು ಅಧಿಕಾರವನ್ನೂ, ಐಶ್ವರ್ಯವನ್ನೂ ಕೊಟ್ಟಿರುವುದು. ಇಂತಹ ಸುಸಮಯವನ್ನು ಸದ್ವಿನಿಯೋಗ ಪಡಿಸುವ ಅಧಿಕಾರಿ, ಭಾಗ್ಯಶಾಲಿಯಲ್ಲವೇ? ಇದು ನಮ್ಮ ರಾಜ್ಯಾಡಳಿತ ಸೂತ್ರ. ರಾಜನೀತಿಯ ಸಾರ. ನ್ಯಾಯಶಾಸ್ತ್ರದ ತಳಹದಿ. ಈ ಧ್ಯೇಯದಿಂದ ನೀವು ಸೇವೆ ಸಲ್ಲಿಸಬೇಕು, ಹೀಗಾದರೆ ನನಗೆ ಪರಮಸಂತೋಷ. ಆಗ ನಮ್ಮ ರಾಷ್ಟ್ರ ಇಡೀ ಜಗತ್ತಿಗೆ ಮಾದರಿಯಾಗುವುದು.' ಎಂದು ಹೇಳಿ ಸಭೆಯನ್ನು ಮುಕ್ತಾಯ ಮಾಡಿದನು.

ರಾಜಾಜ್ಞೆಗೆ ಎಲ್ಲರೂ ತಲೆ ಬಾಗಿದರು. ಮಂತ್ರಿಗಳು ನಿಸ್ವಾರ್ಥ ಸೇವೆಯಿಂದ ದೀರ್ಘಕಾಲದ ಯೋಜನೆಯನ್ನು ಗೊತ್ತುಮಾಡಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಂಡರು. ವಿದ್ಯಾಪೀಠಗಳು ಸ್ಥಾಪಿತವಾದವು. ವಿದ್ಯಾ ಮಂದಿರಗಳನ್ನು ಕಟ್ಟಿಸಲಾಯಿತು. ಧರ್ಮಶಾಲೆಗಳು, ಅನಾಥಾಶ್ರಮಗಳು, ಸ್ಥಾಪಿತವಾದುವು. ನ್ಯಾಯ, ನೀತಿ, ಧರ್ಮ ವಿಷಯವಾಗಿ ವಿಶೇಷ ಪ್ರಚಾರ ಕಾರ್ಯ ನಡೆಯಿತು. ಹಳ್ಳಿಗಳಲ್ಲಿ ಆಡಳಿತ ಸಂಸ್ಥೆಗಳೇರ್ಪಟ್ಟವು. ಆಯಾ ಸ್ಥಳದ ವಿದ್ಯಾವಂತರು, ವೃದ್ಧರು, ಅನುಭವಸ್ಥರು ಈ ಸಂಸ್ಥೆಗಳ ಸದಸ್ಯರಾದರು. ಗ್ರಾಮಗಳಲ್ಲಿ ವೈದ್ಯಾನುಕೂಲ, ಆರೋಗ್ಯ ಪಾಲನೆ, ಅನಾಥರಕ್ಷಣೆ, ಶಿಕ್ಷಣ ಮುಂತಾದ ಅಭಿವೃದ್ಧಿ ಕಾರ್ಯಗಳನ್ನು ಈ ಸಂಸ್ಥೆಗಳು ಸುವ್ಯವಸ್ಥಿತವಾಗಿ ಏರ್ಪಡಿಸಿದುವು. ಚುನಾಯಿತ ಅಧಿಕಾರಿಗಳು ಈ ಕಾರ್ಯ ನಿರ್ವಹಿಸಲು ಮುಂದೆ ಬಂದರು.

ಗೌತಮರಾಜನ ನೂತನ ರಾಜ್ಯನೀತಿಯ ಫಲವಾಗಿ ಪ್ರತಿಯೊಂದು ಗ್ರಾಮವೂ ಸ್ವಯಂಪ್ರೇರಿತ ಸ್ವಪ್ರಭುತ್ವಾಧಿಕಾರ ಸಂಸ್ಥೆಯನ್ನು ಪಡೆಯಿತು. ಇಲ್ಲಿಂದ ಆರಿಸಿದ ಪ್ರತಿನಿಧಿಗಳು ಪ್ರಾಂತೀಯ ಸರಕಾರಕ್ಕೂ, ಅಲ್ಲಿಂದ ಆರಿಸಿದವರು ಕೇಂದ್ರ ಪ್ರಭುತ್ವಕ್ಕೂ ಸದಸ್ಯರಾದರು. ರಾಷ್ಟ್ರದ ಸಂಪತ್ತು ಪ್ರಜೆಗಳ ಸಂಪತ್ತಾಯಿತು. ಎಲ್ಲರಿಗೂ ಸಮಾನ ಅವಕಾಶ. ಎಲ್ಲರಿಗೂ ಸಮಾನ ಅಧಿಕಾರ. ಎಲ್ಲಿ ದಕ್ಷತೆ ಇದೆಯೋ, ಎಲ್ಲಿ ಯೋಗ್ಯತೆ ಇದೆಯೋ ಅದಕ್ಕೆ

ಪುರಸ್ಕಾರ. ಈ ಮೂಲ ತತ್ವಗಳನ್ನೊಳಗೊಂಡ ರಾಜ್ಯಭಾರ ಸ್ಥಾಪನೆಯಾಯಿತು, ಇದರಿಂದ ಪ್ರತಿಯೊಬ್ಬನೂ, ಸಕಾಲದಲ್ಲಿ ಉತ್ತು, ಬಿತ್ತಿ, ಚೆನ್ನಾಗಿ ಬೆಳೆ ಮಾಡುತ್ತಿದ್ದನು. ರಾಟೆಯಿಂದ ನೂಲು ತೆಗೆದು ಬಟ್ಟೆ ಸಿದ್ಧಪಡಿಸಿಕೊಳ್ಳುತ್ತಿದ್ದನು. ಉತ್ಪನ್ನ ಹೆಚ್ಚಿತು. ರಾಜಾದಾಯ ವೃದ್ಧಿಯಾಯಿತು, ಹೀಗೆ ವೃದ್ಧಿಯಾದಂತೆಲ್ಲಾ, ರಾಜ್ಯದಲ್ಲಿ ಗುಡಿ ಗೋಪುರಗಳ ನಿರ್ಮಾಣ ಹೆಚ್ಚಿತು. ಔಷಧಾಲಯಗಳನ್ನೂ, ಧರ್ಮಶಾಲೆಗಳನ್ನೂ ಕಟ್ಟಿಸಲಾಯಿತು. ರಾಜಾದಾಯವೆಲ್ಲಾ ಪ್ರಜಾಹಿತಕ್ಕಾಗಿಯೇ ವೆಚ್ಚವಾಗುತ್ತಿತ್ತು.

ಶ್ರೀರಂಗ ರಾಷ್ಟ್ರವು ಹಳ್ಳಿಯ ನಾಡು. ಗೌತಮನ ನೂತನ ರಾಜನೀತಿಯ ಪ್ರಕಾರ, ಪ್ರತಿಯೊಂದು ಗ್ರಾಮದಲ್ಲಿಯೂ, ಒಂದು ವಿದ್ಯಾಮಂದಿರವಿತ್ತು. ಇದು ಸ್ವಸಂಪೂರ್ಣತೆಯಿಂದ ಕೂಡಿತ್ತು. ಶಿಕ್ಷಣವೂ ಬಹು ತೇಕ ಔದ್ಯೋಗಿಕವಾಗಿತ್ತು. ಹಣಕಾಸಿನ ಸಂಸ್ಥೆಯೊಂದು ಸ್ಥಾಪಿತವಾಗಿತ್ತು. ಹಳ್ಳಿಯವರೆಲ್ಲಾ ಅದರ ಸದಸ್ಯರಾಗಿದ್ದರು. ಇದರ ಅಂಗವಾಗಿ ಸಹಕಾರ ಮಳಿಗೆಯೊಂದಿತ್ತು. ಇದು ಹಳ್ಳಿಯ ಜನರ ಪರವಾಗಿ ಮಾರುವುದು ಕೊಳ್ಳುವುದು, ತರುವುದು, ಕೊಡುವುದು, ಶೇಖರಿಸುವುದು, ವೆಚ್ಚಮಾಡುವುದು,— ಮುಂತಾದ ಎಲ್ಲ ಹವ್ಯಾಸಗಳನ್ನು ಮಾಡುತ್ತಿತ್ತು. ಇದರಿಂದ ಬಡವ ಬಲ್ಲಿದನೆಂಬ ವ್ಯತ್ಯಾಸ ಮಾಯವಾಗಿ, ಎಲ್ಲರೂ ಒಂದೇ ಎಂಬ ಭಾವನೆ ಮೂಡಿತ್ತು.

ವೃದ್ಧರೂ, ಮತ್ತು ಅನುಭವಸ್ಥರನ್ನೊಳಗೊಂಡ ಇನ್ನೊಂದು ಸಂಸ್ಥೆ ಸ್ಥಾಪಿತವಾಗಿತ್ತು. ಇದು ಎಲ್ಲಬಗೆಯ ವ್ಯವಹಾರವನ್ನು ತೀರ್ಮಾನಿಸುತ್ತಿತ್ತು. ಅವರ ತೀರ್ಮಾನವೇ ಕೊನೆಯದು. ಇದು ನ್ಯಾಯವಾಗಿಯೂ, ಧರ್ಮ ಸಮ್ಮತವಾಗಿಯೂ ಇರುತ್ತಿತ್ತು. ಎಲ್ಲರೂ ಈ ತೀರ್ಮಾನಕ್ಕೆ ಮನ್ನಣೆ ಕೊಡುತ್ತಿದ್ದರು. ಪುಂಡರಿಗೆ, ಕಳ್ಳರಿಗೆ, ಸಮಾಜ ಬಹಿಸ್ಕಾರ, ದಂಡ, ಮುಂತಾದ ಶಿಕ್ಷೆಯನ್ನು ವಿಧಿಸಿ, ಸನ್ಮಾರ್ಗಕ್ಕೆ ತರಲಾಗುತ್ತಿತ್ತು.

ನಗರಗಳಲ್ಲಿ ಕೂಡ ಇದೇ ಬಗೆಯ ಆಡಳಿತ ಕಾರ್ಯಕ್ರಮವಿತ್ತು. ಬಡಬಗ್ಗರಿಗೆ ವೃತ್ತಿ ಶಾಲೆಗಳು, ಬೋಜನಾಲಯಗಳು ನಿರ್ಮಿತವಾಗಿದ್ದುವು. ಕೆಲವು ಶ್ರೀಮಂತರ ವಿಲಾಸ ಭವನಗಳು, ವಿದ್ಯಾಮಂದಿರಗಳು, ಅನಾಥಾಶ್ರಮಗಳಾದುವು. ರಾಷ್ಟ್ರದ ಬಹು ಸಂಖ್ಯಾತ ಬಡ ಜನರು, ನೂತನ ರಾಜ್ಯಾ

ಫಳಿತದಿಂದ ತೃಪ್ತಿಹೊಂದಿದರು. ಅವರ ಜೀವನ ಸುಖಮಯವಾಯಿತು. ಎಲ್ಲೆಲ್ಲೂ ಶಾಂತಿ, ತೃಪ್ತಿ, ಸಮಾಧಾನ ಹರಡಿತು. ಇಂತಹ ಪರಿಸ್ಥಿತಿಗೆ, ನೂತನ ಆಡಳಿತ ಪದ್ಧತಿ ಕಾರಣವೆಂದು, ಎಲ್ಲರೂ ರಾಜನನ್ನು ಹೊಗಳುತ್ತಿದ್ದರು ಅವನ ಶ್ರೇಯಃ ಪ್ರಾರ್ಥನೆ ಮಾಡುತ್ತಿದ್ದರು.

ಆಡಳಿತ ವಿಧಾನ

ಗೌತಮನ ರಾಜನೀತಿಯ ಪರಿಣಾಮವಾಗಿ, ಆಡಳಿತಕ್ರಮವು ಚೆನ್ನಾಗಿ ವ್ಯವಸ್ಥೆಯಾಯಿತು. ಆಡಳಿತ ಹೇಗಿರಬೇಕು? ರಾಜನಿಷ್ಠೆ ಯಾವ ಕ್ರಮದಲ್ಲಿರಬೇಕು? ಪ್ರಜೆಗಳಿಗೂ, ಪ್ರಭುತ್ವಕ್ಕೂ ಏನು ಸಂಬಂಧವಿರಬೇಕು? ಇವೆಲ್ಲಾ ಶಾಸ್ತ್ರರೀತಿಯಾಗಿ ನಿಶ್ಚಯವಾದುವು. ಗೌತಮನ ರಾಜ್ಯಭಾರ ಪಾರಮಾರ್ಥಿಕ ದೃಷ್ಟಿಯಿಂದ ಭೂ ಸ್ವರ್ಗವಾಯಿತು. ರಾಜಕೀಯ ದೃಷ್ಟಿಯಿಂದ ಸ್ವಪರಿ ಪೂರ್ಣ ಪ್ರಜಾತಂತ್ರ ಪದ್ಧತಿ ಆಯಿತು. ಅವನ ರಾಜ್ಯದಲ್ಲಿ ಬಡವ ಬಲ್ಲಿದರೆಂಬ ಭೇಧವಿಲ್ಲ. ಕೀಳುಮೇಲೆಂಬ ಏರುಪೇರಿಲ್ಲ. ಕುಲ ಗೋತ್ರಗಳ ಗೊಂದಲವಿಲ್ಲ. ಎಲ್ಲರಿಗೂ ಸಮಾನ ಭಾಗ್ಯ. ಎಲ್ಲರಿಗೂ ಸಮಾನ ವಾಕ್ ಸ್ವಾತಂತ್ರ್ಯ, ಪೂಜಾ ಸ್ವಾತಂತ್ರ್ಯ. ಅಲ್ಲಿನ ನ್ಯಾಯ ಪದ್ಧತಿಯೋ, ಸರ್ವಸಮರ್ಪಕ ಸಿದ್ಧಾಂತ. ಅದು ಸ್ವಯಂ ಸ್ಥಾಪಿತ ಶಾಸನ ಪ್ರಭುತ್ವವಾದುದರಿಂದ, ನೈತಿಕ ಸಂಯಮ, ಧರ್ಮ ಜ್ಞಾನ, ನ್ಯಾಯನಿಷ್ಠೆ ಎಲ್ಲವೂ ಅಲ್ಲಿ ಸರ್ವಸಮರ್ಪಕವಾಗಿದ್ದವು.

ಪ್ರತಿಯೊಂದು ಗ್ರಾಮವೂ ಸಂಪದ್ಯುಕ್ತ, ಸ್ವಪರಿಪೂರ್ಣವಾಗಿತ್ತು. ಗ್ರಾಮಕೂಟವು ಆಡಳಿತಯಂತ್ರದ ಮೂಲಸ್ಥಾನ. ಪ್ರತಿಯೊಂದು ಗ್ರಾಮದಲ್ಲಿಯೂ ಒಂದು ಮಹಾಸಭೆ. ಇದೇ ಆಡಳಿತದ ಅಡಿಗಲ್ಲು. ಅನೇಕ ಸಭೆಗಳು ಸೇರಿ ಒಂದು ಊರು. ಅನೇಕ ಊರುಗಳು ಸೇರಿ ಒಂದು ನಗರ. ಅನೇಕ ನಗರಗಳು ಸೇರಿ ಒಂದು ನಾಡು. ಪ್ರತಿಯೊಂದು ಭಾಗದಲ್ಲಿಯೂ ಒಂದೊಂದು ಮುಖ್ಯ ಸಭೆ. ಅದರ ಆಡಳಿತದಲ್ಲಿ ಅನೇಕ ಉಪಸಮಿತಿಗಳು.

ಇವುಗಳ ರಚನೆ. ಸ್ವಭಾವ. ಅಧಿಕಾರ, ಕಾರ್ಯವಿಸ್ತಾರ ಎಲ್ಲವೂ ನಿರ್ಧರವಾಗಿದ್ದವು. ಸಭೆಯ ಸದಸ್ಯತ್ವಕ್ಕೆ ನಿಯಮವಿದ್ದಿತು. ಜಾತಿ ಮತ ಬೇಧವಿಲ್ಲದೆ, ಯಾರುಬೇಕಾದರೂ, ಸದಸ್ಯತ್ವ ಪಡೆಯಬಹುದಾಗಿತ್ತು.

ಗ್ರಾಮಸಭೆಗಳ ಸಂಖ್ಯೆ ಅಪಾರವಾಗಿದ್ದವು. ವ್ಯವಸಾಯಗಾರರು, ವೃತ್ತಿಕಾರರು, ವ್ಯಾಪಾರಿಗಳು, ಎಲ್ಲರೂ ಸೇರಿ ಸಭೆಯಲ್ಲಿ ಭಾಗವಹಿಸಿ ಆಡಳಿತಕ್ರಮವನ್ನು ನಿರ್ಧರಿಸುತ್ತಿದ್ದರು. ಜನಜೀವನದ ಪ್ರತಿಯೊಂದು ಹವ್ಯಾಸವೂ ಈ ಸಭೆಗಳ ವ್ಯಾಪ್ತಿಗೆ ಒಳಪಟ್ಟಿತ್ತು. ವ್ಯಕ್ತಿಗಿಂತ ಸಮೂಹ ದೊಡ್ಡದು. ಪ್ರತಿಯೊಂದು ಕಾರ್ಯವೂ ಸಾಮೂಹಿಕ ದೃಷ್ಟಿಯಿಂದ ನಡೆಯಬೇಕು. ಗ್ರಾಮದ ಮಹಾ ಸಭೆಯ ನೇತೃತ್ವದಲ್ಲಿ ಪ್ರತ್ಯೇಕ ಸಂಸ್ಥೆಗಳು ಚುನಾಯಿತವಾಗಿದ್ದವು. ಇವೆಲ್ಲಾ ತಮತಮಗೆ ಸಂಬಂಧಪಟ್ಟ ವಿಷಯಗಳನ್ನು ಇತ್ಯರ್ಥಪಡಿಸುತ್ತಿದ್ದವು. ಹೀಗೆ ಗ್ರಾಮಾಡಳಿತ ಕಾರ್ಯ ಪರಸ್ಪರ ಪ್ರೀತಿಯಿಂದ, ನಂಬಿಕೆಯಿಂದ, ಸಮಾನ ದೃಷ್ಟಿಯಿಂದ, ನಡೆಯುತ್ತಿತ್ತು. ಇಂತಹ ವ್ಯವಸ್ಥಿತ ಆಡಳಿತದಲ್ಲಿ ರಾಜರು ಪ್ರವೇಶಿಸುತ್ತಿರಲಿಲ್ಲ. ಅವನ ಕಡೆಯವರೂ ಕೂಡ ಭಂಗವುಂಟುಮಾಡುತ್ತಿರಲಿಲ್ಲ.

ಗ್ರಾಮದ ಮಹಾ ಸಭೆಯ ಅಂಗವಾಗಿ, ವಾರ್ಷಿಕ ಸಮಿತಿ, ಉದ್ಯಾನ ಸಮಿತಿ, ಸ್ವರ್ಣ ಸಮಿತಿ, ನ್ಯಾಯ ಸಮಿತಿ, ಪಂಚಾವಾರ ಸಮಿತಿ, ತಟಾಕ ಸಮಿತಿ–ಎಲ್ಲವೂ ನಿಯೋಜಿತವಾಗಿದ್ದುವು. ಇವುಗಳಲ್ಲಿ ವಾರ್ಷಿಕ ಸಮಿತಿ ಮುಖ್ಯವಾದುದು. ಇದರಲ್ಲಿ ಜ್ಞಾನವೃದ್ಧರೂ, ವಯೋವೃದ್ಧರೂ, ಆದ ಗಾಮಸ್ಥರು ಇರುತ್ತಿದ್ದರು. ಸಮಿತಿಯ ಸದಸ್ಯರನ್ನು ಮಹಾ ಸಭೆಯು ಚುನಾಯಿಸುತ್ತಿತ್ತು. ಅಂದಿನ ಚುನಾವಣೆ ಸರ್ವಸಮರ್ಪಕವಾಗಿತ್ತು. ಚುನಾವಣೆಗೆ ಸಂಬಂಧಪಟ್ಟ ವ್ಯವಹಾರವೇ ಏಳುತ್ತಿರಲಿಲ್ಲ. ಸಾಮಾನ್ಯವಾಗಿ ಅಂದಿನ ಚುನಾವಣಾ ಕ್ರಮ ಹೀಗಿರುತ್ತಿತ್ತು.

ಪ್ರತಿಯೊಂದು ಗ್ರಾಮವೂ, ಸಾಮಾನ್ಯವಾಗಿ ಹನ್ನೆರಡು ಭಾಗ ಅಥವಾ ಬೀದಿ. ಪ್ರತಿಯೊಂದು ಭಾಗದ ಉಮೇದುವಾರರ ಹೆಸರನ್ನು ಓಲೆಗರಿಯಲ್ಲಿ ಬರೆಯಿಸಿ, ಅವನ್ನು ಒಟ್ಟಿಗೆ ಕಟ್ಟಿ ಒಂದು ಮಡಕೆಯಲ್ಲಿ ಇಡಲಾಗುತ್ತಿತ್ತು. ಹೀಗೆ ಹನ್ನೆರಡು ಕಟ್ಟು ಇರುತ್ತಿದ್ದವು. ಗ್ರಾಮದ ಜನರೆಲ್ಲಾ ಚುನಾವಣೆಯ ದಿನ ಸಭೆ ಸೇರುತ್ತಿದ್ದರು. ಆ ಮಹಾ ಸಭೆಯ ಎದುರಿಗೆ ಮಡಕೆಯನ್ನು

ತಂದಿಡಲಾಗುತ್ತಿತ್ತು. ಪುರೋಹಿತರಲ್ಲಿ ವೃದ್ಧರಾದವರೊಬ್ಬರು ಮುಂದೆ ಬಂದು, ಒಬ್ಬ ಚಿಕ್ಕ ಹುಡುಗನನ್ನು ಕರೆದು, ಓಲೆಗರಿಯ ಕಟ್ಟೊಂದನ್ನು ತೆಗೆದು ಕೊಡುವಂತೆ ಕೇಳುವರು. ಆ ಮೇಲೆ ಆ ಕಟ್ಟಿನಿಂದ ಒಂದು ಓಲೆಗರಿಯನ್ನು ಎಳೆದುಕೊಡುವಂತೆ ಹೇಳುವರು. ಆ ಓಲೆಗರಿಯಲ್ಲಿರುವ ಹೆಸರನ್ನು ಅಲ್ಲಿ ನೆರೆದಿರುವ ಪುರೋಹಿತರಿಗೆಲ್ಲಾ ಮೊದಲು ತೋರಿಸಿ, ಅನಂತರ ಸಭೆಗೆ ಹೇಳುವನು. ಹೀಗೆ ಪ್ರತಿಯೊಂದು ಭಾಗದಿಂದಲೂ, ಸದಸ್ಯರನ್ನು ಆರಿಸಲಾಗುತ್ತಿತ್ತು.

ಸದಸ್ಯತನಕ್ಕೆ ಅರ್ಹತೆಯು ನಿರ್ಬಂಧವಿತ್ತು. ಸಾಗುಭೂಮಿ, ಸ್ವಂತವಾದ ಮನೆ, ಇರಬೇಕು. ವಯಸ್ಸು ೩೫ ರಿಂದ ೭೦ ವರ್ಷ. ಉಮೇದುವಾರರು ಸಾತ್ವಿಕರಾಗಿ, ಸತ್ಯವಂತರಾಗಿ, ವ್ಯವಹಾರ ಜ್ಞಾನವುಳ್ಳವರಾಗಿರಬೇಕು. ಗ್ರಾಮಸ್ಥರ ಪ್ರೀತಿಗೂ, ಮನ್ನಣೆಗೂ ಪಾತ್ರರಾಗಿರಬೇಕು. ಪ್ರತಿ ವರ್ಷವೂ ಆಡಳಿತದಲ್ಲಿ ಭಾಗವಹಿಸುತ್ತಿರುವವರೇ ಪುನಃ ಅಧಿಕಾರಕ್ಕೆ ಬಾರದ ಹಾಗೆ, ಒಂದೇ ಸಮನಾಗಿ ಮೂರುವರ್ಷ ಕೆಲಸ ಮಾಡಿದವರಿಗೆ ಅವಕಾಶ ವಿರುತ್ತಿರಲಿಲ್ಲ. ಒಂದು ಸಲ ಅಯೋಗ್ಯನಾಗಿ ವರ್ತಿಸಿದ, ಅಸಭ್ಯತೆ ತೋರಿಸಿದ, ಅಸತ್ಯರೀತಿಯಲ್ಲಿ ನಡೆದ ಸದಸ್ಯರಿಗೆ ಅವಕಾಶವಿರಲಿಲ್ಲ. ಸತ್ಯಮಾರ್ಗದಿಂದ ಆರ್ಜಿಸಿದ ನಿಧಿಯುಳ್ಳ ಗ್ರಾಮಸ್ಥನೊಬ್ಬನನ್ನು ಕರಣೀಕನನ್ನಾಗಿ ಆರಿಸಲಾಗುತ್ತಿತ್ತು. ಈ ಸಮಿತಿಗಳಲ್ಲಿ ಸ್ತ್ರೀ ಸದಸ್ಯರೂ ಇರುತ್ತಿದ್ದರು.

ಸಭೆಯು ಸೇರುವ ಕಾಲ, ಸ್ಥಳ ಮುಂತಾದುದನ್ನು ನಗಾರಿ ಹೊಡೆದು ಸಾರುವುದರ ಮೂಲಕ ಗ್ರಾಮಸ್ಥರಿಗೆ ತಿಳಿಸಲಾಗುತ್ತಿತ್ತು. ಸಾಮಾನ್ಯವಾಗಿ ಸಭೆ, ದೇವಾಲಯದ ಮುಂಭಾಗದ ಮೈದಾನ, ತೋಪು, ಅಥವಾ ಇನ್ನಾವುದಾದರೂ ಸಾರ್ವಜನಿಕ ಸ್ಥಳದಲ್ಲಿ ಸೇರುತ್ತಿತ್ತು. ವಿದ್ಯಾವಂತರು, ಸದಸ್ಯರು, ವ್ಯವಸಾಯಗಾರರು, ಉತ್ತಮ ನಡತೆಯುಳ್ಳವರು, ಇತರರು ಎಲ್ಲರೂ ಸೇರುತ್ತಿದ್ದರು. ಸಭೆಯಲ್ಲಿ ನಿರ್ಣಯಗಳಾಗುತ್ತಿದ್ದುವು. ಈ ನಿರ್ಣಯಗಳನ್ನು ಕಾರ್ಯರೂಪಕ್ಕೆ ತರಲು, ಸಭೆಯು ತನ್ನ ಸದಸ್ಯರಲ್ಲಿ ದಕ್ಷನಾದವನೊಬ್ಬನನ್ನು 'ವಾರಿಯಂ' ಆಗಿ ಚುನಾಯಿಸಿ, ಅವನಿಗೆ ಕಾರ್ಯನಿರ್ವಹಣೆ ವಹಿಸುತ್ತಿತ್ತು. ಇವನು ಸಭೆಯ ಪರವಾಗಿ ಆಡಳಿತ ನಡೆಸುತ್ತಿದ್ದನು.

ಗ್ರಾಮಗಳಲ್ಲಿ ಪಕ್ಷ, ವಿಪಕ್ಷಗಳಿರಲಿಲ್ಲ. ಭಾಗ, ವಿಭಾಗಗಳೆಲ್ಲ ಒಟ್ಟಿಗೆಸೇರಿ, ಆಡಳಿತಕಾರ್ಯವನ್ನು ಸಹಕಾರ ಭಾವನೆಯಿಂದ ನಡೆಸುತ್ತಿದ್ದವು. ದ್ವೇಷಾಸೂಯೆಗಳಿಗಲ್ಲಿ ಸ್ಥಳವಿರಲಿಲ್ಲ. ಬೇರೆ ಬೇರೆ ಮಹಾಸಭೆಗಳಿಗೂ, ಇತರ ಸಂಸ್ಥೆಗಳಿಗೂ ಇದೇ ವಿಧವಾದ ಮಧುರಬಾಂಧವ್ಯವಿತ್ತು. ಊರು, ನಗರ, ನಾಡು ಇವುಗಳಲ್ಲಿಯೂ ಇಂತಹ ಆಡಳಿತ ವ್ಯವಸ್ಥೆ ಇತ್ತು. ಈ ಒಕ್ಕೂಟ ಸಭೆಗಳಲ್ಲಿ ರಾಜಪ್ರತಿನಿಧಿ ಆಗಾಗ್ಯೆ ಬಂದು ವಿಷಯ ಸಂಗ್ರಹ ಮಾಡುತ್ತಿದ್ದನು.

ಈ ಸಭೆಗಳಲ್ಲಿ ಮೊದಲು ವ್ಯವಸಾಯಾಭಿವೃದ್ಧಿಕಾರ್ಯದ ಪರಿಶೀಲನೆಯಾಗುತ್ತಿತ್ತು. ಸಾಗುವಳಿಯನ್ನು ಉತ್ತಮಪಡಿಸುವುದಕ್ಕೆ ಅಗತ್ಯವಾದ ನೀರಾವರಿ, ಮಾರ್ಗಾನುಕೂಲ, ಮುಂತಾದವುಗಳ ವ್ಯವಸ್ಥೆ ಆಗುತ್ತಿತ್ತು. ದೇವಾಲಯದ ಪಡಿತರ: ವ್ಯವಸ್ಥೆಗಾಗಿ ಉಚಿತ ಭೂಮಿ ಬಿಡಲಾಗಿತ್ತು. ಕುಡಿಯುವ ನೀರನ್ನು ಒದಗಿಸುವುದು ಸಭೆಯ ಮುಖ್ಯ ಕಾರ್ಯದಲ್ಲಿ ಒಂದಾಗಿತ್ತು. ಸಭೆಯು ಒಂದು ಕಡೆ ದೇವಾಲಯದ ಧರ್ಮದರ್ಶಿ, ಇನ್ನೊಂದು ಕಡೆ ಹಣವಂತರಿಂದ, ಭೂಮಿಯಿಂದ, ದೇವಾಲಯದ ಆಸ್ತಿಯಿಂದ. ಬಂದ ಹಣವನ್ನು ಗ್ರಾಮಾಭಿವೃದ್ಧಿಗಾಗಿ ಉಪಯೋಗಿಸುವ ಧರ್ಮ ಸಂಸ್ಥೆಯಾಗಿತ್ತು.

ಗ್ರಾಮದ ವಿದ್ಯಾಭ್ಯಾಸವನ್ನೂ ವ್ಯವಸ್ಥೆ ಪಡಿಸುವುದು ಸಭೆಯ ಮತ್ತೊಂದು ಮುಖ್ಯಕೆಲಸ. ಗ್ರಾಮದ ಮುಖ್ಯ ಸ್ಥಳದಲ್ಲಿ ಓದುಬರಹ ಬಲ್ಲವರು ಸುಲಭವಾಗಿ ಓದುವಂತೆ ಸ್ಥಳೀಯ ಭಾಷೆಯಲ್ಲಿ ಶಾಸನ ಬರೆದು ಹಾಕುವ ಏರ್ಪಾಡಾಗಿತ್ತು. ಪ್ರಾಥಮಿಕ ವಿದ್ಯಾಭ್ಯಾಸ ಸ್ಥಳೀಯ ಭಾಷೆಯಲ್ಲಿಯೂ, ಪ್ರೌಢ ವಿದ್ಯಾಭ್ಯಾಸ ಸಂಸ್ಕೃತದಲ್ಲಿಯೂ ನಡೆಯಲೇರ್ಪಾಡಾಗಿತ್ತು. ವಿದ್ಯಾಭ್ಯಾಸಕ್ಕೆ ದೇವಸ್ಥಾನವೇ ಮುಖ್ಯಕೇಂದ್ರ. ಕುಶಲಕಲೆ, ಸಂಗೀತ, ನೃತ್ಯ, ಕುಂದಣ ಕೆಲಸ — ಇವೆಲ್ಲಕ್ಕೂ ದೇವಾಲಯವೇ ಮುಖ್ಯ ಸ್ಥಾನ. ಉತ್ತಮ ಪುಸ್ತಕ ಭಂಡಾರವಿರುತ್ತಿತ್ತು. ನಾಟಕ ಕಲೆಗೆ ಪ್ರೋತ್ಸಾಹವೂ ಇಲ್ಲಿಂದಲೇ ದೊರೆಯುತ್ತಿತ್ತು. ಹೀಗೆ ಸಭೆಯು ತಾನು ಶೇಖರಿಸಿದ ಹಣವನ್ನು ದುಂದು ವೆಚ್ಚ ಮಾಡದೆ ಆರ್ಥಿಕಾಭಿವೃದ್ಧಿಗೂ, ಕುಶಲವಿದ್ಯಾ ಪ್ರಚಾರಕ್ಕೂ ಬಹು ಜಾಣತನದಿಂದ ವಿನಿಯೋಗಿಸುತ್ತಿತ್ತು. ಗೌತಮನ

ರಾಜ್ಯದಲ್ಲಿ ಅಪಾರ ಸಂಖ್ಯೆಯ ದೇವಾಲಯಗಳು ಸನಾಜಾಭಿವೃದ್ಧಿ ಕಾರ್ಯ ಕೈಗೊಂಡಿದ್ದವು.

ಒಟ್ಟನಲ್ಲಿ ಗ್ರಾಮ ಸಭೆಯು ಸಾಗುಭೂಮಿ ಇಲ್ಲದವರಿಗೆ ಸಾಗುವಮಾ ಡಲು ಜಮೀನು ಕೊಡುತ್ತಿತ್ತು. ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸು ತ್ತಿತ್ತು. ಗ್ರಾಮದ ಕೆಲಸಗಾರರನ್ನು ಒಟ್ಟಿಗೆ ಸೇರಿಸಿ ವೃತ್ತಿ ಜೀವನ ಸೌಕ ರ್ಯವುಂಟುಮಾಡುತ್ತಿತ್ತು. ಅನಾಥಾಲಯಗಳನ್ನು ನಿರ್ಮಿಸುವುದು, ದೇವಾ ಲಯ ಜೀರ್ಣೋದ್ಧಾರ, ವೇದಾಧ್ಯಯನ ಸಂಪನ್ನರಾದ ಅಧ್ಯಾಪಕರ ಪೋಷಣೆ, ಅನ್ನಸತ್ರ ಸ್ಥಾಪನೆ, ಮುಂತಾದ ಕಾರ್ಯಗಳನ್ನು ಕೈಗೊಂಡಿತ್ತು. ಹಾಗೆಯೇ ವೇದಾಂತ, ದರ್ಶನಶಾಲೆಗಳಿಗೆ ಸಹಾಯ ಮಾಡುತ್ತಿತ್ತು. ವಿದ್ಯಾರ್ಥಿ ನಿಲಯಗಳನ್ನು ಕಟ್ಟಿಸುವುದಕ್ಕೆ ಪ್ರೋತ್ಸಾಹ ಕೊಡುತ್ತಿತ್ತು. ಹೀಗೆ ಎಲ್ಲ ವಿಧದಲ್ಲಿಯೂ ಈ ಸಭೆಗಳು ಒಂದು ನೈತಿಕ ಸಂಘದಂತೆ, ಸಾರ್ವ ಜನಿಕಾಭಿಪ್ರಾಯಕ್ಕೆ ಮನ್ನಣೆ ಕೊಟ್ಟು ಆಡಳಿತ ಕಾರ್ಯ ನಿರ್ವಹಿಸುತ್ತಿದ್ದುವು.

ಇಂತಹ ಸಾವಿರಾರು ಸಂಸ್ಥೆಗಳು, ಜನರ ಆರ್ಥಿಕ, ಮತ್ತು ಧಾರ್ಮಿಕ ಜೀವನವನ್ನು ಸಮರಸವಾಗಿ ಹೊಂದಿಸಿ, ಗ್ರಾಮ ಜೀವನವು ಉಚ್ಛ್ರಧ್ಯೇಯ ದಿಂದ ಕೂಡಿರುವಂತೆ ಮಾಡಿದ್ದವು. ಸಂಸ್ಥೆಯ ಜನರನ್ನು ಆರಿಸುವಾಗ ನಡತೆ, ಗುಣ, ವಿದ್ಯೆ, ಮತ, ಇವಕ್ಕೆ ಮನ್ನಣೆ ಕೊಡುತ್ತಿದ್ದರೇ ವಿನಹ, ಶ್ರೀಮಂತಿಕೆಗಲ್ಲ, ದಾಕ್ಷಿಣ್ಯಕ್ಕಲ್ಲ, ವ್ಯಕ್ತಿಪ್ರಭಾವಕ್ಕಲ್ಲ. ಹೀಗೆ ಪ್ರತಿಯೊಂದು ಗ್ರಾಮವೂ ಒಂದು ತತ್ವ ಪ್ರತಿಪಾದನೆಯ ಸಂಕೇತಸ್ಥಾನವಾಗಿತ್ತು. ಬುದ್ಧಿ ಶಕ್ತಿ, ಚಟುವಟಿಕೆ, ಸಾತ್ವಿಕಗುಣ ಹೊಂದಿದವರಿಗೆ ಗೌರವವಿತ್ತು. ಅವ ರನ್ನು ಎಲ್ಲರೂ ಪ್ರೀತಿಸುತ್ತಿದ್ದರು. ವೃತ್ತಿ ಸಮಾನತೆ, ವೃತ್ತಿ ಗೌರವ ಚೆನ್ನಾಗಿತ್ತು. ಇಂತಹ ಉತ್ತಮ ಕ್ಷೇತ್ರದಲ್ಲಿ ವೇದಾಂತ, ವ್ಯವಹಾರಜ್ಞಾನ ವೆಂಬ ಬೀಜವು ಚೆನ್ನಾಗಿ ಮೊಳಕೆ ಬಂದು ಗಿಡವಾಗಿ ಬೆಳೆಯುತ್ತಿತ್ತು.

ಗೌತಮ ರಾಜ್ಯಭಾರದ ಫಲವಾಗಿ, ಎಲ್ಲೆಲ್ಲಿಯೂ, ಸುಖ ಆರೋಗ್ಯ, ನೆಮ್ಮದಿ ನೆಲಸಿತ್ತು. ಇಡೀನಾಡು, ಜ್ಞಾನಿಗಳ, ಸಾತ್ವಿಕರ, ವೃತ್ತಿಕಾರರ ಮಾದರಿ ಸ್ಥಾನವಾಗಿತ್ತು. ಅಂದಿನ ಆಡಳಿತ ಸ್ಥಿತಿಯು, ಜನರ ಭಾವನೆ ಯನ್ನು ವಿಶಾಲಗೊಳಿಸಿತ್ತು. ಪರಸ್ಪರ ಪ್ರೀತಿಯುತವಾಗಿರುವಂತೆ ಮಾ ಡಿತ್ತು. ಆಡಳಿತ ವಿಧಾನ ಸುಲಭವಾಗಿತ್ತು. ಎಲ್ಲೆಲ್ಲೂ ಸಮದರ್ಶಿತ್ವ

ಐಕ್ಯತೆ, ಸಾಮೂಹಿಕ ಭಾವನೆ, ಪಾರಮಾರ್ಥಿಕ ದೃಷ್ಟಿ, ತಾಂಡವ ವಾಡುತ್ತಿದ್ದವು.

ರಾಜದ್ರೋಹಿಗಳು.

ಜಗತ್ತಿನಲ್ಲಿ ಎಲ್ಲರನ್ನೂ ಮೆಚ್ಚಿಸುವುದು ಯಾರಿಗೂ ಸಾಧ್ಯವಿಲ್ಲ. ಗೌತಮನ ನ್ಯಾಯನೀತಿಯಿಂದ ಬಹು ಸಂಖ್ಯಾತರಿಗೆ ಮಹೋಪಕಾರವಾಯಿತು. ಆದರೆ ಕೆಲವು ಶ್ರೀಮಂತರಿಗೆ, ರಾಜ ಮನೆತನದವರಿಗೆ ಅಸಮಾಧಾನವಿತ್ತು. ಸಮಯ ನಿರೀಕ್ಷಣೆಮಾಡಿ, ಹೊಸ ರಾಜ್ಯಭಾರ ಕ್ರಮಕ್ಕೆ ಏನಾದರೂ ತೊಂದರೆ ತರಬೇಕೆಂದು ಹವಣಿಸುತ್ತಿದ್ದರು. ಇಂತಹವರಲ್ಲಿ ಹಿಂದಿನ ಆಸ್ಥಾನದ ಶ್ರೀಮಂತ ಸರದಾರರು ಬಹು ಮುಖ್ಯ ಪಾತ್ರ ವಹಿಸಿದ್ದರು. ಏಕೆಂದರೆ ಇವರಿಗೆ ಹಿಂದಿನಿಂದ ಬಂದ ರಿಯಾಯಿತಿಗಳು, ಮರ್ಯಾದೆಗಳು, ಅರಮನೆಯ ಉಚಿತ ಮಿರಾಸುಗಳು ಎಲ್ಲವೂ ತಪ್ಪಿ ಹೋಗಿದ್ದವು. ಇತರರ ದುಡಿಮೆ ಸೇವೆಯಿಂದ, ದೊಡ್ಡವರೆನಿಸಿಕೊಂಡಿದ್ದ ಇವರಿಗೆ ಈಗ ಕಷ್ಟವಾಯಿತು. ಅವರ ಅನ್ಯಾಯಕ್ಕೆ ಈಗ ಅವಕಾಶವಿರಲಿಲ್ಲ. ಇವರಿಗಿದ್ದ, ಅಸಹನೆ, ಅತೃಪ್ತಿ ಇನ್ಯಾರಿಗೂ ಇರಲಿಲ್ಲ.

ಹೀಗಿರುವಾಗ, ಮಳೆ ಬೆಳೆಯ ಅಭಾವದಿಂದ ಒಂದು ಸಲ ಶ್ರೀರಂಗಪುರದಲ್ಲಿ ಕ್ಷಾಮ ತಲೆದೋರಿತು. ಬಲ್ಲಿದರು ಬಂಡಾಯ ಎಬ್ಬಿಸಿದರು. ಅಲ್ಲಲ್ಲಿ ದಂಗೆ ಎಬ್ಬಿಸಲು ಪ್ರಯತ್ನಪಟ್ಟಿತು. ಶ್ರೀರಂಗಪುರದ ಆಡಳಿತದಲ್ಲಿ ಅನ್ಯಾಯ, ಅತ್ಯಾಚಾರ, ಅನರ್ಥ ಪರಂಪರೆ ಹೆಚ್ಚಿವೆ ಎಂದು ಕೆಲವರು ಅಪಪ್ರಚಾರ ಮಾಡತೊಡಗಿದರು. ರಾಜನು ಕ್ರಾಂತಿಕಾರಕ ನೀತಿಯನ್ನು ಅನುಸರಿಸುತ್ತಿದ್ದಾನೆಂದು ಇನ್ನೂ ಕೆಲವರು ಹೇಳುತ್ತಿದ್ದರು. ಇಂತಹ ದುಷ್ಕಾರ್ಯಗಳಲ್ಲಿ, ಶ್ರೀಮಂತ ಸರದಾರರು ಮುಖ್ಯಪಾತ್ರ ವಹಿಸುತ್ತಿದ್ದರು. ಇತರ ದೇಶದ ರಾಜರೊಡನೆ ಪಿತೂರಿಗೂ ಅವರು ಆರಂಭಿಸಿದ್ದರು.

ಕ್ಷಾಮ ತಲೆದೋರಿದಾಕ್ಷಣ. ಗೌತಮನು ಅರಮನೆಯಲ್ಲಿ ಶೇಖರಿಸಿಟ್ಟಿದ್ದ ಧನಕನಕ ವಸ್ತುವಾಹನಗಳನ್ನೂ ಕೊಟ್ಟು. ದೂರ ದೇಶಗಳಿಂದ ಆಹಾರ ವಸ್ತುಗಳನ್ನು ತರಿಸಿದನು. ಜನರಿಗೆ ಅವೆಲ್ಲವನ್ನೂ ಹಂಚಿಸಿದನು. ಕಾವೇರಿಗೆ ಅಡ್ಡಗಟ್ಟೆ ಹಾಕಿಸಿ ನಾಲೆ ತೋಡಿಸಿದನು. ರೈತರು ನೀರಾವರಿ ಸೌಕರ್ಯದಿಂದ ಹೆಚ್ಚು ಧಾನ್ಯ ಬೆಳೆಯುವಂತಾಯಿತು ಜನರಿಗೆ ಆಹಾರ ದೊರೆಯಿತು. ಶಾಂತಿ ನೆಲಸುವಂತಾಯಿತು. ಜನರು ಅರಸನನ್ನು ಹರಸಿದರು. ರಾಜನ ತ್ಯಾಗ. ನಿಷ್ಠೆ. ಕರ್ತವ್ಯ ನಿರ್ವಾಹ ಎಲ್ಲರಿಗೂ ಮಾರ್ಗದರ್ಶಕವಾಯಿತು.

ಶ್ರೀರಂಗಪುರದಲ್ಲಿ ಉಂಟಾದ ಪ್ರಜಾ ಸೌಖ್ಯ. ಕನ್ಯಾಕುಮಾರಿಯಿಂದ, ವಿಂಧ್ಯ ಪರ್ವತದವರೆಗೆ ಹರಡಿತು. ಇತರ ದೇಶಗಳ ಪ್ರಜೆಗಳು, ಗೌತಮನ ನೂತನ ತತ್ವವನ್ನು ತಿಳಿದು ಹೊಗಳಿದರು. ಅಂತಹ ಉತ್ತಮ ಪರಿಣಾಮಗಳು ತಮ್ಮ ದೇಶದಲ್ಲಿ ಏಕುಂಟಾಗಬಾರದು? 'ಭಗವಂತನ ಸೃಷ್ಟಿಯಲ್ಲಿ ಬಡವ ಬಲ್ಲಿದನೆಂಬ ತಾರತಮ್ಯವನ್ನು ಯಾವಾತನೆ ಸಹಿಸುವನು? ಈ ತಾರತಮ್ಯವೆಲ್ಲಾ ಶ್ರೀಮಂತರ ಕುತಂತ್ರದಿಂದ ಉಂಟಾಗಿದೆ, ಅವರ ಸೊತ್ತೆಯೇ ಎಲ್ಲ ಕಠಿಣ ಸಮಸ್ಯೆಗಳಿಗೆ ಕಾರಣವಾಗಿದೆ. ಶ್ರೀಮಂತರ ಸಿರಿತನವನ್ನು ತಡೆಗಟ್ಟದಲ್ಲದೆ ಬಡವರ ಉದ್ಧಾರವಾಗುವುದಿಲ್ಲ. ಶ್ರೀರಂಗಪುರದ ಮಾದರಿಯನ್ನು ತಾವೇಕೆ ಅನುಸರಿಸಬಾರದು ಎಂಬುದಾಗಿ ಚರ್ಚೆ ಮಾಡಲಾರಂಭಿಸಿದರು.

ಈ ಬಗೆಯ ಕ್ರಾಂತಿ ಭಾವನೆ ಕಾಡ್ಗಿಚ್ಚಿನಂತೆ ಎಲ್ಲ ದೇಶಗಳಲ್ಲೂ ಹರಡಿತು. ಇದನ್ನು ನೋಡಿ, ರಾಜರೂ ಶ್ರೀಮಂತರೂ ತಲ್ಲಣಿಸಿದರು. ಈ ಭಾವನೆಯನ್ನು ಮೂಲೋತ್ಪಾಟನೆ ಮಾಡಲು ಸಭೆ ಸೇರಿದರು. ಚರ್ಚೆ ಮಾಡಿದರು. ಶ್ರೀರಂಗ ರಾಷ್ಟ್ರದ ನೀತಿಯನ್ನು ಖಂಡಿಸಿದರು. ಅದರ ಹೆಸರೇ ಇಲ್ಲದಂತೆ ಮಾಡಬೇಕೆಂದು ನಿಶ್ಚಯ ಮಾಡಿದರು. ಹಾಗೆ ಮಾಡದಿದ್ದರೆ ತಾವುಗಳಾರೂ ಉಳಿಯುವಂತಿಲ್ಲವೆಂದು ಸ್ಪಷ್ಟವಾಗಿ ಹೇಳಿದರು. ಆ ಸಮಯಕ್ಕೆ ಸರಿಯಾಗಿ, ಶ್ರೀರಂಗ ರಾಷ್ಟ್ರದ ಶ್ರೀಮಂತ ಸರದಾರರು ಅಲ್ಲಿಗೆ ಬಂದು ಸೂಕ್ತ ಸಲಹೆ ಕೊಟ್ಟರು. ಗೌತಮನನ್ನು ರಾಜ್ಯಭ್ರಷ್ಟನನ್ನಾಗಿ ಮಾಡುವುದಕ್ಕೆ ಬೇಕಾದ ಉಪಾಯಗಳನ್ನು ತಿಳಿಸಿದರು. ಈ ಕಾರ್ಯಕ್ಕಾಗಿ

ಶ್ರೀರಂಗಪುರವನ್ನು ಆಕ್ರಮಿಸಬೇಕೆಂದು ಒಂದು ದೊಡ್ಡ ಸೈನ್ಯ ಶೇಖರ ಣೆಯೂ ಆಯಿತು.

ಕಾವೇರಿನದೀತೀರದ ಉತ್ತರಶಾಖೆಯ ಹತ್ತಿರ ಸೈನ್ಯಪಾಳೆಯ ಬಿಟ್ಟಿತು. ಅದರೊಡನೆ ಯುದ್ಧಮಾಡಲು ಶ್ರೀರಂಗ ರಾಷ್ಟ್ರದ ರಾಜನ ಹತ್ತಿರ ಯಾವ ಸೈನ್ಯವೂ ಇರಲಿಲ್ಲ. ಸೈನ್ಯಕ್ಕಾಗಿ ಪ್ರಜೆಗಳ ಹಣ ವೆಚ್ಚ ಮಾಡಬಾರದೆಂದು ಗೌತಮರಾಜನು ಹಿಂದೆ ಇದ್ದ ಸೈನ್ಯವನ್ನು ವಜಾಮಾಡಿ ದ್ದನು. ಆದರೆ ಸಮಯಬಂದಾಗ ಎಲ್ಲರೂ ರಕ್ಷಣಾಭಾರ ವಹಿಸುವಂತೆ ಜನರನ್ನು ಸಿದ್ಧಪಡಿಸಿ, ಅವರವರ ಕಾರ್ಯದಲ್ಲಿ ಅವರು ಇರುವಂತೆ ಏರ್ಪಾ ಡಾಗಿದ್ದಿತು. ದೇಶ ಹಿತಕ್ಕಾಗಿ ಪ್ರಾಣಾರ್ಪಣೆ ಮಾಡಲು ಇಡೀ ಪ್ರಜಾ ಸಮೂಹವೇ ಸಿದ್ಧವಿರುವಾಗ, ಸೈನ್ಯದ ಅವಶ್ಯಕತೆ ಅಷ್ಟಾಗಿರಲಿಲ್ಲ. ಹೊಸ ಆಡಳಿತ ಕ್ರಮದ ಫಲವಾಗಿ, ಎಲ್ಲ ಜನರಲ್ಲಿ ಉಜ್ವಲರಾಷ್ಟ್ರಾಭಿಮಾನ ತುಂಬಿತ್ತು. ಶತ್ರುಸೈನ್ಯ ಪಾಳೆಯ ಬಿಟ್ಟ ಸಂಗತಿ ಶ್ರೀರಂಗಪುರದ ಪ್ರಜೆ ಗಳಿಗೆ ತಿಳಿಯಿತು. ಅವರೆಲ್ಲ ಒಟ್ಟುಗೂಡಿ ಸಂಧಾನ ಮಾಡಿದರು. ಅವರಲ್ಲಿ ಹಿರಿಯರಾದ ಕೆಲವರು ಬಂದು ಸೂಚನೆ ಕೊಟ್ಟರು. ಆದೇನೆಂದರೆ, ಶತ್ರು ಸೈನ್ಯದ ನಾಯಕರನ್ನು ಪ್ರತ್ಯೇಕವಾಗಿ ಕರೆದು, ತಮ್ಮ ನೂತನ ರಾಜನೀತಿ ಯನ್ನು ಅವರಿಗೆ ಮನದಟ್ಟಾಗುವಂತೆ ವಿವರಿಸಿದರೆ, ಅವರಲ್ಲಿ ಬದಲಾವಣೆ ಯುಂಟಾಗಿ, ಶಾಂತಿಪರಿಸ್ಥಿತಿ ಏರ್ಪಡಬಹುದೆಂದು ಊಹಿಸಿದರು.

ಉತ್ತಮವಾಗ್ಮಿಗಳಾದ ನಾಲ್ಕುಜನ ಯೋಧರು ಮೇಲಿನ ಸಲಹೆಯಂತೆ ಶತ್ರುಪಾಳಯಕ್ಕೆ ಬಂದರು. ನಾಯಕರನ್ನು ಕಂಡು ಮಾತನಾಡಿದರು. ಪಾಳೆಯದ ಸಿಪಾಯಿಗಳನ್ನೆಲ್ಲಾ ಉದ್ದೇಶವಾಡಿ, ಭಾಷಣಮಾಡುವುದಕ್ಕೆ ಅವರು ಅವಕಾಶವಿತ್ತರು. ಶ್ರೀರಂಗಪುರದ ಸೈನ್ಯನಾಯಕರು ಅವರನ್ನು ಕುರಿತು ಹೀಗೆ ಹೇಳಿದರು.

“ಯೋಧರೇ! ನೀವುಗಳೆಲ್ಲ ಧೀರ ಸಿಪಾಯಿಗಳು. ಸರ್ವೋತ್ತಮ ಸೈನ್ಯಶಿಕ್ಷಣ ಪಡೆದ ಮಾನವರು. ನಮ್ಮೊಡನೆ ಕಾದಾಡುವುದಕ್ಕೆ ನೀವು ಈಗ ಬಂದಿದ್ದೀರಾ? ಹಾಗೆ ಮಾಡುವುದಕ್ಕೆ ಮುಂಚೆ ದಯವಿಟ್ಟು ಸ್ವಲ್ಪ ಯೋಚನೆಮಾಡಿ. ಯಾರಿಗಾಗಿ, ಯಾತಕ್ಕೋಸ್ಕರ. ಯಾರೊಡನೆ ಹೋರಾಡಬೇಕೆಂಬುದನ್ನು ವಿಚಾರಮಾಡಿ? ಮಾನವಜನ್ಮ ಶ್ರೇಷ್ಠ

ಹಾದುದು. ಮಾನವರಾದ ನೀವು ಮಾನವೀಯತೆಯನ್ನು ತೋರಿಸಬೇಡವೇ? ಮಾನವರಾದ ನಾವು ನಿಮಗೆ ಮಾಡಿರುವ ಅಪಕಾರವೇನು? ನಿಮಗೇನು ಕಷ್ಟ ಕೊಟ್ಟದ್ದೇವೆ? ನಮ್ಮ ರಾಜರೇನಾದರೂ ನಿಮ್ಮ ರಾಷ್ಟ್ರ ಆಕ್ರಮಣ ಮಾಡಿದ್ದಾರೆಯೇ? ಈ ಕೊಲೆಪಾತಕ ಕಾರ್ಯಕ್ಕೆ ನಿಮ್ಮನ್ನು ಪರಮಾತ್ಮನು ಸೃಷ್ಟಿಮಾಡಿದನೇ? ಭಗವಂತನು ಕ್ರೌರ್ಯ, ಕೊಲೆ, ಅನ್ಯಾಯ ಇವುಗಳನ್ನು ಎಂದಿಗೂ ಸಹಿಸುವುದಿಲ್ಲ. ನೀವು ಯಾರಿಗಾಗಿ, ಏತಕ್ಕಾಗಿ ಈ ಕೊಲೆಪಾತಕ ಕಾರ್ಯದಲ್ಲಿ ಪ್ರವರ್ತಕರಾಗಬೇಕು? ಇದರಿಂದ ನಿಮಗುಂಟಾಗುವ ಪ್ರಯೋಜನವೇನು? ಸಾವಿರಾರು ಮಂದಿಯ ರಕ್ತಪಾತವಾಗಿ ಒಬ್ಬನು ಶ್ರೀಮಂತನಾಗಬೇಕೇ? ಸಾವಿರಾರು ಜನರು ಒಬ್ಬ ಮಾನವನಿಗಾಗಿ ಪ್ರಾಣಾರ್ಪಣ ಮಾಡಬೇಕೇ? ಇದರಲ್ಲಿ ನಿಮಗೆ ತೃಪ್ತಿಯಾಗುವುದೇ? ನೀವು ಒಬ್ಬ ಶ್ರೀಮಂತನ ಶ್ರೇಯಸ್ಸಿಗಾಗಿ ನಿರಪರಾಧಿಗಳಾದ ನಮ್ಮನ್ನು ಕೊಲ್ಲಲು ಕೈಯೆತ್ತುವುದು ಸರಿಯೇ? ಎಲ್ಲಿಯೋ ದೂರದಲ್ಲಿ ಭೋಗವಿಲಾಸವನ್ನು ಅನುಭವಿಸುತ್ತಾ, ಇರಿ, ಕೊಲ್ಲು, ಕಡಿ, ಎಂದು ನಿಮ್ಮನ್ನು ಪ್ರೇರೇಪಿಸಿರುವ ಆ ಶ್ರೀಮಂತ ನಿಮ್ಮೊಡನೆ ಏಕೆ ಇರಬಾರದು? ಈ ಮಹಾ ಪಾಪ ಕೆಲಸಕ್ಕಾಗಿ ನಿಮ್ಮನ್ನು ತಳ್ಳಿದ್ದಾನೆ. ದುಡಿಯುವುದಕ್ಕೆ ನೀವು? ಪ್ರಾಣಾರ್ಪಣೆಗೆ ನೀವು? ಸುಖ ಪಡುವುದಕ್ಕೆ ಅವನು. ಇದು ಎಲ್ಲಿಯ ಧರ್ಮ? ಇದು ಎಂತಹ ನ್ಯಾಯ? ನಾವು ನಿಮ್ಮ ಮಿತ್ರರು. ನಿಮ್ಮಂತೆ ನಾವು ನಿರಪರಾಧಿಗಳು. ಕೊಲೆ ಕಡುಕತನ ನಿಮ್ಮ ವೃತ್ತಿಯೂ, ಧ್ಯೇಯವೂ ಆಗಿದ್ದರೆ, ಬನ್ನಿ ನಮ್ಮನ್ನೆಲ್ಲಾ ಕೊಂದು ಬಿಡಿ, ನಾವು ನಿಮ್ಮಮೇಲೆ ಕೈ ಮಾಡುವುದಿಲ್ಲ. ನಿಮ್ಮ ಇಷ್ಟದಂತೆ ಮಾಡಬಹುದು. ಹಾಗಿಲ್ಲದಿದ್ದರೆ, ನಿಮ್ಮ ರಾಜ್ಯಕ್ಕೆ ನೀವು ಹಿಂತಿರುಗಿ. ನಾವು ಸ್ಥಾಪಿಸಿರುವ ರಾಮರಾಜ್ಯ ಪದ್ಧತಿಯನ್ನು ನಿಮ್ಮಲ್ಲಿಯೂ ಸ್ಥಾಪಿಸಿ, ಬಡವರನ್ನೂ, ಬಲ್ಲಿದರನ್ನೂ, ದಲಿತರನ್ನೂ ಉದ್ಧಾರಮಾಡಿ." ಎಂದು ಹೇಳಿದರು.

ಈ ಮಾತುಗಳು ಸೈನಿಕರಮೇಲೆ ಸರ್ವೋತ್ತಮ ಪರಿಣಾಮವನ್ನುಂಟು ಮಾಡಿದವು. ಎಲ್ಲವು ಸತ್ಯವಾಗಿ ಕಂಡಿತು ಅವರಿಗೆ. ಅವರೆಲ್ಲ ತಮ್ಮ ಸಾಮಾನುಗಳನ್ನು ಮೂಟೆ ಕಟ್ಟಿ ಹಿಂತುರುಗಿದರು. ಶ್ರೀರಂಗಪುರಕ್ಕೆ ಅಗಾಧವಾಗಿ ಬಂದಿದ್ದ ಆಪತ್ತು ಮಂಜಿನಂತೆ ಮಾಯವಾಯಿತು. ಈ ಮುತ್ತಿಗೆಗೆ

ಕಾರಣರಾಗಿದ್ದ ಕೆಲವು ದ್ರೋಹಿಗಳನ್ನು ವಿಚಾರಣೆಗೆ ಒಳಪಡಿಸಿ ಆಯಿತು. ರಾಜದ್ರೋಹ, ಪ್ರಜಾದ್ರೋಹ ಆಪಾದನೆ ಸ್ಥಿರಪಟ್ಟಮೇಲೆ ಅವರಿಗೆ ಮರಣ ದಂಡನೆ ವಿಧಿಸಿ ಆಯಿತು. ಇವರಲ್ಲಿ ಕೆಲವರು, ಸುಮ್ಮನಿರದೆ ಭೇದೋಪಾಯ ಹೂಡಿದರು. ಅಂತಹವರು ಅಹಲ್ಯೆಯ ಮರೆಹೊಕ್ಕರು. ಅವಳಲ್ಲಿ ಇಲ್ಲದ ಸಲ್ಲದ ದೂರು ಹೇಳಿದರು. ತಾವು ಅವಳ ತಂದೆಯ ಅನುಯಾಯಿಗಳೆಂದೂ, ಹೇಗಾದರೂ ಮಾಡಿ, ತಮ್ಮನ್ನು ಅವಳು ರಕ್ಷಿಸಲೇ ಬೇಕೆಂದು ಬಹುವಾಗಿ ಬೇಡಿದರು. ಅವಳ ಸ್ವಭಾವಕ್ಕೆ ಸಹಜವಾದ ಕರುಣೆ ಅವಳಲ್ಲಿ ಉಂಟಾ ಯಿತು, ಹಾಗೆಯೇ ಮಾಡುವುದಾಗಿ ಭರವಸೆಕೊಟ್ಟಳು.

ಸಮಯವರಿತು, ಅಹಲ್ಯೆಯು ಗೌತಮನ ಬಳಿ ಬಂದು, ಆಪಾದಿತರ ತಪ್ಪನ್ನು ಕ್ಷಮಿಸಿ, ಜೀವದಾನ ಮಾಡಬೇಕೆಂದು ಒತ್ತಾಯ ಪಡಿಸಿದಳು. ಅವರೆಲ್ಲರೂ ತನ್ನ ತಂದೆಗೆ ಬಹುವಾಗಿ ನೆರವಾಗಿದ್ದ ದೇಶಭಕ್ತರೆಂಬ ವಿಷಯ ವನ್ನು ತಿಳಿಸಿದಳು. ಗೌತಮನಿಗೆ ಏನು ಮಾಡಬೇಕೆಂದು ನಿರ್ಧರಿಸುವುದು ಕಷ್ಟ ಯಿತು. ಒಂದು ಕಡೆ ಪ್ರೀತಿಯ ಸತಿ, ತನ್ನ ತಂದೆಗೆ ಸಹಾಯಕರಾಗಿದ್ದು ಈಗ ಏನೋ ತಪ್ಪುಮಾಡಿದ್ದರೆ, ಅಂತಹವರನ್ನು ಕ್ಷಮಿಸಬೇಕೆಂದು ಕೇಳುತ್ತಿ ದ್ದಾಳೆ. ಅದನ್ನು ನಿರಾಕರಿಸುವುದು ಹೇಗೆ? ಇನ್ನೊಂದು ಕಡೆ ಪ್ರಜೆಗಳು ಅವರನ್ನು ರಾಜದ್ರೋಹಿಗಳು, ರಾಷ್ಟ್ರದ್ರೋಹಿಗಳು ಎಂದೂ ನಿಶ್ಚಯಮಾಡಿ ದ್ದಾರೆ. ಅದನ್ನು ವಿರೋಧಿಸುವುದು ಹೇಗೆ? ಒಂದು ಕಡೆ, ಧರ್ಮ, ಕರ್ತವ್ಯ, ರಾಜನೀತಿ. ಇನ್ನೊಂದುಕಡೆ ಅಹಲ್ಯೆಯ ಹಠ, ಮೊಂಡುತನ. ಇಂತಹ ಕಠಿಣ ಸಮಸ್ಯೆಯನ್ನು ಕೂಡಲೆ ಬಗೆಹರಿಸುವುದು ಸಾಧ್ಯವಾಗಲಿಲ್ಲ ಆಪಾದಿತರು ಅಹಲ್ಯೆಯ ತಂದೆಗೆ ಆಪ್ತರಾಗಿದ್ದವರೆಲ್ಲವೆಂಬುದು ಧೃಡಪಟ್ಟಿತು. ಒಂದುಪಕ್ಷ ಹಿತರೇ ಆಗಿದ್ದರೂ, ರಾಷ್ಟ್ರದ ಹಿತದಲ್ಲಿ ಅವರನ್ನು ಶಿಕ್ಷಿಸುವುದು ಅವನ ಕರ್ತವ್ಯವಾಗಿತ್ತು. ಕುಲದ ಹಿತಕ್ಕಾಗಿ ಸ್ವಜನರನ್ನೂ, ಗ್ರಾಮ ಕ್ಕಾಗಿ ಕುಲವನ್ನೂ, ದೇಶಕ್ಕಾಗಿ ಗ್ರಾಮವನ್ನೂ ಸುಜ್ಞರು ಬಿಡುವರೆಂಬ ವಚನ ಜ್ಞಾಪಕಕ್ಕೆ ಬಂದಿತು. ದ್ರೋಹಿಗಳು ಶಿಕ್ಷೆ ಅನುಭವಿಸ ಬೇಕಾಯಿತು.

ಇದರಿಂದ ಅಹಲ್ಯೆಯು ಬಹು ಅಸಮಾಧಾನ ಹೊಂದಿದಳು. ಅವಳಿಗೆ ಹುಚ್ಚುಕೋಪವುಂಟಾಯಿತು. "ನಾರಿ ಮುನಿದರೆ ಹೆಮ್ಮಾರಿ" ಎಂಬುದು

ಎಲ್ಲರ ಅನುಭವದ ಮಾತು. ಇಷ್ಟಾದರೂ ಗೌತಮನಿಗೆ ಅಹಲ್ಯೆಯಮೇಲೆ ಯಾವ ವಿಧವಾದ ಅಸಮಾಧಾನವೂ ಉಂಟಾಗಲಿಲ್ಲ. ಒಂದು ಸಲ ಅಹಲ್ಯೆಯನ್ನು ಕುರಿತು ಗೌತಮನು ಹೀಗೆ ಹೇಳಿದನು. "ಅಹಲ್ಯೆ! ನಮ್ಮಿಬ್ಬರ ಆತ್ಮವೂ ಒಂದಾಗಿದೆ. ನಮ್ಮ ಪವಿತ್ರ ಪ್ರೇಮವನ್ನು ಖಡ್ಗ ಕಡಿಯಲಾರದು. ಕೋಪ ಮುರಿಯಲಾರದು; ಅಗ್ನಿ ಸುಡಲಾರದು. ಎಷ್ಟು ಕೋಪವಾಡಿದರೂ ನೀನು ನನ್ನವಳು, ಕ್ಷಮಾರ್ಹಳು. ಸತ್ಯವೊಂದು ಮಾತ್ರ ನನಗೆ ನಿನಗಿಂತ ಹೆಚ್ಚಿನದಾಗಿದೆ. ಮಿಕ್ಕೆಲ್ಲ ಭಾಗದಲ್ಲಿ ನಿನಗಿಂತ ದೊಡ್ಡದು ನನಗೆ ಇನ್ನಾವುದೂ ಇಲ್ಲ. ಸತ್ಯಮಾರ್ಗದಲ್ಲಿರುವುದಕ್ಕೆ ನೀನು ನನಗೆ ಸಹಾಯಕಳಾಗಿ ನಿಲ್ಲು. ಅಹಲ್ಯೆ! ಇನ್ನು ಮುಂದಾದರೂ, ನಮ್ಮ ಜೀವನದೋಣಿಯನ್ನು ನಾವಿಬ್ಬರೂ ಸತ್ಯಮಾರ್ಗದಲ್ಲಿಯೇ ನಡೆಸಲು, ನಿತ್ಯ ಜೀವನದಲ್ಲಿ ಸತ್ಯವನ್ನೇ ಮುಂದಿಟ್ಟು. ಅಹಿಂಸಾವರ್ತಿಗಳಾಗಿ ಮುಂದುವರಿಯೋಣ. ಇದನ್ನು ಪರಮೇಶ್ವರನು ಖಂಡಿತ ಮೆಚ್ಚುವನು" ಎಂದನು.

ಪಿತೂರಿ

ಗೌತಮನ ರಾಜನೀತಿಯ ಅರ್ಥವನ್ನು ತಿಳಿಯಲು ಅಹಲ್ಯೆಯು ಎಂದೂ ಪ್ರಯತ್ನ ಮಾಡಲಿಲ್ಲ. ಅವಳ ಚಿತ್ತವೃತ್ತಿ ಬೇರೆ ರೀತಿಯದಾಗಿತ್ತು. ವಿವಾಹವಾದ ಕೂಡಲೆ, ಅವಳ ಆಶೆಗೆ ಭಂಗವುಂಟಾಗಿತ್ತು. ಪಟ್ಟಮಹಿಷಿಯಾಗಿ, ಅರಮನೆಯಲ್ಲಿ ಸಕಲ ಸುಖ ಸಾಮ್ರಾಜ್ಯದಲ್ಲಿ ಕಾಲಕಳೆಯಬೇಕೆಂದು ಇದ್ದ ಅವಳ ಆಶೆ ಮಣ್ಣುಪಾಲಾಗಿತ್ತು. ಬಾಲ್ಯಸ್ನೇಹಿತನೂ, ಅತ್ಯಂತ ಸುಂದರನೂ, ಮಹಾ ಮೇಧಾವಿಯೂ, ಆದ ಗೌತಮನನ್ನು ಅವಳು ವಿವಾಹವಾದುದು ಇದಕ್ಕಾಗಿಯೇ? ಆದರೆ ಇದು ಕಾರ್ಯಗತವಾಗಲಿಲ್ಲ. ಅವಳಿಗೆ ಒಂದೊಂದು ಸಲ ಆ ಇಂದ್ರಸೇನ ರಾಜನನ್ನು ವಿವಾಹವಾಗಿದ್ದರೆ ಸಕಲ ರಾಜಭೋಗವಿಲಾಸಗಳನ್ನು ಅನುಭವಿಸಬಹುದಾಗಿತ್ತಲ್ಲಾ ಎಂದೆನಿಸುತ್ತಿತ್ತು. 'ಈ ನನ್ನ ಮನೋವ್ಯಥೆಯು, ಈ ಸನ್ಯಾಸಿ ರಾಜನಿಗೆ ಹೇಗೆ ತಿಳಿಯಬೇಕು?

ರಾಜವೈಭವವನ್ನೂ, ರತ್ನಾಲಂಕಾರ ವಸ್ತುಗಳನ್ನೂ, ಹಂಸತೂಲಿಕಾತಲ್ಪವನ್ನೂ, ಇವನಿಗಾಗಿ ಅಲ್ಲವೇ ನಾನು ತೊರೆದುದು ! ರಾಜಕುಮಾರಿಯಾದ ನಾನು, ಇವನ ತೃಪ್ತಿಗಾಗಿ, ಒರಟು ಬಟ್ಟೆ ಉಡುತ್ತಿದ್ದೇನೆ. ಇತರರಂತೆ ಆಶ್ರಮದ ಕೆಲಸ ಮಾಡುತ್ತಿದ್ದೇನೆ. ನೆಲದ ಮೇಲೆ ಮಲಗುತ್ತಿದ್ದೇನೆ. ಇದೆಲ್ಲಾ ಸ್ವಾರ್ಥತ್ಯಾಗವಲ್ಲವೇ? ಇಷ್ಟೆಲ್ಲಾ ನಾನು ಗೌತಮ ರಾಜನಿಗಾಗಿ ಮಾಡುತ್ತಿದ್ದರೂ, ನನ್ನ ಇಷ್ಟಾರ್ಥವನ್ನು ತಿಳಿದು ಅದರಂತೆ ನಡೆದುಕೊಳ್ಳಲು ಸ್ವಲ್ಪವೂ ರಾಜನು ಪ್ರಯತ್ನಿಸುತ್ತಿಲ್ಲವಲ್ಲಾ ! ಇವನಿಂದ ಹಿಂದಿನ ರಾಜರ ಅನುಯಾಯಿಗಳೆಲ್ಲಾ ಹಾಳಾದರು. ಶ್ರೀಮಂತರ ಮನೆಯಲ್ಲಾ ಹಾಳಾದವು. ಆಶ್ರಮದ ಮುನಿಕುಮಾರನು ರಾಜನಾದುದರಿಂದ, ಹೀಗೆಲ್ಲ ಆಗಿರಬಹುದೇ ? ಇದಕ್ಕೆ ಕಾರಣ ನಾನೇ ಅಲ್ಲವೇ ? ಎಂದು ಅಹಲ್ಯೆ ಕೊರಗುತ್ತಿದ್ದಳು.

ಗೌತಮನ ದೃಷ್ಟಿ ಬೇರೆ ರೀತಿಯದಾಗಿತ್ತು. ತನ್ನಮೇಲೆ ಅನಿರೀಕ್ಷಿತವಾಗಿ ಹೊರಿಸಲ್ಪಟ್ಟ ಲೋಕಸೇವೆಯ ಕರ್ತವ್ಯ ನಿರ್ವಹಣೆಗೆ ಅಹಲ್ಯೆ ಸಹಾಕಳಾಗಿ ನಿಲ್ಲುವಳೆಂದು ಅವನು ತಿಳಿದಿದ್ದನು. ತನ್ನ ರಾಜನೀತಿಯ ತಿರುಳನ್ನು ಅವಳು ಇಂದಲ್ಲ ನಾಳೆಯಾದರೂ ತಿಳಿದು ನೆರವಾಗುವಳೆಂದು ಅವನು ನಿರೀಕ್ಷಿಸಿದ್ದನು. ಮಾನವನು ಗೌರವದಿಂದ ಇರಬೇಕಾದರೆ, ಮೊದಲು ಅವನು ತ್ಯಾಗಿಯಾಗಬೇಕು, ಹಾಗೆಯೇ, ಶ್ರೀಮಂತಿಕೆಯು ದಾನದಲ್ಲಿಯೂ, ಐಶ್ವರ್ಯವು ಪರೋಪಕಾರದಲ್ಲಿಯೂ, ಪ್ರವರ್ತಿಸಬೇಕೆಂಬುದೇ ಅವನ ಮತ. ಈ ನೀತಿಯನ್ನು ತನ್ನ ರಾಜ್ಯದಲ್ಲಿ ಯಶಸ್ವಿಯಾಗುವಂತೆ ಮಾಡಲು, ಅವನು ಹಗಲಿರುಳೂ ದುಡಿಯಬೇಕಾಯಿತು. ಇದರ ಮಹಿಮೆಯನ್ನೂ, ಫಲವನ್ನು ಎಲ್ಲರಿಗೂ ವಿವರಿಸಬೇಕಾಯಿತು. ಇದನ್ನು ಪ್ರತಿಭಟಿಸಿದವರನ್ನು ಶಿಕ್ಷಿಸಬೇಕಾಯಿತು. ಈ ತತ್ವ ಪ್ರಸಾರಕ್ಕೆ ನೆರೆಹೊರೆಯ ರಾಷ್ಟ್ರಗಳು ಕೂಡ ವಿರೋಧವಾಗಿದ್ದುವು. ಅವನ್ನು ಎದುರಿಸಬೇಕಾಯಿತು. ಇಂತಹ ಗುರುತರ ಕಾರ್ಯನಿರ್ವಹಣೆಯಲ್ಲಿ, ಅಹಲ್ಯೆಯ ಭೋಗಾಭಿಲಾಷೆಯನ್ನು ಪೂರ್ತಿಗೊಳಿಸುವುದಕ್ಕೆ ಅವನಿಗೆ ವಿಶೇಷ ಕಾಲ ಇರಲಿಲ್ಲ. ಅಷ್ಟೇವಿನಹ, ಅವಳಲ್ಲಿ ಪೂರ್ಣವಾದ ಅನುರಕ್ತಿ ಇತ್ತು.

ಹೀಗಿರುವಾಗ ಯಾರಾದರೊಬ್ಬರು, ಇವರಿಬ್ಬರಲ್ಲಿದ್ದ ಅಂತರವನ್ನು

ಬಹು ಸುಲಭವಾಗಿ ಹೋಗಲಾಡಿಸಬಹುದಾಗಿತ್ತು. ಅಂತಹ ಹಿರಿಯರ್ಯಾರೂ ಅಲ್ಲಿರಲಿಲ್ಲ. ಈ ಸಣ್ಣ ಅಂತರವನ್ನು ದೊಡ್ಡದನ್ನಾಗಿ ಮಾಡಿ, ಅಹಲ್ಯೆಯ ಸಂಸಾರವನ್ನು ಮುರಿಯುವುದಕ್ಕೆ, ಕಾಳಸರ್ಪಿಣಿಯಂತೆ ಆತ್ರೇಯಿಯು ಕಾದಿದ್ದಳು. ಹೊರಗೆ ಮಾತ್ರ, ಅವಳು ಬಹು ಹಿತವಂತಳಂತೆ ಕಾಣಿಸಿ ಕೊಳ್ಳುತ್ತಿದ್ದಳು. ಇವಳು ಮೊದಲಿನಿಂದಲೂ ಪಿತೂರಿಕಾರಿಣಿ, ಇದಕ್ಕೆ ಕಾರಣವೂ ಇತ್ತು. ಇವಳಿಗೆ ಗೌತಮನಮೇಲೆ ಪ್ರಾರಂಭದಿಂದ ಪ್ರೀತಿ ಯಿತ್ತು. ಅಹಲ್ಯೆಯನ್ನು ಬೇರೊಬ್ಬ ರಾಜಕುಮಾರನಿಗೆ ಮದುವೆ ಮಾಡಿಸಿ, ತಾನು ಗೌತಮನನ್ನು ವಿವಾಹಮಾಡಿಕೊಳ್ಳಬೇಕೆಂಬ ಇಷ್ಟವಿತ್ತು. ಅದು ಸಾಧ್ಯವಾಗಲಿಲ್ಲ. ಆದರೂ ಅವಳು ನಿರಾಶಳಾಗದೆ, ಗೌತಮ ಅಹಲ್ಯೆಯರಲ್ಲಿ ಭಿನ್ನಾಭಿಪ್ರಾಯವನ್ನು ತಂದು ಅದನ್ನು ದೊಡ್ಡದು ಮಾಡಿ, ಅಹಲ್ಯೆಯ ಮೇಲೆ ಏನಾದರೂ ದೋಷವನ್ನು ಹೊರಿಸಿ, ಗೌತಮನನ್ನು ತನ್ನ ಕಡೆಗೆ ಒಲಿಸಿಕೊಳ್ಳಬೇಕೆಂಬ ದುರಾಸೆ ಹೊಂದಿದ್ದಳು.

ಈ ದುರಭಿಪ್ರಾಯದಿಂದ ಅವಳು ಆಗಾಗ ಗೌತಮನಲ್ಲಿಗೆ ಬಂದು ಅವನ ಹಿತಕಾರಿಣಿಯಂತೆ ವರ್ತಿಸಿ, ಆಡಳಿತ ಗುಟ್ಟನ್ನು ತಿಳಿದು ಶತ್ರು ರಾಜರಿಗೆ ತಿಳಿಸುತ್ತಿದ್ದಳು. ಅಹಲ್ಯೆಯ ಬಳಿಗೆ ಬಂದು, ಗೌತಮನ ಮೇಲಿನ ದೋಷಾರೋಪಣೆ ಹೇಳುವುದು. ತನ್ನ ಮನೋರಥ ಕೈಗೂಡದಿದ್ದ ಭಾಗದಲ್ಲಿ ಗೌತಮನನ್ನು ರಾಜ್ಯಭ್ರಷ್ಟನನ್ನಾಗಿ ಮಾಡುವುದಕ್ಕೂ ಅವಳು ಸಿದ್ಧಳಿದ್ದಳು. ಗೌತಮ ಅಹಲ್ಯೆಯರಲ್ಲಿನ ವಿಶ್ವಾಸ ಕಡಿಮೆ ಮಾಡುವುದಕ್ಕೆ ಇವಳು ಸರ್ವ ಸನ್ನಾಹ ಮಾಡುತ್ತಿದ್ದಳು. ಇವಳು ಬಹು ಸ್ವಾರ್ಥಿಯಾಗಿದ್ದುದರಿಂದ ಯಾವ ಹೀನಕೆಲಸಮಾಡಿಯಾದರೂ ತನ್ನ ಇಷ್ಟಾರ್ಥ ಪೂರ್ತಿ ಮಾಡಿಕೊಳ್ಳು ವುದಕ್ಕೆ ಪ್ರಯತ್ನ ಮಾಡಲಿಷ್ಟವುಳ್ಳವಳಾಗಿದ್ದಳು.

ಗೌತಮನ ನೂತನ ಕ್ರಾಂತಿಕಾರಕ ಆಡಳಿತ ನೀತಿಯನ್ನು ಧ್ವಂಸ ಮಾಡುವುದಕ್ಕೆ ಶ್ರೀರಂಗರಾಷ್ಟ್ರದ ನೆರೆಹೊರೆಯ ರಾಜರು ಸಮಯ ಕಾಯು ತ್ತಿದ್ದರು. ಇವರಲ್ಲಿ ಬಹು ಮುಖ್ಯನಾದವನು ಇಂದ್ರಸೇನರಾಜ. ಅಹಲ್ಯೆ ಯನ್ನು ವಿವಾಹ ಮಾಡಿಕೊಳ್ಳುವುದಕ್ಕೆ ಇವನು ಮೊದಲೇ ಸರ್ವ ಸನ್ನಾಹ ಮಾಡಿದ್ದನು. ಅದು ಫಲಕಾರಿಯಾಗಲಿಲ್ಲ. ಆತ್ರೇಯಿಯಿಂದ ಇವನು ಆಗಾಗ ಶ್ರೀರಂಗಪುರದ ರಾಜ್ಯಾಡಳಿತ ವಿಷಯ ಸಂಗ್ರಹ ಮಾಡುತ್ತಿದ್ದನು.

ಗೌತಮನಿಗೂ, ಅಹಲ್ಯೆಗೂ, ಬಂದ ಭಿನ್ನಾಭಿಪ್ರಾಯವನ್ನು ತಿಳಿದಿದ್ದನು. ಅವರ ಸಂಸಾರ ಒಡೆಯಲು ಉಪಾಯವನ್ನು ಇವನು ಆತ್ರೇಯಿಗೆ ಹೇಳಿ ಕೊಟ್ಟನು. ಕೇಳುವುದೇಕೆ ಆತ್ರೇಯಿಯು, ಶ್ರೀರಂಗಪುರದ ಪ್ರಜೆಗಳಲ್ಲಿ ಗೌತಮನು ರಾಜನಲ್ಲ, ಅಹಲ್ಯೆಯೇ ಅದರ ರಾಣಿ. ಅವಳು ಹೇಳಿದಂತೆ ಎಲ್ಲರೂ ಕೇಳಬೇಕು, ಎಂದು ಅಪಪ್ರಚಾರ ಮಾಡುವುದಕ್ಕೆ ಪ್ರಾರಂಭಮಾಡಿದಳು. ಅವಳು ಹೇಳುವುದೆಲ್ಲ ಸುಳ್ಳಿನ ಕಂತೆ; ಅಸಂಬದ್ಧ ಪ್ರಲಾಪ; ಮಾನವನು ಸ್ವಾರ್ಥಿಯಾಗಿ, ತನ್ನ ಇಷ್ಟಾಪೂರ್ತಿಯನ್ನು ಎಲ್ಲಕ್ಕಿಂತ ಹೆಚ್ಚೆಂದು ಪರಿಗಣಿಸಿದರೆ, ಅಂತಹವರ ಕೆಲಸ ಎಂದಾದರೂ ನಗೆಗೀಡಾಗಲೇ ಬೇಕು. ಆತ್ರೇಯಿಯೂ ಕೂಡ ಕೊನೆಗೆ ಹಾಗೆಯೇ ಆದಳು.

ಮೊದಲು ಅವಳು ಪ್ರಜೆಗಳಲ್ಲಿ ಅಪಪ್ರಚಾರಮಾಡಿ ಗೌತಮನ ಮೇಲೆ ಅವಿಶ್ವಾಸ ಹುಟ್ಟಿಸುವ ಕಾರ್ಯದಲ್ಲಿ ತೊಡಗಿದಳು. ಸ್ತ್ರೀಯಾದವಳು ಪ್ರಚಾರ ಕಾರ್ಯಕ್ಕೆ ಹೊರಟರೆ, ಅದು ಬೇಗ ಯಶಸ್ವಿಯಾಗುವುದು. ತತ್ರಾಪಿ ಅಂತಹವಳು ಸ್ವಲ್ಪ ರೂಪವತಿಯೂ, ವಾಗ್ಮಿಯೂ, ವಿದ್ಯಾವತಿಯೂ ಆದರೆ, ಅವಳು ಹೇಳುವ ಮಾತುಗಳು ಗಂಡಸರಿಗೆ ಹಿಡಿಸುವುದು. ಕೇಳುವವರಿಗೆ ತತ್ಕಾಲದಲ್ಲಿ ಪೂರ್ವಾಪರ ಯೋಚನೆ ಕಡಿಮೆಯಾಗುವುದು. ಆತ್ರೇಯಿಯು ಚದುರೆ, ಮಾತಿನಮಲ್ಲೆ; ಯಾರ್‍ಯಾರನ್ನು ಹೇಗೆ ಹೇಗೆ ಒಲಿಸಿಕೊಳ್ಳಬೇಕೆಂಬುದನ್ನು ಅರಿತಿದ್ದಳು. ಸಮಯ ಬಂದಾಗ ಅಳುವಳು; ಚೀರುವಳು; ಬೇಡುವಳು; ಕೋಪತೋರಿಸುವಳು; ಹಲ್ಲುಕಡಿಯುವಳು; ಮುಗುಳುನಗೆಯಿಂದ, ಜನರನ್ನು ಮುಗ್ಧರನ್ನಾಗಿ ಮಾಡುವಳು; ತರುಣಿಯು ದುರ್ಮಾರ್ಗ ಪ್ರವರ್ತಕಳಾದರೆ ಅವಳು ಯಾವ ಕೆಲಸವನ್ನು ತಾನೆ ಮಾಡಲಾರಳು? ಆತ್ರೇಯಿಯ ಪ್ರಚಾರಕ್ಕೆ ಶ್ರೀರಂಗಪುರದ ಕೆಲವು ಪ್ರಜೆಗಳು ಮರುಳಾದರು.

ತನ್ನ ಕಾರ್ಯದ ಸಫಲತೆಯನ್ನು ಇಂದ್ರಸೇನನಿಗೆ ಆತ್ರೇಯಿ ತಿಳಿಸಿದಳು. ಮೊದಲು ಎಲ್ಲವೂ ಸಿದ್ಧವಾಗಿದ್ದಂತೆ ಅವನ ಸೈನ್ಯವು ಕಳ್ಳದಾರಿಯಿಂದ ಬಂದು ಶ್ರೀರಂಗಪುರದ ಒಂದು ಭಾಗದಲ್ಲಿ ನೆಲೆಸಿತು. ಸಮಯ ನೋಡಿ ಗೌತಮನನ್ನು ಗುಟ್ಟಾಗಿ ಹಿಡಿದು ಅರಮನೆಯ ಕೊಠಡಿಯೊಂದರಲ್ಲಿ ಬಂದಿಯಾಗಿ ಇಡಿಸಲಾಯಿತು. ಆತ್ರೇಯಿಯು ಗೌತಮನನ್ನು ತಾತ್ಕಾಲಿಕವಾಗಿ ಉಳಿಸಿದೆನೆಂದು ತಿಳಿಸಿದಳು. ಆವೇಳೆಗೆ ಇನ್ನುಳಿದ ಕೆಲಸವೆಂದರೆ

ಅಹಲ್ಯೆಯನ್ನು ಏನಾದರೂ ಮಾಡಿ, ಇಂದ್ರಸೇನನೊಡನೆ ಹೋಗುವಂತೆ ಮಾಡಿ ಗೌತಮನ ಮನಸ್ಸನ್ನು ತನ್ನ ಕಡೆಗೆ ತಿರುಗಿಸುವ ಏರ್ಪಾಡು ಮಾಡುವುದು.

ಆತ್ರೇಯಿಯು ಈಗಾಗಲೆ, ಅಹಲ್ಯೆಯ ಆಪ್ತಳಂತೆ ನಟಿಸಿದ್ದಳು. ಇಂದ್ರಸೇನನ ಅಟ್ಟಹಾಸ, ವೈಭವನನ್ನೆಲ್ಲಾ ಹೊಗಳಿದಳು. ಅಹಲ್ಯೆಯ ಮನಸ್ಸಿನಲ್ಲಿ ಚಂಚಲ ಹುಟ್ಟುವಂತೆ ಮಾಡಿದಳು. ಅವಳಿಗಿದ್ದುದು, ಒಂದು ಮುಖ್ಯ ಕಾರ್ಯ: ಅದೇನೆಂದರೆ, ಇಂದ್ರಸೇನನಿಗೂ, ಅಹಲ್ಯೆಗೂ ಹೇಗಾದರೂ ಮಾಡಿ ಭೇಟಿ ಮಾಡಿಸುವುದು ಹೀಗಿರುವಾಗ ಒಂದು ದಿವಸ ಅವಳು ಅಹಲ್ಯೆಯ ಹತ್ತಿರ ಬಂದು ಹೀಗೆ ಹೇಳಿದಳು.

"ಅಹಲ್ಯಾ ದೇವಿ! ನೀನು ರಾಜಾಧಿ ರಾಜನಾದ ಶ್ರೀರಂಗ ರಾಜನ ಒಬ್ಬಳೇ ಪುತ್ರಿ. ಶ್ರೀರಂಗಪುರದ ಮಹಾರಾಣಿ, ಅಷ್ಟೈಶ್ವರ್ಯ ಸಂಪನ್ನೆ ನೀನು. ರಾಜಯೋಗ್ಯ ವೈಭವವನ್ನು ಬಿಟ್ಟು ವಿರಕ್ತಿಮಾರ್ಗ ನೀನು ಏಕೆ ಹಿಡಿಯಬೇಕು? ಇವನ್ನು ದೇವರು ಕರುಣಿಸಿರುವುದು ಅನುಭವಿಸುವುದಕ್ಕಾಗಿ ಅಲ್ಲವೇ? ಗೌತಮನಂತೂ ಬಳಲಿ ಬೆಂಡಾಗಿ ಸೆರೆಮನೆ ಸೇರಿದ್ದಾನೆ. ನೀನು ಇಂದ್ರಸೇನರಾಜನನ್ನು ವರಿಸಿದ್ದರೆ ಎಷ್ಟು ಪುಣ್ಯವತಿಯಾಗುತ್ತಿದ್ದೆ! ನಿನ್ನ ಜೀವನ ಎಷ್ಟು ಸುಖಮಯವಾಗುತ್ತಿತ್ತು. ಹಾಗೆ ಮಾಡದೇ ಇದ್ದುದು ನಿನ್ನ ದೊಡ್ಡ ತಪ್ಪು. ನೀನು ಇದುವರೆವಿಗೂ ಕಣ್ಣೀರಿನಲ್ಲಿ ಕೈಯನ್ನು ತೊಳೆಯುತ್ತಿರುವುದು ಸಾಕು. ಇಂದ್ರಸೇನನು ಈಗ ಗೌತಮನನ್ನು ಸೆರೆಯಲ್ಲಿಟ್ಟಿರುವನು. ನೀನು ಇಂದ್ರಸೇನನ ಅಧೀನಳಾಗು. ಅವನು ಪ್ರಸನ್ನನಾಗಿ ಗೌತಮನನ್ನು ಸೆರೆಯಿಂದ ಬಿಡಿಸಿ, ಎಲ್ಲಿಗಾದರೂ ಕಳುಹಿಸಿಬಿಡುವನು. ಈಗಲಾದರೂ ನಾನು ಹೇಳಿದಂತೆ ಕೇಳು' ಎಂದು ಬಗೆ ಬಗೆಯಾಗಿ, ಒತ್ತಿ ಹೇಳಿ, ಅವಳನ್ನು ಅಡ್ಡದಾರಿಗೆ ಎಳೆಯಲು ಪ್ರಯತ್ನಪಟ್ಟಳು.

ಅಹಲ್ಯೆ— ಆತ್ರೇಯೀ! ನಿನಗೇನಾದರೂ ಹುಚ್ಚು ಹಿಡಿಯಿತೆ? ಇದೇಕೆ ಇಷ್ಟು ದುರ್ಮಾರ್ಗಕ್ಕಿಳಿದೆ? ಇಂತಹ ಕಾರ್ಯವನ್ನು ಪರಮಾತ್ಮನು ಎಂದಿಗೂ ಒಪ್ಪುವುದಿಲ್ಲ. ಇದಕ್ಕೆ ಪ್ರಾಯಶ್ಚಿತ್ತವೇ ಇಲ್ಲ. ಹೀಗೆ ಯೋಚಿಸುವುದೂ ಕೂಡ ಮಹಾ ಪಾಪ.

ಆತ್ರೇಯಿ— ಅಹಲ್ಯೆ! ನೀನು ಚಿಕ್ಕವಳು. ಪುಣ್ಯ ಪಾಪಗಳ ವಿಷಯ ನಿನಗೇನು ಗೊತ್ತು? ಇವೆಲ್ಲಾ ಬರೀ ಹುಚ್ಚಾಟದ ಮಾತುಗಳು,

ಗಂಡಸನು ಹೂಡಿರುವ ಮೋಸದ ಮಾಟ. ನಿನ್ನಂತಹ ರಾಣಿಯನ್ನು ಬೀದಿಯ ಭಿಕಾರಿಣಿಯಂತಿರಬೇಕೆಂದು ಮಾಡಿರುವ ಗೌತಮನ ಕಾರ್ಯ ಪಾಪವಲ್ಲವೇನು? ಇದಕ್ಕೆ ಪ್ರತೀಕಾರ ಮಾಡುವುದೇ ಪುಣ್ಯ. ಹಾಗೆ ಮಾಡು. ಆಗ ಪ್ರಜೆಗಳು ನಿನ್ನನ್ನು ಹರಸುವರು.

ಅಹಲ್ಯೆ— ಆತ್ರೇಯಿ! ನಿನ್ನ ವಾದ ವಿಚಿತ್ರವಾಗಿದೆ. ಜಗತ್ತಿಗೆ ವಿರುದ್ಧವಾದ ಮಾತುಗಳನ್ನು ಹೇಳುತ್ತಿರುವೆಯಲ್ಲ? ಗೌತಮನು ಹೇಗಿದ್ದರೂ, ಎಲ್ಲಿದ್ದರೂ, ಅವನು ನನ್ನ ಪತಿದೇವ. ನಮ್ಮಿಬ್ಬರ ಆತ್ಮ ಒಂದಾಗಿದೆ. ವಿವಾಹದ ಮಾತುಗಳ ಪವಿತ್ರ ಸೂತ್ರವನ್ನು ಕಿತ್ತು ಹಾಕೆಂದು ಹೇಳುವೆಯಲ್ಲಾ? ಇದು ಸಾಧ್ಯವೇ? ಖಂಡಿತ ಇಲ್ಲ. ಜನ್ಮ ಜನ್ಮಾಂತರಗಳಲ್ಲಿ ವಿವಾಹದ ಬಂಧನವನ್ನು ಬಿಡುವಂತಿಲ್ಲ. ಇಂದ್ರಸೇನನ ಹೆಸರನ್ನು ಜ್ಞಾಪಕಕ್ಕೆ ತಂದುಕೊಳ್ಳುವುದೇ ಮಹಾ ಪಾಪ.

ಆತ್ರೇಯಿ— ಅಹಲ್ಯೆ! ಮಕ್ಕಳಾಟದ ಮಾತುಗಳನ್ನು ನೀನು ಆಡುತ್ತಿರುವೆ. ವಿವಾಹವೆಂಬುದು ಒಂದು ಕರಾರು. ಒಂದು ಬಗೆಯ ಕಟ್ಟು. ಬೇಕಾದಾಗ ಅದನ್ನು ಕಿತ್ತು ಹಾಕಬಹುದು. ಇದರಲ್ಲಿ ಅಂತಹ ಮಹತ್ವವೇನು ಇಲ್ಲ. ಇಷ್ಟಕ್ಕೂ ನಾನೇಕೆ ನಿನ್ನನ್ನು ನಿರ್ಬಂಧಪಡಿಸಬೇಕು. ನಿನ್ನ ಬಾಲ್ಯ ಸ್ನೇಹಿತೆಯಾದುದರಿಂದ, ನಿನ್ನ ಮುಂದಿನ ದಿನ ಭವ್ಯವಾಗಲಿ ಎಂಬ ಉದ್ದೇಶದಿಂದ ಇಷ್ಟನ್ನು ಹೇಳಿದೆ. ನೀನು ಹೀಗೆ ಮಾಡಿದರೆ, ಗೌತಮನು ಬಿಡುಗಡೆ ಹೊಂದಿ. ಎಚ್ಚರದಿಂದರಬಹುದು ಎಂದು ಹೇಳಿದೆ. ಇದರಮೇಲೆ ನಿನ್ನ ಇಷ್ಟಬಂದಂತೆ ಮಾಡು. ಎಂದಳು.

ಹೀಗೆ ಆತ್ರೇಯಿಯು ಅಹಲ್ಯೆಯ ಕೈಹಿಡಿದು ಪಾಪಕೂಪದಲ್ಲಿ ಬೀಳುವಂತೆ ಮಾಡಲು ಸಾಹಸ ಮಾಡಿದಳು. ಸಾಧ್ಯವಾಗಲಿಲ್ಲ.

ಔದಾರ್ಯ

ಆತ್ರೇಯಿಯು ತನ್ನ ಪ್ರಯತ್ನ ಯಶಸ್ವಿಯಾದ ತಕ್ಷಣ, ಗೌತಮನಿಗೆ ಅದನ್ನು ತಿಳಿಸಿ, ತಾನು ಅವನೂ ಪುನಃ ಕಾಡು ಸೇರಿ ಆಶ್ರಮವಾಸಿಯಾಗಬೇ

ಕೆಂಬುದು ಅವಳ ಇಷ್ಟವಿತ್ತು. ಇದಕ್ಕಾಗಿ ಇಂದ್ರಸೇನನು ಗೌತಮನಂತೆ ವೇಷ ಧರಿಸಿಕೊಂಡು, ಅಹಲ್ಯೆಯ ಹತ್ತಿರ ಹೋಗಿ ಪ್ರಣಯ ಭಿಕ್ಷೆ ಬೇಡುವಂತಹ ಒಂದು ಸನ್ನಿವೇಶ ಕಲ್ಪಿಸಬೇಕೆಂದು ಸನ್ನಾಹ ಮಾಡುತ್ತಿದ್ದಳು. ಇದು ಸಾಧ್ಯವಾಗದಿದ್ದರೆ, ಅಹಲ್ಯೆಯು ಗೌತಮನನ್ನು ಸೆರೆಯಿಂದ ಬಿಡಿಸುವ ನೆಪದಲ್ಲಿಯಾದರೂ, ಇಂದ್ರಸೇನನನ್ನು ಭೇಟಿಮಾಡಿ, ಅವನಲ್ಲಿ ಹೋಗಿ ಹೇಳಿಕೊಳ್ಳುವ ಒಂದು ಪ್ರಸಂಗ ಏರ್ಪಡಿಸಬೇಕೆಂದು ಯೋಚಿಸಿದಳು.

ಗೌತಮನನ್ನು ಅರಮನೆ ಕೊಠಡಿಯೊಂದರಲ್ಲಿ ಬಂದಿಯನ್ನಾಗಿಟ್ಟದ್ದ ವಿಷಯ ಅಹಲ್ಯೆಗೆ ಗೊತ್ತಿತ್ತು. ತಾನು ಶ್ರೀರಂಗಪುರದ ರಾಣಿ ಎನಿಸಿದ್ದರೂ, ಅಹಲ್ಯೆಗೆ ಯಾವ ಸ್ವಾತಂತ್ರ್ಯವೂ ಇರಲಿಲ್ಲ. ಗೌತಮನನ್ನು ಹೋಗಿ ನೋಡಲು ನಿರ್ಬಂಧ, ಯಾರೊಡನೆ ಮಾತನಾಡವುದಕ್ಕೂ ಕಾವಲು. ಎಲ್ಲಿಗೂ ತಾನು ಸ್ವತಂತ್ರವಾಗಿ ಹೋಗುವಂತಿರಲಿಲ್ಲ. ಎಲ್ಲೆಲ್ಲಿಯೂ ಪಿತೂರಿ, ಜಗತ್ತಿನ ರಾಜತ್ವವನ್ನೆ ನಿರ್ಮೂಲ ಮಾಡಬೇಕೆಂದು ಹೊರಟಿದ್ದ ಗೌತಮನು, ಮಹಾ ಅಪರಾಧಿ ಎಂಬುದು ಇಂದ್ರಸೇನನ ಮತ. ಆದರೆ ಅವನನ್ನು ವಿಚಾರಣೆಗೆ ಗುರಿಪಡಿಸಲು ಅವನಿಗಿಷ್ಟವಿರಲಿಲ್ಲ.

ಯಾವ ಕ್ಷಣ ಎಂತಹ ಆಪತ್ತು ಬರುವುದೋ ಎಂದು ಅಹಲ್ಯೆ ಕಾತುರಳಾಗಿದ್ದಳು. ಅವಳಿಗೆ ಅರಮನೆಯಲ್ಲಿ ಆಪ್ತರೆಂಬುವವರೇ ಇರಲಿಲ್ಲ. ಆತ್ರೇಯಿಯಲ್ಲಿ ಅವಳಿಗೆ ಅಸಹ್ಯವೂ ಅಪನಂಬಿಕೆಯೂ ಹುಟ್ಟಿತ್ತು. 'ಅಯ್ಯೋ, ಗೌತಮನಿಲ್ಲದ ಈ ಹಾಳು ಜೀವನವೇಕೆ? ಅವನೊಡನೆ ನಾನು ಕಾಡಾಡ ಬಾರದಾಗಿತ್ತು. ನನಗೇಕೆ ಇಂತಹ ದುರ್ಬುದ್ಧಿ ಹುಟ್ಟಿತು. ಆಶ್ರಮದವಾಸ ಅರಮನೆಯವಾಸಕ್ಕಿಂತ ಸಾವಿರಪಾಲು ಮೇಲಾಗಿತ್ತು. ಗೌತಮನಂತಹ ಪುಣ್ಯಪುರುಷ ಜಗತ್ತಿನಲ್ಲಿ ಇನ್ಯಾರಿದ್ದಾರೆ? ಅವನ ಪ್ರಭಾವ ತಿಳಿಯಲಾರದೆ ಕ್ರೋಧ ಮೋಹಕ್ಕೆ ವಶಳಾಗಿ ಕೆಟ್ಟೆನಲ್ಲಾ. ಗೌತಮನ ಬಿಡುಗಡೆಗೆ ಏನು ದಾರಿ? ಯಾರನ್ನು ಬೇಡಲಿ? ಯಾರುತಾನೆ ನನಗೆ ಸಹಾಯಮಾಡುವರು?' ಎಂದು ಹಲವು ವಿಧವಾಗಿ ಹೇಳಿಕೊಂಡು ಗೋಳಿಡುತ್ತಿದ್ದಳು.

ಹೀಗಿರುವಾಗ ಒಂದು ದಿನ ರಾತ್ರಿ ಇಂದ್ರಸೇನನು ಗೌತಮನಂತೆ ವೇಷ ಧರಿಸಿಕೊಂಡು ಅಹಲ್ಯೆ ಇದ್ದ ಅರಮನೆಯ ಕೊಠಡಿಗೆ ಬಂದನು. ಗೌತಮನು ಬಂದುದನ್ನು ಕಂಡು ಅಹಲ್ಯೆಗೆ ಅಪರಿಮಿತ ಸಂತೋಷವಾ

ಯಿತು. ಬಹು ದಿನಗಳಿಂದ ಕಾಣಬೇಕೆಂದು ಹಂಬಲ ಪಡುತ್ತಿದ್ದ ಅವಕಾಶವು ತಾನಾಗಿಯೇ ಪೂರ್ಣವಾಗುವ ಸಮಯ ಕರುಣಿಸಿದ್ದಕ್ಕಾಗಿ ದೇವರನ್ನು ಮನಸಾರ ವಂದಿಸಿದಳು.

ಅಂತಹ ಗಾಢಾಂಧಕಾರ ರಾತ್ರಿಯಲ್ಲಿ, ಆತ್ರೇಯಿಯು, ಒಂದು ಸಣ್ಣ ದೀಪವನ್ನು ಹಿಡಿದುಕೊಂಡು ಗೌತಮನಿದ್ದ ಕೋಣೆಗೆ ಬಂದಳು. ಬಹು ಬಡವಾಗಿದ್ದ ಶರೀರ, ಗುಳಿಗಳಿದ್ದ ಕಣ್ಣು, ಹಳ್ಳಕ್ಕೆ ಇಳಿದು ಹೋಗಿದ್ದ ಹೊಟ್ಟೆ; ಯೋಚನಾಪರವಾಗಿ ಕುಳಿತಿದ್ದ ಗೌತಮನನ್ನು ನೋಡಿದಳು. ಆ ಅವೇಳೆಯಲ್ಲಿ ಏತಕ್ಕಾಗಿ ಆತ್ರೇಯಿ ಬಂದಳೆಂಬುದನ್ನು ತಿಳಿಯುವುದಕ್ಕೆ ಗೌತಮನು ಕುತೂಹಲಿಯಾಗಿದ್ದನು. ಅವನು ಕೇಳುವುದಕ್ಕೆ ಮುಂಚೆಯೇ, ಆತ್ರೇಯಿಯು ತನ್ನ ಕಪಟ ಸಂಕಟವನ್ನು ವ್ಯಕ್ತಪಡಿಸಿ, ಅಹಲ್ಯೆಯು ಇಂದ್ರಸೇನನ ವಶವಾಗಿರುವ ಅಂಶವನ್ನು ಉತ್ಪ್ರೇಕ್ಷೆಮಾಡಿ ತಿಳಿಸಿದಳು. 'ಹುಸಿ ಹೇಳಿದರೂ ಹಸನಾಗಿ ಹೇಳು' ಎಂಬಂತೆ ಅಹಲ್ಯೆಯ ವಿಚಾರವಾಗಿ ಇಲ್ಲದ ಸಲ್ಲದ ದೋಷಾರೋಪಣೆಯನ್ನು ಅವನ ಮುಂದಿಟ್ಟು "ಗೌತಮರಾಜಾ" ಇದುವರೆವಿಗೂ ಕಷ್ಟಪಟ್ಟಿದ್ದು ಸಾಲದೇ? ಇನ್ನೆಷ್ಟುಕಾಲ ಈ ಬಂಧನದಲ್ಲಿರಬೇಕು. ಅಹಲ್ಯೆಯು ನಿನಗೆ ಅನುಕೂಲಳಾದ ಸತಿ ಅಲ್ಲವೆಂದು ನಾನು ಹಿಂದೆಯೇ ಎಚ್ಚರಿಸಿರಲಿಲ್ಲವೇ? ಇದಕ್ಕೆ ಇಂದು ನಿದರ್ಶನ ಕೊಡುವೆನು. ಇನ್ನಾದರೂ ಅಹಲ್ಯೆಯನ್ನೂ ಅರಮನೆಯನ್ನೂ ಬಿಡುವ ಯೋಚನೆಮಾಡಿ. ದಂಡಕಾರಣ್ಯದ ಯಾವುದಾದರೊಂದು ಆಶ್ರಮದಲ್ಲಿರೋಣ." ಎಂದಳು.

ಆತ್ರೇಯಿಯ ಕಪಟವನ್ನು ಗೌತಮನು ಈ ಮೊದಲೇ ಅರಿತಿದ್ದನು. ಇಂದಿನ ಕಷ್ಟ ಪರಿಸ್ಥಿತಿಗೆಲ್ಲಾ ಅವಳೇ ಕಾರಣ ಎಂಬುದು ಅವನಿಗೆ ಮನವರಿಕೆಯಾಗಿತ್ತು. ಆದರೂ, ಅವಳನ್ನು ಮೂದಲಿಸಿ, ಮಾತನಾಡಲು ಅವನಿಚ್ಛಿಸಲಿಲ್ಲ. "ಆತ್ರೇಯಿ! ಈ ನಿನ್ನ ಕಪಟ ಯಾರಿಗೂ ತಿಳಿಯದೆಂದು ಭಾವಿಸಿರುವೆಯಾ? ಈ ದುಷ್ಟಕೆಲಸಗಳು ಮಾನವನಿಗೆ ತಿಳಿಯದಂತೆ ನೀನು ಮಾಡಿದರೂ, ದೇವರ ಕಣ್ಣು ಮುಚ್ಚಲು ನಿನಗೆ ಸಾಧ್ಯವೇ? ಖಂಡಿತ ಸಾಧ್ಯವಿಲ್ಲ. ನಿನ್ನ ಪ್ರೇಮಕ್ಕೆ ಪ್ರತಿಪ್ರೇಮ ಸಿಕ್ಕುವುದಿಲ್ಲವೆಂದು ತಿಳಿದೂ ನೀನು, ಈ ವಿಶ್ವಾಸ ಘಾತುಕ ಕಾರ್ಯದಲ್ಲಿ ತೊಡಗಿದ್ದೀಯಲ್ಲಾ? ದೇವಗೆ ಮೋಸ ಮಾಡಲು ನಿನಗೆ ಸಾಧ್ಯವಿಲ್ಲ. ಅಹಲ್ಯೆಯು ಎಂದೂ ಪಾಪ

ಕಾರ್ಯಕ್ಕೆ ಕೈಹಚ್ಚುವವಳಲ್ಲ. ಹಾಗೇನಾದರೂ ಅವಳು ಅದರಲ್ಲಿ ಭಾಗಿಯಾಗ ಬೇಕಾದರೆ, ಅದರಲ್ಲಿ ನಿನ್ನ ಕೃತ್ರಿಮವೂ ಇದ್ದೇ ಇದೆ. ನನ್ನ ಎದುರಿನಲ್ಲಿ ನೀನು ನಿಲ್ಲಬೇಡ ಹೊರಡು" ಎಂದು ಹೇಳಿ ಗೌತಮನು ಕೋಪಿಸಿ ಕೊಂಡನು.

"ಮುನಿಯೇ! ನಿನಗೆ ಇನ್ನೂ ನನ್ನ ಮಾತಿನಲ್ಲಿ ನಂಬಿಕೆ ಇಲ್ಲದಿದ್ದರೆ ನನ್ನೊಡನೆ ಬಾ! ಎಲ್ಲವೂ ಪ್ರತ್ಯಕ್ಷವಾಗಿ ಕಾಣುವುದು. ಇನ್ನೊಬ್ಬರ ತಪ್ಪಿಗೆ ನನ್ನನ್ನು ನಿಂದಿಸಬೇಡ' ಎಂದು ಹೇಳಿ ತನ್ನ ಜೊತೆಯಲ್ಲಿ ಬರುವಂತೆ ಗೌತಮನನ್ನು ನಿರ್ಬಂಧಪಡಿಸಿದಳು.

ಅಹಲ್ಯೆಯನ್ನು ಕಂಡು ಎರಡು ಮಾತು ಹೇಳುವ ಅವಕಾಶ ದೊರೆ ಯುವುದೆಂದು, ಆತ್ರೇಯಿಯೊಡನೆ ಹೋಗಲು ಗೌತಮನು ಸಮ್ಮತಿಸಿದನು. ಇಬ್ಬರೂ ನೇರವಾಗಿ ಅಹಲ್ಯೆ ಇದ್ದ ಕೊಠಡಿಯ ಬಳಿಗೆ ಬಂದರು. ಇಬ್ಬರು ಮಾತನಾಡುವ ಶಬ್ದ ಕೇಳಿಸಿತು. ಒಬ್ಬರು ಕೇಳುವುದು, ಇನ್ನೊಬ್ಬರು ಉತ್ತರ ಹೇಳುವಂತಿತ್ತು. ಅಹಲ್ಯೆಯ ಧ್ವನಿ ಕೇಳಿಸುತ್ತಿತ್ತು. ಇನ್ನೊಬ್ಬರ ಧ್ವನಿ ಸರಿಯಾಗಿ ಕೇಳಿಸುತ್ತಿರಲಿಲ್ಲ. ಅವನೇ ಇಂದ್ರಸೇನನೆಂದು ಆತ್ರೇಯಿ ಹೇಳಿದಳು. ಕೊಠಡಿಯ ಬಾಗಿಲು ತೆರೆಯುವಂತೆ ಆತ್ರೇಯಿಯು ಅಹಲ್ಯೆಯನ್ನು ಕೇಳಿದಳು. ಬಾಗಿಲು ತೆರೆದು ನೋಡಿದಾಗ ಹೊರಗಡೆ ಗೌತಮನಿದ್ದುದನ್ನು ಕಂಡು ಅವಳಿಗೆ ಅತ್ಯಾಶ್ಚರ್ಯವಾಯಿತು. ಹಾಗಾದರೆ ಇಷ್ಟು ಹೊತ್ತು ಒಳಗಿದ್ದವರಾರೆಂಬುದನ್ನು ತಿಳಿಯಬೇಕಾಗಿತ್ತು. ಆತ್ರೇ ಯಿಯು ಗೌತಮನೊಡನಿದ್ದುದನ್ನು ಕಂಡು, ಅಹಲ್ಯೆಗೆ ಘಾಬರಿಯಾ ಯಿತು. ಆ ಕಠಿಣ ಪ್ರಸಂಗಕ್ಕೆ ಅವಳೇ ಕಾರಣಳೆಂಬುದು ಅಹಲ್ಯೆಗೆ ಕೂಡಲೇ ಹೊಳೆಯಿತು. ಗೌತಮನಲ್ಲಿ ಅನುಮಾನ ಹುಟ್ಟಿಸುವುದಕ್ಕಾಗಿ ಹೀಗೆಲ್ಲಾ ಅವಳೇ ಮಾಡಿರಬೇಕೆಂದು ನಿಶ್ಚಯಮಾಡಿದಳು. ಆದರೂ ಅನುಮಾನ ಪರಿಚ್ಛೇದವಾಗಬೇಕಲ್ಲವೇ? ಅಹಲ್ಯೆಯು ಕೂಡಲೆ ಗೌತಮ ನನ್ನು ಕೊಠಡಿಯೊಳಕ್ಕೆ ಬರುವಂತೆ ಹೇಳಿದಳು. ಮೂವರೂ ಒಳಗೆ ಹೋಗಿ ನಡುಗುತ್ತ ಮೂಲೆಯಲ್ಲಿ ನಿಂತಿದ್ದ ಇಂದ್ರಸೇನ ಮಹಾರಾಜನನ್ನು ಕಂಡರು. ಅವನು ವೇಷ ಮರೆಸಿದ್ದುದೂ ಗೋಚರವಾಯಿತು. ಆ ಕಪಟ ವೇಷಿಯು ಅದಕ್ಕಾಗಿಯೇ ತನ್ನೊಡನೆ ಮಾತನಾಡಲು ಹಿಂಜರಿಯುತ್ತಿದ್ದ

ನೇಬ ಅಂಶವನ್ನು ಅಹಲ್ಯೆ ಹೇಳಿದಳು. ತನ್ನಲ್ಲಿ ಏನಾದರೂ ಅಪರಾಧವಿದ್ದ ಭಾಗದಲ್ಲಿ ಕ್ಷಮಿಸಬೇಕೆಂದು ಗೌತಮನನ್ನು ಬೇಡಿದಳು.

ಇಂದ್ರಸೇನನು ಅಪರಾಧಿಯಂತೆ ನಡುಗುತ್ತ ಮಾತನಾಡಲು ಕೂಡ ಸಾಧ್ಯವಿಲ್ಲದ ನೀತಿಗ್ದನು. ಆತ್ರೇಯಿಯು ಅವನ ಮೇಲೆ ದೋಷ ದೋಷಣೆಮಾಡಿದಳು. ಗೌತಮನ ಶಾಂತಿ ಅದ್ವಿತೀಯವಾಗಿತ್ತು. ಇಂದ್ರಸೇನನ್ನು ನೋಡಿ "ನೀನು ಕಪಟ; ನಿರಪರಾಧಿಯೂ, ಪತಿವ್ರತೆಯೂ ಆದ ಅಹಲ್ಯೆಯನ್ನು ದೋಷಿಯನ್ನಾಗಿ ಮಾಡಬೇಕೆಂಬ ದುರಭಿಪ್ರಾಯದಿಂದ ನೀನು ವೇಷ ಮರೆಸಿಕೊಂಡು ಮೋಸಪಡಿಸಿದುದಕ್ಕೆ ನೀನು ಶಿಕ್ಷೆ ಅನುಭವಿಸಲೇಬೇಕು. ನೀನು ಸಹಸ್ರಾಕ್ಷನಾಗು. ವ್ಯಭಿಚಾರಕ್ಕೆ ಇಷ್ಟಪಟ್ಟಿಯಾದುದರಿಂದ ನಿನ್ನ ವೃಷಣ ಬಿದ್ದುಹೋಗಲಿ'' ಎಂದನು. ಕೂಡಲೆ ಇಂದ್ರಸೇನನು ಆ ಸ್ಥಳ ಬಿಟ್ಟು ಓಡಿದನು.

ಇದನ್ನು ಕೇಳಿ ಅಹಲ್ಯೆಗೆ ನಡುಕಹತ್ತಿತು. ತನಗಿನ್ನೆಂಥದ ಕಠಿಣ ಶಿಕ್ಷೆ ಕಾದಿರುವುದೋ ಎಂದು ಭಯದಿಂದ ಗೌತಮನ ಕಡೆ ನೋಡುತ್ತಿದ್ದಳು. 'ದೇವಾ! ನನ್ನ ಅಕ್ಷಮ್ಯ ಅಪರಾಧವನ್ನು ಮನ್ನಿಸು. ನಾನು ನಿರ್ದೋಷಿ; ಪ್ರಸನ್ನನಾಗು' ಎಂದು ಅವನ ಪಾದದಮೇಲೆ ಬಿದ್ದಳು.

'ಅಹಲ್ಯೆ! ತಪ್ಪು ನಿನ್ನದಲ್ಲ. ನೀನು ಅಬಲೆ; ಸ್ವಭಾವವಾಗಿ ವಿಲಾಸಪ್ರಿಯೆ. ಮೇಲಾಗಿ ರಾಜಕುಮಾರಿಯಾಗಿ ವೈಭವದಲ್ಲಿ ಬೆಳೆದವಳು. ಈ ವಾತಾವರಣಕ್ಕೆ ಸಹಜವಾದ ಗುಣ ನಿನ್ನಲ್ಲಿತ್ತು. ಕರ್ತವ್ಯ ಪರಿಪಾಲನಾ ದೃಷ್ಟಿಯಿಂದ ನಿನ್ನನ್ನು ನಾನು ಮರೆತೆ. ನಿನ್ನ ಇಚ್ಛೆಯಂತೆ ನಾನು ನಡೆಯಲಿಲ್ಲ. ನನ್ನ ಹೃದಯದಂತೆ ನಿನ್ನ ಹೃದಯವೂ ನಿರ್ಮಲವಾದುದೆಂದು ಅರಿತೆ. ಈ ವಿಲಾಸಮಯ ಜಗತ್ತನ್ನು ತೃಣಸಮಾನವೆಂದು ಭಾವಿಸಿದೆ. ನನಗೆ ಇಂದ್ರಿಯ ನಿಗ್ರಹ ಸುಲಭವಾಗಿತ್ತು. ನಿನ್ನಲ್ಲಿಯೂ ಹಾಗೆಯೇ ಇತಬಹುದೆಂದು ನಾನು ಬಗೆದೆ. ಇದೇ ನನ್ನ ದೊಡ್ಡ ತಪ್ಪು. ಆದರೂ ನಾವು ಪತಿಪತ್ನಿ ಭಾವದಿಂದ ಐಕ್ಯವಾಗಿದ್ದೇವೆ. ಇದು ಇಂದು ಬಿಟ್ಟುಹೋಗುವ ಬಾಂಧವ್ಯವಲ್ಲ. ತಪ್ಪು ಮಾಡದ ಮಾನವನಿಲ್ಲ. ಪರಮಾತ್ಮನು ನಿನ್ನ ತಪ್ಪನ್ನು ಮನ್ನಿಸುವನು.' ಎಂದು ಗೌತಮನು ಅಹಲ್ಯೆಯನ್ನು ಸಮಾಧಾನಪಡಿಸಿದನು.

ಅಪಲ್ಯೆ ಈ ಮಾತುಗಳಿಂದ ಸಮಾಧಾನ ಹೊಂದಲಿಲ್ಲ. 'ದೇವಾ! ಸ್ತ್ರೀ ಧರ್ಮಕ್ಕೆ ವಿರುದ್ಧವಾಗಿ, ಪರಪುರುಷನೊಡನೆ ಸಂಭಾಷಣೆ ಮಾಡಿದುದು ಅನುಚಿತವಲ್ಲವೇ? ಅದೂ ಅನುಮಾನ ಬರುವ ಸನ್ನಿವೇಶದಲ್ಲಿದ್ದುದು ಮಹಾಪರಾಧನಲ್ಲವೇ? ಇದನ್ನು ಪರಮಾತ್ಮನು ಹೇಗೆ ತಾನೆ ಕ್ಷಮಿಸುವನು. ಈ ಪಾಪ ಪರಿಹಾರಕ್ಕೆ ಪ್ರಾಯಶ್ಚಿತ್ತವನ್ನು ನೀನೇ ವಿಧಿಸು. ಸಂತೋಷದಿಂದ ಅದನ್ನು ಅನುಭವಿಸಿ, ಅನಂತರ ಸಿನ್ನವಳಾಗಿ ನಿನ್ನ ಆಜ್ಞೆಯಂತೆ ವಿಧೇಯಳಾಗಿರುತ್ತೇನೆ. ನಿಮ್ಮ ಪಾದಸೇವೆಯಲ್ಲಿ ನಿರತಳಾಗಿರುತ್ತೇನೆ.' ಎಂದಳು.

'ಅಪಲ್ಯೆ! ನಿನಗೆ ಈ ಪಶ್ಚಾತ್ತಾಪ ಬುದ್ಧಿ ಹುಟ್ಟಿರುವುದೇ ದೊಡ್ಡ ಪ್ರಾಯಶ್ಚಿತ್ತ. ಇದೇ ಎಲ್ಲ ಬಗೆಯ ಶುದ್ಧಿಗೂ ಮೂಲ. ಇದರಿಂದ ಎಲ್ಲ ಪಾಪವೂ ನಿವಾರಣೆಯಾಗುವುದು. ಇದರಿಂದಲೇ ಮಾನವನು ಪವಿತ್ರನಾಗುವನು. ಭಗವಂತನು, ತನ್ನ ಸಂಕೀರ್ತನ ಮಾಡಲೆಂದು ಮಾನವನಿಗೆ ವಾಕ್‌ಶಕ್ತಿ ಕೊಟ್ಟಿದ್ದಾನೆ. ಪರೋಪಕಾರ ಮಾಡಲೆಂದು ಕೈಗಳನ್ನಿತ್ತಿದ್ದಾನೆ. ಅವನ ಮಹಿಮಾದರ್ಶಗಳನ್ನು ಕೇಳಿ ಕೃತಾರ್ಥನಾಗಲೆಂದು ಕಿವಿ ಕೊಟ್ಟಿದ್ದಾನೆ. ಅರ್ಚಾವತಾರ ರೂಪಿಯಾದ ತನ್ನನ್ನು ನೋಡಿ, ಪೂಜೆ ಮಾಡಿ ಆನಂದ ಪಡೆಯಲೆಂದು ಕಣ್ಣು ದಯಪಾಲಿಸಿದ್ದಾನೆ. ಈಗ ನಿನಗೆ ಪಶ್ಚಾತ್ತಾಪ ಬುದ್ಧಿ ಹುಟ್ಟಿರುವುದಕ್ಕೆ ಅವನ ಕೃಪೆಯೇ ಕಾರಣ. ನಾವಿಬ್ಬರೂ ಈಗ ಪಾಪಾತ್ಮರಾಗಿದ್ದೇವೆ. ಇಂದ್ರಸೇನನಿಗೆ ಕೊಟ್ಟ ಶಾಪದಿಂದ ನನ್ನ ತಪಃಫಲ ವ್ಯರ್ಥವಾಯಿತು. ನಾನು ಪುನಃ ತಪಸ್ಸು ಮಾಡಬೇಕಲ್ಲವೇ! ನೀನು ನಿನ್ನ ದೋಷವನ್ನು ನೀಗಿದಲ್ಲದೆ ಸಮಾಧಾನ ಹೊಂದುವಂತಿಲ್ಲ. ಆದುದರಿಂದ ಇದಕ್ಕೊಂದು ಉಪಾಯ ಮಾಡಿದ್ದೇನೆ. ನೀನು, ನಮ್ಮ ಆಶ್ರಮದಲ್ಲಿಯೇ ಇರು. ಆದರೆ ನಾನು ಪುನಃ ಇಲ್ಲಿಗೆ ಬರುವವರೆಗೂ ನೀನು ಇನ್ನಾರ ಕಣ್ಣಿಗೂ ಬೀಳಬಾರದೆಂದು ಅನುಗ್ರಹಿಸುವೆನು. ಕಾವೇರಿ ತೀರದಲ್ಲಿ ಚಂದ್ರಾರಣ್ಯಕ್ಷೇತ್ರದಲ್ಲಿ. ಪಶ್ಚಿಮ ರಂಗನಾಥಸ್ವಾಮಿಯನ್ನು ಧ್ಯಾನ ಮಾಡುತ್ತಾ, ಆಶ್ರಮದಲ್ಲಿ ದೊರೆಯುವ ಕಂದ ಮೂಲ ಫಲಗಳನ್ನು ತಿಂದು, ಧ್ಯಾನನಲ್ಲಿರು. ನಾನು, ರಾಜ್ಯಾಡಳಿತಕ್ಕೆ ಸರಿಯಾದ ರಾಷ್ಟ್ರಪ್ರೇಮಿಗಳನ್ನು ನೇಮಿಸಿ, ಕಮಲಗಿರಿಗೆ ಹೋಗಿ ಕೆಲವು ಕಾಲ ತಪಸ್ಸು ಮಾಡಿ ಬರುವೆನು' ಎಂದು ಹೇಳಿದನು.

'ಗೌತಮದೇವಾ! ತಮ್ಮ ದರ್ಶನ ಲಾಭವಾಗುವುದೆಂದು? ಎಷ್ಟು ಕಾಲ ನಾನು ಈ ಅಜ್ಞಾತವಾಸದಲ್ಲಿರಬೇಕು? ತಮ್ಮನ್ನಗಲಿರುವುದು ಮಹಾ ಕಷ್ಟವಾಗಿದೆಯಲ್ಲ?' ಎಂದು ಬೇಡಿದಳು.

'ಅಹಲ್ಯೆ! ಕಾತುರಗೊಳ್ಳಬೇಡ. ಪರಮಾತ್ಮನು ಅಯೋಧ್ಯೆಯ ಅರಸನಾದ ದಶರಥ ಮಹಾರಾಜನ ಪುತ್ರನಾಗಿ ಜನಿಸಿದ್ದಾನೆ. ಇನ್ನು ಸ್ವಲ್ಪ ಕಾಲಕ್ಕೆ ರಾಕ್ಷಸರ ವಧೆಕ್ಕಾಗಿ ಈ ಮಾರ್ಗವಾಗಿ ಬರುವನು. ಅವನ ದರ್ಶನ ಭಾಗ್ಯ ಮೊದಲು ನಿನಗೆ ದೊರೆಯುವುದು. ಈ ಆಶ್ರಮಕ್ಕೆ ಅವನು ಕಾಲಿಟ್ಟ ಕೂಡಲೆ ನಿನಗೆ ಮುನ್ನಿನ ರೂಪು ಬರುವುದು. ಅವನ ದರ್ಶನ ಮಾತ್ರದಿಂದ ನಿನ್ನ ಸಮಸ್ತ ದೋಷ ಪರಿಹಾರವಾಗುವುದು. ನೀನು ಅವನನ್ನು ಉಪಚರಿಸುವುದರೊಳಗಾಗಿ ನಾನು ಅಲ್ಲಿಗೇ ಬರುವೆನು. ಅವನ ಆಶೀರ್ವಾದ ಪಡೆದು ಪುಣ್ಯಾಶ್ರಮದಲ್ಲಿಯೇ ಇದ್ದು ಕಾಲ ಕಳೆಯೋಣ' ಎಂದು ಅಹಲ್ಯೆಗೆ ಹೇಳಿ ಸಮಾಧಾನ ಪಡಿಸಿ ಅಲ್ಲಿಂದ ಹೊರಟುಬಿಟ್ಟನು.

ವಿವೇಚನೆ

ಗೌತಮನು ಕಮಲಗಿರಿ ಪ್ರಾಂತಕ್ಕೆ ಹೋಗುವುದಕ್ಕೆ ಮುಂಚೆ, ಮುಖ್ಯ ರಾಜ್ಯಾಧಿಕಾರಿಗಳನ್ನು ಕರೆಯಿಸಿ, ಪ್ರಜಾಧಿಪತ್ಯ ರೀತಿಯಲ್ಲಿ ಆಡಳಿತ ನಡೆಸಬೇಕೆಂದು ತಿಳಿಸಿದನು. ನ್ಯಾಯ. ನೀತಿಯ ವಿಷಯವಾಗಿ ಹಲವು ನಿಯಮಗಳನ್ನು ಬರೆದು, ಸರ್ವಕಾಲಕ್ಕೂ ಅದು ಅನ್ವಯವಾಗುವಂತೆ ರಚಿಸಿ, ಅಧಿಕಾರಿಗಳ ವಶಕ್ಕೆ ಕೊಟ್ಟನು. ಆದರಂತೆ ಆಡಳಿತ ನಡೆಸಿಕೊಂಡು, ಬರುತ್ತಾ, ಎಲ್ಲರನ್ನೂ ಸಮಾನ ದೃಷ್ಟಿಯಲ್ಲಿ ನೋಡುತ್ತಾ ಬರಬೇಕೆಂದು ಬುದ್ಧಿವಾದ ಇತ್ತು ತಪಸ್ಸಿಗಾಗಿ ಹೊರಟುಹೋದನು. ಶಾಶ್ವತವಾದ, ಅಭಿವೃದ್ಧಿ ಕಾರ್ಯಗಳು ಆಚರಣೆಯಲ್ಲಿ ಬಂದಿದ್ದರಿಂದ, ಗೌತಮನು ಹೊರಟು ಹೋದಮೇಲೆ ಕೂಡ, ಆಡಳಿತಕಾರ್ಯಗಳೆಲ್ಲಾ ಸುವ್ಯವಸ್ಥಿತವಾಗಿ ನಡೆದುಕೊಂಡು ಹೋಗುತ್ತಿತ್ತು.

ಕೆಲವು ಕಾಲದಮೇಲೆ ಶ್ರೀರಾಮನು ಲಂಕೆಗೆ ಹೋಗಲು ದಂಡಕಾರಣ್ಯದ ಮೂಲಕ ಬರುತ್ತಿರುವಾಗ ಚಂದ್ರಾರಣ್ಯಕ್ಕೆ ಬಂದನು. ಕಾವೇರಿಯ ತೀರ. ಬಹು ಅಂದವಾದ ಉದ್ಯಾನವನ, ಸುತ್ತಲೂ ಫಲಭರಿತವೃಕ್ಷ. ಅಂತಹ ಆನಂದಮಯ ಸನ್ನಿವೇಶವನ್ನು ಕಂಡು ಇದು ಯಾರೋ ಮಹರ್ಷಿಗಳ ಆಶ್ರಮವಿರಬೇಕು ಎಂದು ಯೋಚಿಸಿ, ಪಕ್ಕದಲ್ಲಿದ್ದ ಸುತೀಕ್ಷ್ಣ ಮಹಾಮುನಿಗಳನ್ನು ಕೇಳಿದನು.

‘ದೇವಾ! ಸಕಾಲದಲ್ಲಿ ಜ್ಞಾಪಿಸಿದೆ. ಇಲ್ಲಿ ಗೌತಮ ಮಹಾ ಮುನಿ ಇದ್ದನು. ಅದಕ್ಕೆ ಹಿಂದೆ ಅಗಸ್ತ್ಯ ಮಹಾ ಋಷಿಯ ಆಶ್ರಮವಾಗಿತ್ತು ಇದು. ಇಂದ್ರಸೇನನ ಮೋಸಕ್ಕೆ ಒಳಗಾಗಿ ಗೌತಮ ಪತ್ನಿಯಾದ ಅಹಲ್ಯಾದೇವಿಗೆ ತಾನು ಕುಲಟಿಕೆಯಾದಳೆಂಬ ಭಾವನೆ ಬಂತು, ಆಗ ಗೌತಮನು ಅಹಲ್ಯೆಯು ನೀನು ಇಲ್ಲಿಗೆ ಬರುವವರೆಗೂ, ಮಾನವರ ಕಣ್ಣಿಗೆ ಗೋಚರವಾಗದಂತೆ, ಅಜ್ಞಾತವಾಸದಲ್ಲಿರಬೇಕೆಂದು ಅಪ್ಪಣೆ ಮಾಡಿದನು. ತಾನೂ ಇಲ್ಲಿರುವವರೆವಿಗೂ ಹಿಮಾಲಗಿರಿಗೆ ಹೋಗಿ ತಪಸ್ಸು ಮಾಡುತ್ತಿದ್ದು ಬರುವೆನೆಂದು ಹೇಳಿ ಕೆಲವು ವರ್ಷವಾಯಿತು. ನಿನ್ನ ಪಾದಸ್ಪರ್ಶದಿಂದ ಈ ಸ್ಥಾನವು ಪವಿತ್ರವಾಯಿತು. ಅಗೋ! ಅಹಲ್ಯಾದೇವಿಯು ನಿಜರೂಪದಿಂದ ನಿನ್ನ ದರ್ಶನಾರ್ಥವಾಗಿ ಬರುತ್ತಿದ್ದಾಳೆ’ ಎಂದು ಮುನಿಯು ಹೇಳಿದನು.

ಅಷ್ಟರಲ್ಲಿ ಜಾಜ್ವಲ್ಯಮಾನ ತೇಜಸ್ಸುಳ್ಳ ಅಹಲ್ಯಾ ದೇವಿಯು ಅರ್ಘ್ಯಪಾದ್ಯಾದಿಗಳಿಂದ ಶ್ರೀ ರಾಮಲಕ್ಷ್ಮಣರನ್ನು ಸತ್ಕರಿಸಿದಳು. ಪರಮ ಪಾವನೆಯಾದ ಅಹಲ್ಯಾದೇವಿಯನ್ನು ಕಂಡು, ಸಂತೋಷಗೊಂಡು, ರಾಮಲಕ್ಷ್ಮಣರಿಬ್ಬರೂ, ಅವಳ ಪಾದಮುಟ್ಟಿ ನಮಸ್ಕಾರ ಮಾಡಿದರು. ಆಕಾಲಕ್ಕೆ ಸರಿಯಾಗಿ ಗೌತಮನೂ ಅಲ್ಲಿಗೆ ಬಂದನು. ದಂಪತಿಗಳಿಬ್ಬರೂ ರಾಮಲಕ್ಷ್ಮಣರನ್ನು ಕೊಂಡಾಡಿ, ಉಪಚರಿಸಿ, ಮುಂದಕ್ಕೆ ಅವರನ್ನು ಕಳುಹಿಸಿಕೊಟ್ಟರು.

ಅಷ್ಟರಲ್ಲಿ ಶ್ರೀರಂಗಪುರದ ಪ್ರಜೆಗಳು, ಆಡಳಿತಗಾರರು, ಎಲ್ಲರೂ ಗೌತಮ ಮುನಿಯ ಸಂದರ್ಶನವಾದುದಕ್ಕೆ ಬಹುವಾಗಿ ಸಂತೋಷಪಟ್ಟು, ಆಡಳಿತಾಧಿಕಾರ ವಹಿಸಿಕೊಳ್ಳುವಂತೆ ಗೌತಮನನ್ನು ಬೇಡಿದರು. ಆದರೆ ಗೌತಮನು ಅದಕ್ಕೆ ಸಮ್ಮತಿಸಲಿಲ್ಲ. ತನ್ನ ಆಶ್ರಮದ ಗುಡಿಸಲ ಬಿಟ್ಟು ತಾನು ಬರುವುದಿಲ್ಲವೆಂದೂ, ತನ್ನ ನೀತಿಶಾಸ್ತ್ರದ ಪ್ರಕಾರ ರಾಜ್ಯಭಾರವನ್ನು

ಪ್ರಜೆಗಳೇ ನಡೆಸುತ್ತಿರಬೇಕೆಂದು ಹೇಳಿ ಅವರನ್ನು ಸಮಾಧಾನಪಡಿಸಿದನು. ರಾಜ್ಯಭಾರದಲ್ಲಿ ಎಲ್ಲ ಬುದ್ಧಿವಾದ ಕೊಡುವದಾಗಿ ಒಪ್ಪಿದನು.

ಅಹಲ್ಯೆಯು ಪತಿದೇವನ ಸೇವೆಯಲ್ಲಿ ಸದಾ ನಿರತಳಾಗಿದ್ದಳು. ಆಶ್ರಮವನ್ನು ಸಾರಿಸಿ ಸಾರಣೆ ಇಡುವುದು. ಕಂದಮೂಲ ಫಲಾದಿಗಳನ್ನು ಸಿದ್ಧಪಡಿಸುವುದು. ಪೂಜಾದಿ ಸಾಮಗ್ರಿಗಳನ್ನು ಒದಗಿಸಿಡುವುದು. ಅತಿಥಿಗಳನ್ನು ಆದರಿಸುವುದು. ಇವೇ ಮುಂತಾದ ಆಶ್ರಮದ ಕಾರ್ಯಗಳಲ್ಲಿ ಸದಾನಿರತಳಾಗಿ, ಸದ್ಗುಣ, ಸದಾಚಾರ ಸಂಪನ್ನೆಯಾಗಿ ಸರ್ವ ವಿಧದಲ್ಲಿಯೂ ಪತಿಗೆ ಸಹಾಯಕಳಾಗಿದ್ದಳು. ಗೌತಮಾಶ್ರಮವು ಇಡೀ ದಂಡಕಾರಣ್ಯಕ್ಕೆ ಭೂಷಣಪ್ರಾಯವಾಗಿತ್ತು.

ಸಾವಿರಾರುಮಂದಿ ಶಿಷ್ಯರು ವ್ಯಾಸಂಗ ಮಾಡುತ್ತಿದ್ದರು. ವೇದಾಧ್ಯಯನ, ಶಾಸ್ತ್ರಾಭ್ಯಾಸ ಅವಿಚ್ಛಿನ್ನವಾಗಿ ನಡೆಯುತ್ತಿತ್ತು. ಚರ್ಚೆ, ಉಪನ್ಯಾಸ ಪ್ರಚಾರಗಳಂತೂ ತಡೆ ಇಲ್ಲದೆ ಆಗುತ್ತಿದ್ದವು. ಎಲ್ಲ ಗುರುಕುಲಕ್ಕಿಂತ ಗೌತಮ ಮುನಿಯ ಗುರುಕುಲವು ಅತ್ಯಂತ ದೊಡ್ಡದಾಗಿತ್ತು; ಮಾರ್ಗದರ್ಶಕವಾಗಿತ್ತು; ಸಂಸ್ಕೃತಿಯ ಕೇಂದ್ರವಾಗಿತ್ತು. ಹೀಗೆ ಗೌತಮನು ಗುಡಿಸಲು ದೊರೆಯಾಗಿ ಬಹುಕಾಲ ತಪಶ್ಚರ್ಯೆಯಲ್ಲಿದ್ದು, ಜ್ಞಾನ ಪ್ರಚಾರ ಮಾಡಿ, ಭಾರತ ಸಂಸ್ಕೃತಿಯನ್ನು ಉದ್ಧಾರಮಾಡಿದನು.

ಅಹಲ್ಯಾ ಗೌತಮರ ಹೆಸರು ನಮ್ಮ ಮನೆಮಾತು. ಅಹಲ್ಯಾದೇವಿಯ ಹೆಸರನ್ನು ಉಚ್ಚಾರಮಾಡಿದರೆ, ಸಮಸ್ತ ಪಾಪ ಪರಿಹಾರವಾಗುವುದೆಂದು ಹಿರಿಯರು ಹೇಳಿರುವರು. ಗೌತಮನ ನೀತಿಶಾಸ್ತ್ರವಂತೂ ಎಲ್ಲ ನ್ಯಾಯಶಾಸ್ತ್ರಕ್ಕೂ ಮೂಲ. ಕಾವೇರಿತೀರದ ಗೌತಮಕ್ಷೇತ್ರ ಇಂದಿಗೂ ಪುಣ್ಯಕ್ಷೇತ್ರವಾಗಿಯೇ ಉಳಿದಿದೆ.

ಮಹೋಪಕಾರಿ

ಮಾನವರ ಹಿತಚಿಂತನೆಗಾಗಿಯೇ ಮಹರ್ಷಿಗಳು ಜನ್ಮವೆತ್ತಿದುದು. ಅವರು ತಮ್ಮ ಯೋಗಮಹಿಮೆಯಿಂದ, ಗುರು ಶುಶ್ರೂಷೆಯ ಪ್ರಭಾವದಿಂದ, ಜ್ಞಾನ ಪ್ರಸಾರ ಶಿಖರದಲ್ಲಿ ದೇದೀಪ್ಯಮಾನರಾಗಿ ಪ್ರಕಾಶಿಸಿದರು. ತಾವು ಸಾಕ್ಷಾತ್ಕರಿಸಿದ ಧರ್ಮ ರಹಸ್ಯಗಳನ್ನು, ತತ್ವ ರಹಸ್ಯಗಳನ್ನು, ಗ್ರಂಥರೂಪದಲ್ಲಿ ಬರೆದಿಟ್ಟು, ಸಕಲರೂ ಶ್ರೇಯಸ್ಸನ್ನು ಹೊಂದುವಂತೆ ಮಾಡಿದರು. ಅವೆಲ್ಲ ಇಂದಿಗೂ ನವನಿಧಿಗಳಾಗಿ ಉಳಿದಿವೆ. ತಮ್ಮ ಜನರು ಬೇರೆಡೆಗಳಿಗೆ ಹೋಗಿ ಜ್ಞಾನ ಭಿಕ್ಷಾಟನೆ ಮಾಡಬಾರದೆಂಬ ಮಹೋದ್ದೇಶದಿಂದಲೇ ಅವರು ಹಾಗೆ ಮಾಡಿದರು. ಅಂತಹ ಮಹಾನುಭಾವರಲ್ಲಿ ಗೌತಮರು ಅಗ್ರಗಣ್ಯರು.

ಪ್ರಾಚೀನ ಪದ್ಧತಿಯ ಪುನರುದ್ಧಾರಕ್ಕಾಗಿ, ಜಗತ್ತಿನ ಉದ್ಧಾರಕ್ಕಾಗಿ, ಗೌತಮರು ತಮ್ಮ ನ್ಯಾಯಶಾಸ್ತ್ರವನ್ನು ರಚಿಸಿದರು. ಅವಿಚ್ಛಿನ್ನ ಸಂಪ್ರದಾಯ ಪರಂಪರೆಯಿಂದ ಬಂದ ವೇದಕ್ಕೂ, ಲೋಕ ವ್ಯವಹಾರಕ್ಕೂ, ಹಾಗೆಯೇ ಉಪಮಾನ ಪ್ರಮಾಣಕ್ಕೂ, ಪ್ರಾಚೀನರು ಆ ಅಪ್ರಮಾಣವನ್ನು ಹೇಳಿದುದು ಅಸಂಗತವೆಂದು ಇವರು ತಮ್ಮ ನ್ಯಾಯಶಾಸ್ತ್ರದಲ್ಲಿ ಸ್ಥಾಪಿಸಿದ್ದಾರೆ. ಶಬ್ದ ಪ್ರಮಾಣವನ್ನು ಸ್ಥಾಪಿಸಿದ ಹೊರತು, ಲೋಕದಲ್ಲಿ ಜನರು ಧರ್ಮಾನುಷ್ಠಾನ ಮಾಡುವುದಿಲ್ಲವೆಂಬುದು ಇವರ ನಂಬಿಕೆ. ಆದರೆ ಈಶ್ವರವನ್ನು ಮೊದಲು ಅನುಮಾನ ಪ್ರಮಾಣದಿಂದ ಸಾಧಿಸಿ, ಈಶ್ವರೋಕ್ತವಾದ ವೇದವು ಪ್ರಮಾಣವೆಂದು ಇವರು ತಮ್ಮ ಶಾಸ್ತ್ರದಲ್ಲಿ ತೋರಿಸಿದ್ದಾರೆ. ಹೀಗೆ ಬದಲಾವಣೆ ಮಾಡುವುದಕ್ಕೆ ಕಾರಣವಿತ್ತು. ವೇದಗಳು ಪರಬ್ರಹ್ಮನಂತೆ ಅನಾದಿ ಎಂದು ಸುಮ್ಮನೆ ಹೇಳಿಬಿಟ್ಟರೆ, ಜನಗಳು ಅದನ್ನು ಒಪ್ಪುದಿಲ್ಲ ಎಂದು ಅವರಿಗೆ ತಿಳಿಯಿತು. ಅದಕ್ಕಾಗಿ ಲೋಕವನ್ನೇ ತಾವು ಅನುಸರಿಸಬೇಕಾದುದು ಯುಕ್ತವೆಂದು ಅವರು ಭಾವಿಸಿದರು. ಇದಕ್ಕೆ ಹಿಂದಿನ ಸಂಪ್ರದಾಯವೂ ಇದೆ. ಲೋಕೋಪಕಾರಕರಾದ ಮಹರ್ಷಿಗಳು ಹಿಂದೆ ಇದೇ ದಾರಿಯನ್ನು ಅನುಸರಿಸಿದ್ದರು.

ಜೈಮಿನಿ ಮಹರ್ಷಿಯು ವ್ಯಾಸರ ಶಿಷ್ಯರು. ಗುರುಗಳು ಒಂದು ಸಲ ಶಿಷ್ಯರನ್ನು ಕುರಿತು ಹೀಗೆ ಹೇಳಿದರು. 'ನೀವು ಲೋಕೋದ್ಧಾರಕ್ಕಾಗಿಯೇ ದುಡಿಯಿರಿ. ಅದೇ ನಿಮ್ಮ ಪ್ರವೃತ್ತಿಯಾಗಲಿ. ಅದಕ್ಕಿಂತ ಹೆಚ್ಚಿನ ಪರಮ ಧರ್ಮ ಇನ್ನೊಂದಿಲ್ಲ. ಲೋಕ ಸೇವೆಯೇ ಈಶ್ವರ ಸೇವೆ.' ಶಿಷ್ಯರು ಗುರುಗಳ ಅಪ್ಪಣೆಯನ್ನು ಶಿರಸಾವಹಿಸಿ ವೇದ ಪ್ರಾಮಾಣ್ಯವನ್ನು ಸಾಧಿಸಲು ಹೊರಟಾಗ ಜನರಿಗೆ ಅದು ರುಚಿಸಲಿಲ್ಲ. ಅವರಿಗೆಲ್ಲ ತುಂಬಾ ಬೇಸರವಾಯಿತು. 'ಈಶ್ವರನಿಲ್ಲ. ಅವನ ದರ್ಶನವಿಲ್ಲ. ಕರ್ಮವೇ ದೇವರು. ಇದಕ್ಕಿಂತ ಹೆಚ್ಚಿನದು ಇನ್ನೊಂದಿಲ್ಲ' ಎಂದು ಜನರು ಸಾರುತ್ತ ಹೊರಟರು. ಹೀಗೆ ಸಮಾಜದ ಬಹು ಜನರು ನಿರೀಶ್ವರವಾದಿಗಳಾಗಿ, ವೇದ ಪ್ರತಿಪಾದ್ಯವಾದ ಈಶ್ವರನಿರುವುದು ಸುಳ್ಳೆಂದು ಸಾರುತ್ತಿದ್ದಾಗ ಅವರನ್ನು ತಿದ್ದುವುದು ಮಹರ್ಷಿಗಳಿಂದಾಗಲಿಲ್ಲ. ಜೈಮಿನಿಯೂ ಅವರ ಕೆಲವು ಶಿಷ್ಯರೂ, ತತ್ಕಾಲದ ಲೋಕರಂಜನೆಗಾಗಿ ನಿರೀಶ್ವರವಾದವನ್ನು ತಾವೂ ಒಪ್ಪಿಕೊಂಡಂತೆಯೇ ನಟಿಸಿದರು. ಇದರಿಂದ ಯಜ್ಞಯಾಗಾದಿ ಧರ್ಮಕಾರ್ಯಗಳೆಲ್ಲಾ ಜಗತ್ತಿನಲ್ಲಿ ಹಾಳಾದವು. ಜನರು ನ್ಯಾಯಬಾಹಿರರಾದರು. ಪೂಜಾದಿ ಸತ್ಕಾರ್ಯಗಳಿಗೆ ಲೋಪ ಬಂದಿತು. ಇದರ ಫಲವಾಗಿ ಲೋಕದಲ್ಲಿ ಮಹಾ ಅನಾವೃಷ್ಟಿ ಒದಗಿತು. ಹನ್ನೆರಡು ವರ್ಷದ ಘೋರಕ್ಷಾಮ ತಲೆದೋರಿತು. ಪ್ರಜೆಗಳು ಕ್ಷಾಮಡಾಮರಾದಿಗಳಿಂದ ಪೀಡಿತರಾದರು. ಇದರ ನಿವಾರಣಾರ್ಥವಾಗಿ ಅನೇಕ ಉಪಾಯಗಳನ್ನು ಮಾಡಿದರೂ ಸಾರ್ಥಕವಾಗಲಿಲ್ಲ. ಅವರಲ್ಲಿ ಬಹುಮಂದಿ ಜೈಮಿನಿ ಬಳಿ ಬಂದು ಹೀಗೆ ಹೇಳಿದರು.

'ಮಹರ್ಷಿಗಳೇ! ಕ್ಷಾಮಾದಿ ನಿವಾರಣೆಗೆ ರಾಜಾಧಿರಾಜರೊಡನೆ ಕಲೆತು ನಾವು ಅನೇಕ ಪ್ರಯತ್ನ ಮಾಡಿದೆವು. ಎಲ್ಲವೂ ವ್ಯರ್ಥವಾದುವು. ಮುಂದೇನು ಮಾಡಬೇಕೆಂಬುದನ್ನು ಕಾಣದೆ, ತಮ್ಮ ಮರೆಹೊಕ್ಕಿದ್ದೇವೆ. ಸ್ವಾಮಿ! ತಾವು ಹಿಂದೆ ವೇದವೇ ಸಕಲ ಪುರುಷಾರ್ಥ ಸಾಧನ ಎಂದು ಹೇಳುತ್ತಿದ್ದಿರಲ್ಲವೇ? ವೇದೋಕ್ತ ಉಪಾಯವಿದ್ದರೆ ದಯವಿಟ್ಟು ತಿಳಿಸಿ, ಅವನ್ನು ತಮ್ಮ ಅಪ್ಪಣೆಯಂತೆ, ಶಾಸ್ತ್ರ ರೀತಿಯಲ್ಲಿ ಕೈಗೊಳ್ಳುತ್ತೇವೆ' ಎಂದು ಅಂಗಲಾಚಿ ಬೇಡಿದರು.

ಜನರ ಮನೋದಾರ್ಢ್ಯವನ್ನು ಪರೀಕ್ಷಿಸಲಿಕ್ಕಾಗಿ ಮಹರ್ಷಿಗಳು ಹೀಗೆ

ಉತ್ತರಿಸಿತ್ತರು. "ಪ್ರಜೆಗಳೇ! ವೇದ ನಿಷ್ಪ್ರಯೋಜನವೆಂದು ನೀವೇ ಹೇಳಿದಿರಲ್ಲವೇ? ಅಂತಹ ವೇದವನ್ನು ನಂಬಿ ಏತಕ್ಕಾಗಿ ಅಳುವಿರಿ. ಬಿಟ್ಟು ಹೋದುದು, ಹೋಗಿಯೇ ಹೋಗಲಿ. ಬೇರೆ ಉಪಾಯವಿದ್ದರೆ ನಿಮಲ್ಲಿಯೇ ಯೋಚಿಸಿ ನಿಶ್ಚಯ ಮಾಡಿ."

ಆಗ ಪ್ರಜೆಗಳು 'ಮಹರ್ಷಿಗಳೇ! ತಾವು ಹಾಗೆ ಅಪ್ಪಣೆ ಕೊಡಬಾರದು. ನಿಮ್ಮ ವೇದವಚನವನ್ನು ನಾವು ನಂಬುತ್ತೇವೆ. ಅದರಲ್ಲಿ ಹೇಳಿರುವ ಉಪಾಯ ಮಾಡೋಣ. ಅದಲ್ಲದೆ ಬೇರೆ ಉಪಾಯ ಯಾವುದೂ ನಮಗಿಲ್ಲ. ದಯವಿಟ್ಟು ಅನಾವೃಷ್ಟಿ ಪರಿಹಾರವಾಗಿ ಏನು ಮಾಡಬೇಕೆಂಬುದನ್ನು ಅಪ್ಪಣೆ ಕೊಡಿಸಬೇಕು' ಎಂದರು.

'ಪ್ರಜೆಗಳಿರಾ! ನೀವೆಲ್ಲ ಐಕಮತ್ಯದಿಂದ ಒಪ್ಪಿ ಹಣ ವೆಚ್ಚಮಾಡುವುದಾದರೆ, 'ಕಾರೀರೀ' ಎಂಬ ಯಜ್ಞವನ್ನು ಮಾಡಿ. ಫಲವಿಲ್ಲದೇ ಹೋದರೆ ದೂಷಿಸಬೇಡಿ' ಎಂದು ಜೈಮಿನಿ ಹೇಳಿದರು. ಜನರು ಅಪಾರ ದ್ರವ್ಯಗಳಿಸಿ, ಎಲ್ಲವನ್ನು ಸಿದ್ಧಪಡಿಸಿಕೊಂಡರು.

ಜನರ ಮನೋಭಾವನೆ ಬದಲಾಯಿಸಿದುದಕ್ಕೆ ಮಹರ್ಷಿಗಳಿಗೆ ಸಂತೋಷವಾಯಿತು. ಶಾಸ್ತ್ರೋಕ್ತ ಕ್ರಮಕ್ಕೆ ಸ್ವಲ್ಪವೂ ತಪ್ಪದಂತೆ, 'ಕಾರೀರೀ' ಯಾಗವನ್ನು ನೆರವೇರಿಸಲಾಗಿ, ಕೂಡಲೇ ಅಪಾರ ಮಳೆ ಬಂದು ಲೋಕಕ್ಕೆಲ್ಲ ಸುಭಿಕ್ಷವುಂಟಾಯಿತು. ಇದರಿಂದ ಜನರಿಗೆ, ವೇದದಲ್ಲಿ ನಂಬಿಕೆ ಹೆಚ್ಚಿತು. ಜನರು ಆಸ್ತಿಕರಾದರು.

ಅನಾವೃಷ್ಟಿಯ ಫಲವಾಗಿ, ದನಕರುಗಳಿಗೆ ಆಹಾರವಿಲ್ಲದೆ ಅವು ಗಿಡ್ಡಗೆಣಸು, ಎಲೆ, ಸೊಪ್ಪು ಮುಂತಾದವುಗಳನ್ನು ತಿಂದು ರೋಗರುಜಿನಾದಿಗಳಿಗೆ ತುತ್ತಾದುವು. ರಾಷ್ಟ್ರದಲ್ಲಿ ಗೋಸಂಪತ್ತು ಕಡಿಮೆಯಾಗುವ ಸಂಭವವುಂಟಾಯಿತು. ಜನರ ಪ್ರಯತ್ನವೆಲ್ಲಾ ವಿಫಲವಾಯಿತು. ಪುನಃ ಪ್ರಜೆಗಳು ಜೈಮಿನಿಯಲ್ಲಿ ಬಂದು ಮೊರೆ ಇಟ್ಟರು. ಆಗ ಮಹರ್ಷಿಗಳು 'ಚಿತ್ರಯಾಯಜೇತ ಪಶುಕಾಮಃ' ಎಂಬ ವೇದವಚನವನ್ನು ಹೇಳಿ ಚಿತ್ರ ಎಂಬ ಯಾಗ ಮಾಡಿದರು. ಇದರಿಂದ ಗೋಸಂಪತ್ತು ವೃದ್ಧಿಯಾಯಿತು.

ಮಹರ್ಷಿಗಳು ತೋರಿಸಿ ಕೊಟ್ಟ ನಿದರ್ಶನಗಳಿಂದ, ಜನರಿಗೆ ವೇದದಲ್ಲಿ ನಂಬಿಕೆ ವೃದ್ಧಿಯಾಯಿತು. ವೇದಾಧ್ಯಯನ ಬಲಪಡಿಸಲು ಅನುಕೂಲ

ವಾಯಿತು. ಇದರಿಂದ ಸರ್ವರೂ, ತಮ್ಮ ತಮ್ಮ ಧರ್ಮಗಳನ್ನು ಯಥಾಶಾಸ್ತ್ರವಾಗಿ ಅನುಸರಿಸಲು ಅನುಕೂಲವಾಯಿತು. ಎಲ್ಲರೂ ತಮ್ಮ ತಮ್ಮ ಕಾರ್ಯದಲ್ಲಿ ಉದ್ಯುಕ್ತರಾಗಿ, ರಾಜ್ಯದಲ್ಲಿ ಸುಭಿಕ್ಷವುಂಟಾಯಿತು. ಮಹರ್ಷಿಗಳು ತಾವು ಕೃತ ಕೃತ್ಯರಾದೆವೆಂದು ಭಾವಿಸಿದರು. ಕರ್ಮಕ್ಕಿಂತ ಬ್ರಹ್ಮವೇ ದೊಡ್ಡದೆಂದು ಸಾರಿದ ಅವರ ವಚನಕ್ಕೆ ಗೌರವ ದೊರಕಿತು.

ಗೌತಮರೂ ಕೂಡ, ಪೂರ್ವಾಚಾರ್ಯರಾದ ಜೈಮಿನಿಗಳ ದಾರಿಯನ್ನೇ ಹಿಡಿದರು. ಇವರ ಕಾಲದಲ್ಲಿ ಕೂಡ ಅನೇಕರು ವೇದವು ಪೌರುಷೇಯ ಎಂದರು. ಅವರಲ್ಲಿ ವಿರೋಧ ಕಟ್ಟಿಕೊಳ್ಳಬಾರದೆಂಬ ಸದುದ್ದೇಶದಿಂದ, ಅವರ ಅಭಿಪ್ರಾಯವನ್ನೇ ತಾವೂ ಪುಷ್ಟೀಕರಿಸುವುದಾಗಿ ಹೇಳಿದರು. ಅದು ತಾತ್ಕಾಲೀಕವೇ ವಿನಹ, ಅವರು ಎಂದೂ ಅವೈದಿಕರಾಗಲಿಲ್ಲ. ಉಪಮಾನ ಪ್ರಮಾಣದಿಂದಲೇ ಬಾಲಕರ ಬುದ್ಧಿ ಬೆಳೆಯುವುದೆಂದು ಅವರು ತೋರಿಸಿಕೊಟ್ಟರು.

ನ್ಯಾಯ ಎಂದರೆ ಪ್ರಮಾಣಗಳಿಂದ ಪದಾರ್ಥಗಳನ್ನು ಪರೀಕ್ಷೆ ಮಾಡುವುದು. ಇದೊಂದು ವಿದ್ಯೆ. ಜ್ಞಾನ ಸಂಪಾದನೆ. ನ್ಯಾಯ ಶಾಸ್ತ್ರದಲ್ಲಿ ಆನ್ವೀಕ್ಷಕಿ, ತ್ರಯೀ, ವಾರ್ತಾ, ದಂಡ ನೀತಿ ಎಂದು ನಾಲ್ಕು ವಿಧ. ಆನ್ವೀಕ್ಷಕಿ ಎಂದರೆ ಆತ್ಮ ವಿದ್ಯೆ. ತ್ರಯಿ ಯಾಗಾದಿ ಕರ್ಮವನ್ನು ಉಪದೇಶ ಮಾಡುವುದು. ವಾರ್ತಾ, ಕೃಷಿ, ವಾಣಿಜ್ಯ, ಶಿಲ್ಪ-ಮುಂತಾದುವನ್ನು ತಿಳಿಸುವುದು. ದಂಡನೀತಿ ರಾಜ್ಯಭಾರ, ಪ್ರಜಾಪರಿಪಾಲನೆ ಇತ್ಯಾದಿ ವಿಷಯಗಳನ್ನು ನಿರೂಪಿಸುವುದು. ವೇದಶಾಸ್ತ್ರಕ್ಕೆ ಪ್ರಮಾಣವನ್ನು ಸ್ಥಾಪಿಸುವುದಕ್ಕಾಗಿಯೇ ಗೌತಮರು ನ್ಯಾಯಶಾಸ್ತ್ರ ಬರೆದದ್ದು. ಪರಮೇಶ್ವರ ಭಕ್ತಿಯೇ ಸಕಲ ಮಾನವರ ಶ್ರೇಯಸ್ಸಿಗೆ ಕಾರಣ. ಅಂತಹ ಭಾವನೆಯನ್ನು ಸ್ಥಾಪಿಸುವುದೇ ತಮ್ಮ ಶಾಸ್ತ್ರದ ಮುಖ್ಯ ಉದ್ದೇಶವೆಂದೂ, ಅದರಿಂದ ಸರ್ವ ಸಿದ್ಧಿಯಾಗುವುದೆಂದೂ ಗೌತಮರು ಹೇಳಿದ್ದಾರೆ.

ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದ, ಇವು ನಾಲ್ಕು ಪ್ರಮಾಣಗಳು. ಇವುಗಳಿಂದ ಉಂಟಾದ ವಸ್ತುಗಳು ಏಳು. ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಮವಾಯ, ಅಭಾವ. ಜೀವೇಶ್ವರರು ಅತ್ಯಂತ ಭಿನ್ನರು. ಜೀವಾತ್ಮನಿಗೆ ಈ ಲೋಕದಲ್ಲಿ ಇಪ್ಪತ್ತೊಂದು ವಿಧ ದುಃಖಗಳು ಸಂಭವಿಸುವುವು. ಈ ದುಃಖವನ್ನು ಧ್ವಂಸ ಮಾಡುವುದೇ

ಮೋಕ್ಷ. ಹೀಗೆಂದು ತತ್ಕಾಲದ ಲೋಕರಂಜನೆಗಾಗಿ ಗೌತಮರು ಹೇಳಬೇಕಾಯಿತು. ಹೀಗೆ ಸ್ವಪ್ರಕಾರದಿಂದ ಜನರ ಅಂತರಂಗವನ್ನು ಹೊಕ್ಕು, ಅವರನ್ನು ಉದ್ಧರಿಸುವುದೇ ತಮ್ಮ ಮುಖ್ಯ ಧ್ಯೇಯವೆಂದು ಹೇಳಿದರು. ಇದಕ್ಕಾಗಿ ತಮ್ಮ ನ್ಯಾಯಶಾಸ್ತ್ರ ನಿರ್ಮಾಣವಾಯಿತೆಂದು ಸಾರಿದರು.

ಎಲ್ಲ ಶಾಸ್ತ್ರಕ್ಕಿಂತ ನ್ಯಾಯಶಾಸ್ತ್ರವು. ಮಾನವರನ್ನು ಕುಶಾಗ್ರ ಮತಿಗಳನ್ನಾಗಿ ಮಾಡುವುದು. ಬಾಲಕರ ನಿಶ್ಚಯ ಬುದ್ಧಿಯನ್ನು ಮಾಡುವುದು. ಇದರಿಂದ ವ್ಯವಸಾಯ ಸಾಮರ್ಥ್ಯವೂ, ವಿಷಯ ಪರಿಷ್ಕಾರವೂ, ಧರ್ಮಾಧರ್ಮ ಜ್ಞಾನವೂ, ಯುಕ್ತಿ ಚಾತುರ್ಯವೂ, ಪಾಠ ಪ್ರವಚನಾದಿ ಕುಶಲತೆಯೂ ಉಂಟಾಗುವುವು.

ಮನುಷ್ಯನು ಬಾಲ್ಯದಿಂದ ಪ್ರತ್ಯಕ್ಷವಾಗಿ ಕಂಡು ಕೇಳಿ ನೋಡಿ, ಊಹೆಯಿಂದ ತಿಳಿದ ವಿಷಯದ ಜೊತೆಗೆ. ಶಾಸ್ತ್ರಾಭ್ಯಾಸ ಮಾಡಿ ಆಯಾ ಪದಾರ್ಥಗಳ ಲಕ್ಷಣಗಳನ್ನು ನಿರ್ಧರಿಸಬೇಕಾದ ಪ್ರಸಂಗ ಬಂದೇ ಬರುವುದು. ಅಂತಹ ಲಕ್ಷಣ ಜ್ಞಾನವೆಲ್ಲ ನ್ಯಾಯ ಶಾಸ್ತ್ರಾಭ್ಯಾಸದಿಂದಲೇ ಉಂಟಾಗುವುದು. ಇದು ಲೋಕಕ್ಕೆಲ್ಲ ತಿಳಿದ ವಿಷಯ ಏಕೆಂದರೆ ಎಲ್ಲ ವಸ್ತುಗಳ ಲಕ್ಷಣ ಸಾಮಾನ್ಯಕ್ಕೆ ಒಂದು ಲಕ್ಷಣವನ್ನು ಈ ಶಾಸ್ತ್ರಗಲ್ಲಿ ನಿರೂಪಿಸಲಾಗಿದೆ. ಈ ತಿಳಿವಳಿಕೆ ಯಾರಿಗಿರುವುದಿಲ್ಲವೋ, ಅವರು ವಿವೇಚಕರಲ್ಲ. ಇದಕ್ಕೆ ಕೆಲವು ಉದಾಹರಣೆಯನ್ನು ಸೂಚಿಸುವುದು ಯುಕ್ತವಾಗಿದೆ.

ಲಕ್ಷಣ ಸಾಮಾನ್ಯಕ್ಕೆ ಲಕ್ಷಣವೇನು? 'ಅಸಾಧಾರಣ ಧರ್ಮೋಹಿ ಲಕ್ಷಣಂ ಪರಿಕೀರ್ತಿತಂ' ಎಂದು ಈ ಶಾಸ್ತ್ರಗಲ್ಲಿ ಹೇಳಿದೆ. ಅಸಾಧಾರಣ ಎಂದರೆ ಮತ್ತೆಲ್ಲಿಯೂ ಇಲ್ಲದ, ಲಕ್ಷ್ಯ ಮಾತ್ರದಲ್ಲಿಯೇ ಇರತಕ್ಕ ಧರ್ಮ ಎಂದು ಅರ್ಥ ಮಾಡುವುದು. ಈ ಲಕ್ಷಣವು ಮೂರು ದೋಷದಿಂದ ರಹಿತವಾಗಿರಬೇಕು. ಅತಿ ವ್ಯಾಪ್ತಿ. ಅವ್ಯಾಪ್ತಿ, ಅಸಂಭವ-ಇವು ಮೂರು ದೋಷಗಳು. ಕೊಂಬಿರುವುದೇ ಗೋವಿಗೆ ಲಕ್ಷಣ ಎಂದು ಹೇಳಿದರೆ. ಇದು ಸರಿಯಾದ ಲಕ್ಷಣವೇ? ಅಲ್ಲ. ಎಮ್ಮೆಗೆ ಕೊಂಬಿರುವುದಿಲ್ಲವೇ? ಅದನ್ನು ಗೋವೆಂದು ಯಾರಾದರೂ ಹೇಳುವರೇ? ಇಲ್ಲ. ಆದುದರಿಂದ ಕೊಂಬು ಎಂಬ ಲಕ್ಷಣವು ಅತಿ ವ್ಯಾಪ್ತಿ ಲಕ್ಷಣದಿಂದ ಕೂಡಿದೆ.

ಅವ್ಯಾಪ್ತಿ ಎಂದರೆ, ಎಲ್ಲ ಲಕ್ಷ್ಯಕ್ಕೂ ಒಂದು ಧರ್ಮವನ್ನು ಹೇಳುವಾಗ, ಅದು ಕೆಲವಕ್ಕೆ ವ್ಯಾಪಿಸದೇ ಇರುವುದು. ಗೋವಿಗೆ ಕಪ್ಪಾಗಿರುವುದು ಲಕ್ಷಣ ಎಂದರೆ, ಬಿಳಿಯ ಪಸುಗಳ ಪಾಡೇನು? ಆ ಕಪ್ಪು ಅವುಗಳಲ್ಲಿ ಇಲ್ಲ. ಆದುದರಿಂದ ಆ ಕಪ್ಪು ಎಲ್ಲ ಲಕ್ಷ್ಯಗಳಿಗೂ ವ್ಯಾಪಿಸಲಿಲ್ಲ. ಇದು ದುಷ್ಟ ಲಕ್ಷಣ.

ಅಸಂಭವವೂ ಹಾಗೆಯೇ. ಗೋವಿಗೆ ಒಂದು ಗೊರಸಿರುವುದೇ ಲಕ್ಷಣ ಎಂದು ಹೇಳಿದರೆ, ಅದು ಅಸಂಭವ. ಏಕೆಂದರೆ ಗೋ ಸಾಮಾನ್ಯದಲ್ಲಿ ಸೀಳಾದ ಗೊರಸಿರುವುದು ಕಂಡು ಬರುವುದು. ಆದರೆ ಕುದುರೆಗೆ ಒಂದೇ ಗೊರಸಿರುವುದು. ಆದರೆ ಕುದುರೆಯು ಗೋವಲ್ಲ. ಯಾವ ಗೋವಿಗೂ ಅದು ಲಕ್ಷಣವಾಗಲಾರದು.

ಮೇಲೆ ಹೇಳಿದ ರೀತಿಯಲ್ಲಿ, ಲಕ್ಷಣಗಳು ದೋಷರಹಿತವಾಗಿರಬೇಕು. ಇದೇ ಅಸಾಧಾರಣ ಧರ್ಮ. ಹಾಗಾದರೆ ಗೋವಿಗಿರುವ ಅಂತಹ ಲಕ್ಷಣವೇನು ಎಂದು ಕೇಳಬಹುದು. ಕತ್ತಿನ ಹತ್ತಿರವಿರುವ ದೋಸೆಯಂತೆ ತೂಗಾಡುವ ಮಾಂಸ ಖಂಡ, ಹಳಿಲು ಮುಂತಾದುವು. ಇವು ಇನ್ನಾವ ಪ್ರಾಣಿಯಲ್ಲಿಯೂ ಅಷ್ಟು ಪ್ರಧಾನವಾಗಿ ಕಾಣುವುದಿಲ್ಲ.

ಬಾಲಕನು, ಉಪಾಧ್ಯಾಯರಿಂದ ಬೋಧಿಸಲ್ಪಟ್ಟ ಆಯಾಯಾ ಪದಾರ್ಥಗಳ ಲಕ್ಷಣಗಳನ್ನು ಇಂತಹ ಜ್ಞಾನ ವಿಶೇಷದಿಂದ ತಿಳಿಯಬಹುದು. ಈ ದೃಷ್ಟಿಯಿಂದ ಗೌತಮರ ನ್ಯಾಯಶಾಸ್ತ್ರಾಭ್ಯಾಸವು ಅತಿ ಮುಖ್ಯವಾದುದು. ನ್ಯಾಯವನೋಡದ ಬುದ್ಧಿಯು ಅನ್ಯಾಯವೇ ಸರಿ ಎಂದು ಹಿರಿಯರು ಹೇಳಿದ್ದಾರೆ.

ನ್ಯಾಯ ಶಾಸ್ತ್ರ ರೀತಿಯಾಗಿ ವಾಯುವಿಗೆ ಒಂದು ಲಕ್ಷಣ ಹೇಳಿದೆ. ಅದೇನೆಂದರೆ 'ರೂಪರಹಿತ ಸ್ಪರ್ಶವಾನ್ವಾಯುಃ'. ರೂಪವಿಲ್ಲದೆ. ಸ್ಪರ್ಶವುಳ್ಳದ್ದಾಗಿರುವುದೇ ವಾಯು ಎಂದು ಅರ್ಥ. ಭೂಮಿ, ನೀರು, ಮುಂತಾದುವುಗಳಲ್ಲಿ ಸ್ಪರ್ಶವಿರುವುದರಿಂದ ಅತಿ ವ್ಯಾಪ್ತಿಯುಂಟಾಗುವುದು. ಅದಕ್ಕಾಗಿಯೇ ರೂಪವಿಲ್ಲದೇ ಇರುವುದು ಎಂದು ಹೇಳಲಾಗಿದೆ. ರೂಪರಹಿತವಾಗಿರುವುದೇ ವಾಯು ಎಂದರೆ ಆಕಾಶದಲ್ಲಿಯೂ ಆ ಲಕ್ಷಣವಿದೆ. ಆದರೆ ಅದರಲ್ಲಿ ಸ್ಪರ್ಶ ಲಕ್ಷಣವಿರುವುದಿಲ್ಲ. ಆದುದರಿಂದ ರೂಪರಹಿತವಾಗಿರುವುದು, ಸ್ಪರ್ಶಯುಕ್ತ

ವಾಗಿರುವುದೇ ವಾಯುವಿನ ಲಕ್ಷಣ. ಹೀಗೆ ಈ ಶಾಸ್ತ್ರದಲ್ಲಿ ಹೇಳಿರುವ ಎಲ್ಲ ಪ್ರಮೇಯ, ಪ್ರಮಾಣಗಳಿಗೂ, ಲಕ್ಷಣಗಳು ಹೇಳಲ್ಪಟ್ಟಿವೆ.

ಹೀಗೆ ಗೌತಮರು ಹಿಂದೂ ದರ್ಶನದ ಮುಖ್ಯ ಭಾಗವಾದ ನ್ಯಾಯ ಶಾಸ್ತ್ರವನ್ನು ವಿವರಿಸಿ ಮಹೋಪಕಾರ ಮಾಡಿದ್ದಾರೆ. ದರ್ಶನ ಎಂದರೆ ತತ್ವ ವಿಚಾರ. ತತ್ವ ಎಂದರೆ ವಸ್ತು ಅಥವಾ ಪದಾರ್ಥ ಎಂದು ಅರ್ಥ. ಪದಾರ್ಥ ಗಳನ್ನು ಪರಿಶೋಧನೆ ಮಾಡುವ ಶಾಸ್ತ್ರವೇ ತತ್ವಶಾಸ್ತ್ರ. ಪ್ರಪಂಚದಲ್ಲಿ ನಾವು ಅನೇಕ ಪದಾರ್ಥಗಳನ್ನು ನೋಡುತ್ತೇವೆ. ಇವುಗಳಲ್ಲಿ ಕೆಲವು ನಮ್ಮ ಎದು ರಿಗೆ ಕಾಣುವುವು. ಮತ್ತೆ ಕೆಲವು ಕಾಣುವುದಿಲ್ಲ. ಹೀಗೆ ಪ್ರತ್ಯಕ್ಷ, ಪರೋಕ್ಷವಾದ ಸಕಲ ವಸ್ತುಗಳನ್ನೂ ತತ್ವಶಾಸ್ತ್ರವು ವಿಚಾರ ಮಾಡುವುದು.

ತತ್ವವಿಚಾರ ಆರಂಭಕ್ಕೆ ಕಾರಣವೇನು ಎಂಬ ಪ್ರಶ್ನೆ ಏಳುವುದು ಸಹಜ.

ಮಾನವರಿಗೆ ಬುದ್ಧಿ ಶಕ್ತಿಯನ್ನು ಭಗವಂತನು ಕರುಣಿಸಿರುವನು. ಅವ ನಲ್ಲಿ ಊಹಾಪೋಹ ಶಕ್ತಿ ಹೆಚ್ಚು. ಮಾನವರಲ್ಲಿ ಆಸೆ, ದ್ವೇಷ, ಮೋಹ, ದಯೆ, ದಾಕ್ಷಿಣ್ಯ ಮುಂತಾದುವು ಸ್ವಭಾವವಾಗಿ ಬರುವುವು. ಇವು ಕೆಲವು ವೇಳೆ ಅವರಲ್ಲಿ ಪ್ರಬಲವಾದರೆ ಅವು ದುರ್ಗುಣಗಳಾಗುವುವು. ಆಸೆ ಹೆಚ್ಚಾ ದರೆ ಕಾಮವಾಗುವುದು. ದ್ವೇಷ ಹೆಚ್ಚಿದರೆ ಕ್ರೋಧವಾಗುವುದು. ಮೋಹ ಹೆಚ್ಚಿದರೆ ಲೋಭವಾಗುವುದು. ಈ ಮೂರೂ ಹೆಚ್ಚಿದರೆ ಅನರ್ಥ ಪರಂಪರೆ ಉಂಟಾಗುವುವು. ಇದನ್ನು ತಪ್ಪಿಸುವುದಕ್ಕೆ ಬುದ್ಧಿವಂತರು, ಪ್ರಯತ್ನ ಮಾಡುವರು. ಮೇಲಿನ ಮೂರು ಕೆಟ್ಟ ಗುಣ ತಗ್ಗಿಸುವಂತೆ ಮಾಡುವುದೇ ಶಾಂತಿ. ಹೀಗೆ ಶಾಂತಿಯನ್ನು ಉದ್ದೇಶಿಸಿ ಎಲ್ಲ ತತ್ವಶಾಸ್ತ್ರಜ್ಞರೂ ಬರೆದಿ ದ್ದಾರೆ. ಇಂತಹ ಶಾಂತಿಯಿಂದ ಇಹಲೋಕದಲ್ಲಿ ಸುಖ ಪರಲೋಕದಲ್ಲಿ ಅನುಕೂಲ ಉಂಟಾಗುವುದು.

ಲೋಕದಲ್ಲಿ ಜನರ ಸುಖಾನುಭವ ಎರಡು ವಿಧವಾಗಿವೆ. ಒಂದು ಕಣ್ಣು, ಕಿವಿ, ಬಾಯಿ, ಮೂಗು ಮುಂತಾದುವುಗಳಿಂದ ಚಿತ್ರ, ಸಂಗೀತ, ರುಚಿ, ವಾಸನೆ ನೋಡಿ ಸಂತೋಷಪಡುವುದು. ಇನ್ನೊಂದು ಇಂದ್ರಿಯ ವ್ಯಾಪಾರವಿಲ್ಲದೆ ನಿದ್ರೆಯಲ್ಲಿ ಪರಮ ಸುಖಾನುಭವ ಹೊಂದುವುದು. ಇದೇ ಆತ್ಮ ಸುಖ. ಇಂತಹ ಶಾಂತಿ ನಿಮಿತ್ತಗಾಗಿ ಸಕಲ ಪ್ರಾಣಿಗಳೂ ಹಾತೊರೆ

ಯುವುವು. ನಿದ್ರಾವಸ್ಥೆಯ ಸುಖಾಸುಖವನಂತೆ. ತತ್ವಶಾಸ್ತ್ರ ವಿಚಾರದಿಂದ ಮನಸ್ಸಿನ ಶುದ್ಧಿ, ಶಾಂತಿ. ದ್ವೇಷಾಸೂಯೆ ಇಲ್ಲದ ಪ್ರಯೋಜನ ದೊರೆಯು ವುದು. ಇದಕ್ಕಾಗಿಯೇ ಮಹರ್ಷಿಗಳು ಈ ಶಾಸ್ತ್ರಕ್ಕೆ ಹೆಚ್ಚು ಗಮನ ಕೊಟ್ಟು ಲೋಕ ಕಲ್ಯಾಣವಾಗುವಂತೆ ಮಾಡಿದರು.

ಎಲ್ಲರಂತೆ ಗೌತಮರೂ ಕೂಡ, ತಮ್ಮ ವ್ಯವಹಾರದಿಂದ ತತ್ವ ನಿರ್ಣಯ ಮಾಡಿತೋರಿಸಿದ್ದಾರೆ. ವ್ಯವಹಾರ ಎಂದರೆ ಆಡುವ ಮಾತುಗಳು. ಬಾಲಕರಿಗೆ ಅಕ್ಷರವನ್ನು ಕಲಿಸುವಂತೆ ಮಾತೂ ಕಲಿಸಲ್ಪಡುವುವು. ಮೊದಲು. ಅಟ, ಆನೆ, ಆಕಳು. ಊಟ, ಚಂದ್ರ, ಸೂರ್ಯ ಎಂಬ ಮಾತು ಹೇಳಿಕೊಡಲಾಗುವುದು. ಆಮೇಲೆ ನಾನು, ನೀನು ಎಂಬ ಮಾತು ತಿಳಿ ಸಲ್ಪಡುವುವು. ಕಾಲಕ್ರಮದಲ್ಲಿ ಅವರು ವಿದ್ಯಾವಂತರಾದ ಹಾಗೆ ಬುದ್ಧಿ ಶಕ್ತಿ ಬೆಳೆದಹಾಗೆ ಶರೀರ ಆತ್ಮ, ಶರೀರ ಬೇರೆ, ಆತ್ಮ ಬೇರೆ ಎಂಬ ಶಿಕ್ಷೆ ಆಗುವುದು. ಆಮೇಲೆಇದನ್ನೇ ನಾನು, ನೀನು ಎಂಬ ಪದಗಳಿಗೆ ಹೋಲಿಸ ಲಾಗುವುದು.

ಇನ್ನೂ ಸ್ವಲ್ಪ ಮುಂದೆ ಹೋಗಿ, ಎಲ್ಲ ವಸ್ತುಗಳಲ್ಲಿ ಭಗವಂತನ ಅಂಶ ವಿರುವುದು. ಇದೇ ಬ್ರಹ್ಮ; ಜಗತ್ತಿನ ಎಲ್ಲ ಪದಾರ್ಥಗಳಲ್ಲಿ ಪರಮಾತ್ಮ ನಿದ್ದಾನೆ ಎಂಬ ಭಾವನೆ ಮೂಡುವ ಹಾಗೆ ತಿಳಿಸಲಾಗುವುದು. ಇದಕ್ಕೆ ಉಪನಿಷತ್ತಿನಲ್ಲಿ ತಿಳಿಸಿರುವ ವ್ಯವಹಾರವನ್ನು ಪ್ರಮಾಣವಾಗಿ ತೆಗೆದುಕೊಳ್ಳ ಲಾಗುವುದು. ಅದರಲ್ಲಿರುವ ಮಾತುಗಳು ಗುರುಶಿಷ್ಯರ ಸಂಭಾಷಣೆಯ ರೂಪದಲ್ಲಿದ್ದು ಮನುಷ್ಯರ ಭಾಷೆ ಅದರಲ್ಲಿರುವುದರಿಂದ, ಅರ್ಥ ಚೆನ್ನಾಗಿ ತಿಳಿಯುವುದು. ಇಂತ ವ್ಯವಹಾರ ಈಗಿನದಲ್ಲ, ಮಾನವ ಸೃಷ್ಟಿಯಾದಾಗಿ ನಿಂದ ಇದು ಬಂದಿದೆ. ಇದನ್ನೇ ಮಹರ್ಷಿಗಳು ತತ್ವದೃಷ್ಟಿಯಿಂದ ತಿಳಿಸಿದ್ದಾರೆ.

ಹೀಗೆ ವಿಚಾರಪರವು ವ್ಯವಹಾರ ಮಾರ್ಗ ಬಿಟ್ಟು ಹೋಗುವುದಕ್ಕೆ ಅವಕಾಶವಿಲ್ಲ. ಮಾತಿನಿಂದ ವಿಚಾರ; ಭಾಷೆಯಿಂದ ಮಾತು. ಮಾನವ ನಿಲ್ಲದೆ ಮಾತಿಲ್ಲ. ಹಾಗೆಯೇ ಗ್ರಂಥ, ಉಪದೇಶ ಯುಕ್ತಿ ಎಲ್ಲವೂ ಭಾಷೆ ಯಿಂದಲೇ ತಿಳಿಯಲ್ಪಡಬೇಕು. ಸಾಮಾನ್ಯವಾಗಿ ತತ್ವವಿಚಾರಕ್ಕೆ ಉಪ ದೇಶವಿರಬೇಕು. ಇದು, ಕಾಲದೇಶ ಭೇದಗಳಿಂದ, ಅಭಿಪ್ರಾಯ ಭೇದ

ಗಳಿಂದ ಕೆಲವು ಭಾಗಗಳಾಗಿದ್ದಾಗ್ಯೂ ಅವುಗಳಲ್ಲಿ ಒಂದು ಬಗೆಯ ಸಾಮರಸ್ಯವುಂಟಾಗುವಂತೆ ನಮ್ಮ ಹಿರಿಯರು ಪ್ರಯತ್ನ ಮಾಡಿದ್ದಾರೆ.

ಒಂದಾನೊಂದು ಕಾಲದಲ್ಲಿ ನಾಲ್ಕು ಜನ ಕುರುಡರು ಆನೆ ಹೇಗಿವೆ ಎಂದು ತಿಳಿಯುವುದಕ್ಕಾಗಿ ಕಾಡಿಗೆ ಬಂದರು. ಅವರಿಗೆಲ್ಲ ಒಬ್ಬ ಪುರುಷನು ಸಹಾಯಕನಾಗಿ ನಿಂತನು. ಅವರಲ್ಲಿ ಒಬ್ಬನು ಆನೆಯ ಕಾಲನ್ನು ಮುಟ್ಟಿ ನೋಡಿ, ಆನೆ ಕಂಬದಂತಿವೆ ಎಂದುಕೊಂಡ. ಇನ್ನೊಬ್ಬ ಆನೆಯ ಬಾಲವನ್ನು ಮುಟ್ಟಿ ನೋಡಿ, ಆನೆ ಕಸಪ್ಪೊರಕೆಯಂತಿದೆ ಎಂದ; ಇನ್ನೊಬ್ಬ ಕಿವಿಯನ್ನು ಮುಟ್ಟಿ ಆನೆ ಮೊರದ ಹಾಗಿದೆ ಎಂದು ತಿಳಿದ. ಮತ್ತೊಬ್ಬನು ಆನೆಯ ಹಲ್ಲನ್ನು ಮುಟ್ಟಿ ಆನೆಯ ಸ್ವರೂಪ ಕಲ್ಲಿನ ಹಾಗಿರುವುದು ಎಂಬುದಾಗಿ ಗೊತ್ತು ಮಾಡಿದನು. ಇವರಲ್ಲಿ ಯಾರು ಸರಿ, ಯಾರು ತಪ್ಪು? ಎಲ್ಲವೂ ನಿಶ್ಚಯ, ಎಲ್ಲವೂ ತಪ್ಪು, ಯಾವುದೂ ಸಮಗ್ರವಲ್ಲ. ಇವರಂತೆ ತತ್ವ ವಿಚಾರದಲ್ಲಿ ಭಿನ್ನಾಭಿಪ್ರಾಯ ಬರಬಹುದು. ಇವುಗಳನ್ನು ಪರಿಹರಿಸಲು ಉಪಾಯಗಳಿವೆ. ಅವುಗಳನ್ನು ಗೌತಮರಾದಿಯಾಗಿ ಅನೇಕ ಮಹರ್ಷಿಗಳು ತಿಳಿಸಿದ್ದಾರೆ. ದೇವರಿದ್ದಾನೆಯೆ? ಕರ್ಮವೆಂದರೇನು? ಜೀವಾತ್ಮ ಪರಮಾತ್ಮ ಸಂಬಂಧವೇನು? ರೋಗ, ಬಡತನ, ಹಿಂಸೆ ಇವು ಏತಕ್ಕಾಗಿ ಬರುವುವು? ಅಹಿಂಸೆ, ಸತ್ಯ ಇವುಗಳ ಸ್ವರೂಪವೇನು? ಇಂಥ ಮುಂತಾದ ವಿಚಾರಗಳಲ್ಲಿ ಕೂಡ ಭಿನ್ನಾಭಿಪ್ರಾಯಗಳು ಮೂಡಿವೆ. ಅವುಗಳನ್ನೆಲ್ಲಾ ತತ್ವಶಾಸ್ತ್ರ ದೃಷ್ಟಿಯಿಂದ ಹಿರಿಯರು ವಿಚಾರ ಮಾಡಿ, ತಮ್ಮ ನಿರ್ದಿಷ್ಟ ಅಭಿಪ್ರಾಯಗಳನ್ನೂ ವ್ಯಕ್ತಪಡಿಸಿದ್ದಾರೆ. ಗೌತಮರೂ ತಮ್ಮ ನ್ಯಾಯಶಾಸ್ತ್ರದಲ್ಲಿ ಈ ವಿಷಯಗಳ ಮಾಡಿದ್ದಾರೆ.

ಒಟ್ಟಿನಲ್ಲಿ ಹೇಳಬಹುದಾದರೆ ಭಾರತೀಯ ದರ್ಶನ ಶಾಸ್ತ್ರಗಳಲ್ಲಿ ನ್ಯಾಯಶಾಸ್ತ್ರಕ್ಕೆ ಬಹಳ ಮುಖ್ಯವಾದ ಸ್ಥಾನವಿದೆ. ಇಂತಹ ಅದ್ಭುತವಾದ ಸ್ಥಾನವಿದೆ. ಇಂತಹ ಅದ್ಭುತವಾದ ಶಾಸ್ತ್ರಕ್ಕೆ ಗೌತಮರು ಮೂಲ ಪುರುಷರು. ಇವರು ಹಾಕಿದ ಅಸ್ತಿಭಾರದ ಮೇಲೆ ನ್ಯಾಯಶಾಸ್ತ್ರವು ಬೆಳೆದು ಕಾಲಕ್ರಮದಲ್ಲಿ ಎಲ್ಲ ಶಾಸ್ತ್ರಗಳ ಅಧ್ಯಯನಕ್ಕೂ ಉಪಕಾರಕವಾಗಿ ಪರಿಣಮಿಸಿತು. ಈ ಕಾರಣದಿಂದಾಗ ತಮ್ಮ ಇಡಿಯ ಭಾರತ ಸಂಸ್ಕೃತಿಯ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಋಷಿ ಪದವಿಗೇರಿ ಲೋಕಮಾನ್ಯತೆಯನ್ನು

ಹೊಂದಿದುದಲ್ಲದೆ ಮಹತ್ತರವಾದ ಲೋಕೋಪಕಾರವನ್ನು ಮಾಡಿ ಜನತೆ ಯನ್ನೇ ಉದ್ಧರಿಸಿರುತ್ತಾರೆ.

ಇಂತಹ ಮಹಾನುಭಾವರಿಗೆ ಆಧುನಿಕ ಭಾರತವನ್ನು ರೂಪುಗೊಳಿಸುವುದರಲ್ಲಿ ಆಸಕ್ತರಾಗಿರುವ ನಾವು ಸಲ್ಲಿಸಬಹುದಾದ ಕಾಣಿಕೆಯೇನು? ಎಂಬುದನ್ನು ಸೂಕ್ಷ್ಮವಾಗಿ ಆಲೋಚಿಸಬೇಕಾಗಿದೆ. ಇಂದಿನದು ವಿಜ್ಞಾನಯುಗ. ವಿಜ್ಞಾನದ ಪ್ರಗತಿ, ಆರ್ಥಿಕ ಪುನರುಜ್ಜೀವನ, ವಿದ್ಯಾಭ್ಯಾಸದ ಮುನ್ನಡೆ, ಮೊದಲಾದ ವಿಚಾರಗಳು ಇಂದಿನ ನಾಯಕರ ಮುಖ್ಯ ಸಮಸ್ಯೆಗಳಾಗಿವೆ. ಹೀಗಿರುವಾಗ ಪ್ರಾಚೀನ ಶಾಸ್ತ್ರಗಳ ಪ್ರವರ್ತಕರ ಉದ್ಯಮಗಳು ಹೇಗೆ ಉಪಯೋಗಕ್ಕೆ ಬರುತ್ತದೆಯೆಂದು ಯಾರಿಗಾದರೂ ಅನ್ನಿಸಬಹುದು. ಸೂಕ್ಷ್ಮವಾಗಿ ವಿಚಾರಮಾಡಿದರೆ ಯಾವುದೊಂದು ಸಮಸ್ಯೆಯನ್ನು ಸಮರ್ಪಕವಾಗಿ ಬಗೆಹರಿಸಬೇಕಾದರೂ. ತೀಕ್ಷ್ಣವಾದ ಬುದ್ಧಿಶಕ್ತಿ, ನಿಸ್ಪೃಹವಾದ ಜ್ಞಾನ ಮತ್ತು ಧರ್ಮ ದೃಷ್ಟಿ ಇವು ಅತ್ಯವಶ್ಯಕವೆಂಬುದು ಯಾರಿಗಾದರೂ ತೋರದಿರದು. ಇದನ್ನೆಲ್ಲ ಸಂಪಾದಿಸಬೇಕಾದರೆ ಮಾನವನ ಮನಶ್ಶಕ್ತಿಯು ಸುಶಿಕ್ಷಿತವಾದ ರೀತಿಯಲ್ಲಿ ಬೆಳೆಯಬೇಕು. ಜ್ಞಾನಾರ್ಜನೆಯು ಶಾಸ್ತ್ರ ರೀತಿಯಿಂದ ನಡೆಯಬೇಕು. ಮತ್ತು ಸಂಪಾದಿಸಿದ ಜ್ಞಾನವನ್ನು ಸರಿಯಾದ ರೀತಿಯಲ್ಲಿ ದೇಶೋಪಕಾರಕ್ಕಾಗಿ ಉಪಯೋಗಿಸುವ ಶಕ್ತಿ ಮತ್ತು ವ್ಯಕ್ತಿತ್ವಗಳು ಕುದುರಬೇಕು. ಇದಕ್ಕೆ ಗೌತಮರ ನ್ಯಾಯಶಾಸ್ತ್ರದ ಅಭ್ಯಾಸದಿಂದ ಸಿಕ್ಕುವ 'ವೈಜ್ಞಾನಿಕ ದೃಷ್ಟಿ' ಅಥವ ನ್ಯಾಯದೃಷ್ಟಿಯು ಬಹಳ ಮಟ್ಟಿಗೂ ಸಹಾಯಮಾಡುವುದು. ಈ ದೃಷ್ಟಿಯನ್ನು ವಿವೇಚನ ಶಕ್ತಿಯನ್ನು ಬೆಳಸಿಕೊಂಡು ನಮ್ಮ ಆಧುನಿಕ ಸಮಸ್ಯೆಗಳನ್ನು ಬಗೆಹರಿಸುವ ಶಕ್ತಿಯನ್ನು ಸಂಪಾದಿಸಿಕೊಳ್ಳುವುದೇ ನಾವು ಗೌತಮರಿಗೆ ಕೊಡಬಹುದಾದ ಕಾಣಿಕೆ. ಕಾಲ ಪರಿವರ್ತನದಿಂದ ನಮ್ಮ ಪ್ರಾಚೀನ ಶಾಸ್ತ್ರಗಳು ಕೆಲವು ವಿಷಯಗಳಲ್ಲಿ ಆಧುನಿಕ ಪರಿಸ್ಥಿತಿಗೆ ಅನ್ವಯಿಸದಿರಬಹುದಾದರೂ ಆ ಶಾಸ್ತ್ರಗಳ ಬೆಳವಣಿಗೆಯಲ್ಲಿ ಕಂಡುಬರುವ ಬುದ್ಧಿಶಕ್ತಿ, ಹೃದಯ ವೈಶಾಲ್ಯ, ಸಮಾನತೆಯ ದೃಷ್ಟಿ ಇವುಗಳನ್ನು ಅಧ್ಯಯನ ಪೂರ್ವಕವಾಗಿ ಗ್ರಹಿಸಿ, ಇಂದಿನ ಪರಿಸ್ಥಿತಿಗೆ ತಕ್ಕಂತೆ ಉಪಯೋಗಿಸಿಕೊಂಡಲ್ಲಿ ನಮ್ಮ ಪುರೋಭಿವೃದ್ಧಿಯ ಉದ್ಯಮಗಳೆಲ್ಲ ಯಶಸ್ವಿಯಾಗುವುದರಲ್ಲಿ ಯಾವ ಸಂದೇಹವೂ ಇಲ್ಲ.

ಪರಿಶಿಷ್ಟ

ಇಂತಹ ಪವಿತ್ರ ಕ್ಷೇತ್ರಗಳು ಮೈಸೂರಿನಲ್ಲಿ ಅಸಂಖ್ಯಾತವಾಗಿವೆ. ರಾಮಾಯಣ ಮಹಾಭಾರತ ಮಹಾಕಾವ್ಯಗಳಲ್ಲಿ ವರ್ಣಿತವಾಗಿರುವ ಅನೇಕ ಸ್ಥಳಗಳು ಮೈಸೂರಿನಲ್ಲಿವೆ. ಈ ನಿದರ್ಶನಗಳಿಂದ ಆ ಮಹಾಕಾವ್ಯಗಳ ನಿಜಸ್ವರೂಪ ನಮಗೆ ಮನದಟ್ಟಾಗುವುದು, ಅವುಗಳ ರಹಸ್ಯ, ಪ್ರಯೋಜನ ತಿಳಿದು ಬರುವುದು. ಅವುಗಳಲ್ಲಿ ಹೇಳಿರುವ ಉಪದೇಶ ವಾಕ್ಯಗಳಲ್ಲಿ ನಮಗೆ ಹೆಚ್ಚು ನಂಬಿಕೆ ಹುಟ್ಟುವುದು.

ನಮ್ಮ ನಾಡು, ಋಷಿಗಳ ಬೀಡು. ವೇದಾಂತದ ತಾಯ್ನಾಡು. ಸುರಾಸುರರಿದ್ದ ನಾಡು, ಅಗಸ್ತ್ಯ ಗೌತಮರು ಕಾವೇರಿ ತೀರದಲ್ಲಿಯೂ, ವಿಭಾಂಡಕ ಋಷ್ಯಶೃಂಗರು ತುಂಗಾ ತೀರದಲ್ಲಿಯೂ, ಕಣ್ವ, ಭಾರದ್ವಾಜ ವಿಶ್ವಾಮಿತ್ರಾದಿ ಮಹರ್ಷಿಗಳು ಇತರ ದಿವ್ಯಕ್ಷೇತ್ರಗಳಲ್ಲಿಯೂ ಪುಣ್ಯಾಶ್ರಮಗಳನ್ನು ನಿರ್ಮಿಸಿಕೊಂಡು ಸತ್ಕಥಾ ಕಾಲಕ್ಷೇಪದಲ್ಲಿದ್ದರು. ಸೊರಬವು ಜಮದಗ್ನಿಯ ಸ್ಥಳ. ಕಡೂರಿನ ಹತ್ತಿರದ ಭಾರ್ಗವಪುರದಲ್ಲಿ ಭೃಗು ಮಹರ್ಷಿಗಳಿದ್ದರಂತೆ ಚಿತ್ರದುರ್ಗದ ಹತ್ತಿರವಿರುವ ಪರಶುರಾಮಪುರದಲ್ಲಿ ಶ್ರೀ ಪರಶುರಾಮನು ಇದ್ದನೆಂದು ಹೇಳಲಾಗಿದೆ. ರಾಮನಾಥಪುರ, ಚುಂಚನಕಟ್ಟೆ, ಮೇಲುಕೋಟೆ ಮಾರ್ಗವಾಗಿ ಶ್ರೀರಾಮನು ಲಂಕೆಗೆ ಪ್ರಯಾಣಮಾಡಿರಬೇಕೆಂದು, ಹೇಳುವುದಕ್ಕೆ ಕೆಲವು ನಿದರ್ಶನಗಳು ಇಲ್ಲಿವೆ.

ಮಹಾಭಾರತದಲ್ಲಿ ವರ್ಣಿತವಾಗಿರುವ ಅನೇಕ ಸಂದರ್ಭಗಳು ಮೈಸೂರಿನಲ್ಲಿ ನಡೆದದ್ದು. ಅರ್ಜುನನು ಚಿತ್ರಾಂಗದೆಯನ್ನು ವಿವಾಹಮಾಡಿಕೊಂಡು ಬಭ್ರುವಾಹನನೆಂಬ ಪುತ್ರನನ್ನು ಪಡೆದನು. ಆ ಪುರವು ಇಂದಿನ ಚಾಮರಾಜನಗರದ ಹತ್ತಿರ ಇದ್ದಿರಬೇಕೆಂದು ನಿಶ್ಚಯಿಸಲಾಗಿದೆ. ರಾಜಸೂಯಯಾಗಕ್ಕೆ ಮುಂಚೆ, ಸಹದೇವನನ್ನು ವಿಜಯ ಯಾತ್ರೆಗಾಗಿ ದಕ್ಷಿಣಕ್ಕೆ ಕಳುಹಿಸಿದಾಗ ಅವನು ತುಂಗಭದ್ರೆಯವರೆಗೂ ಬಂದು ಅಲ್ಲಿ ಕಿಷ್ಕಿಂಧೆಯ ಸುಕೇಟ, ವೃಷಸೇನ ಮುಂತಾದ ರಾಜರನ್ನು ಸೋಲಿಸಿ, ಕಪ್ಪಕಾಣಿಕೆಯನ್ನು ಕೊಂಡೊಯ್ದನು. ಅಲ್ಲಿಂದ ಮುಂದೆ ಮಾಹಿಷ್ಮತೀ ನಗರದ ವರೆಗೂ ಬಂದಿದ್ದನು. ಆ

ಮಾಹಿಷ್ಮತಿಯೇ ಇಂದಿನ ಮೈಸೂರು ಎಂದು ಹೇಳಲಾಗಿದೆ. ಕವಲೇದುರ್ಗದ ಕಾಡು ಅಂದಿನ ಕಾವ್ಯಕ ವನವಾಗಿರಬೇಕೆಂದು ಗೊತ್ತುಮಾಡಲಾಗಿದೆ. ಸೊರಬದ ಪಶ್ಚಿಮವಿರುವ ಹಾನಗಲ್ ವಿರಾಟನಗರವಾಗಿತ್ತೆಂದೂ, ಅಲ್ಲಿ ಪಾಂಡವರು ಒಂದು ವರ್ಷ ಅಜ್ಞಾತವಾಸಗಲ್ಲಿದ್ದರು.

ಪರಿಪರಗಲ್ಲಿ ಗುಹಾಸುರನೂ, ಚಿತ್ರದುರ್ಗದಲ್ಲಿ ಹಿಡಿಂಬಾಸುರನೂ, ಪವಮಾನ್‌ಘಡದಲ್ಲಿ ಬಕಾಸುರನೂ, ಚಾಮುಂಡಿ ಬೆಟ್ಟದಲ್ಲಿ ಮಹಿಷಾಸುರನೂ, ಕುಡುಮಲೆಯಲ್ಲಿ ತ್ರಿಪುರಾಸುರನೂ, ಇದ್ದರೆಂದೂ, ಇಲ್ಲಿಂದ ದಕ್ಷಿಣಕ್ಕೆ ಹೋದಂತೆಲ್ಲಾ ಅವರ ಪ್ರಭಾವ ಬೆಳೆದು, ಪ್ರಬಲರಾಗಿದ್ದರೆಂದೂ ತಿಳಿದು ಬಂದಿದೆ. ಇವರಿಗೆಲ್ಲಾ ಅಧಿನಾಯಕನಾಗಿ ರಾವಣಾಸುರನು ಇನ್ನೂ ದಕ್ಷಿಣದಲ್ಲಿ ಬಲಿಷ್ಠನಾಗಿದ್ದನು.

ಹೀಗೆ ಇನ್ನೂ ಎಷ್ಟೋ ಪುರಾಣ ಪ್ರಸಿದ್ಧ ಸ್ಥಳಗಳು ಮೈಸೂರಿನಲ್ಲಿವೆ. ಕೆಲವನ್ನು ಮಾತ್ರ ಈ ಕಥಾ ಭಾಗಕ್ಕೆ ಹೊಂದಿ-ಕೊಂಡು ವರ್ಣಿಸಲಾಗಿದೆ. ಆಸ್ತಿಕರು ಇಂತಹ ಪುಣ್ಯಾಶ್ರಮಗಳ ವಿಷಯದಲ್ಲಿಯೂ, ಮತ್ತು ಪುರಾಣ ಪ್ರಸಿದ್ಧ ಸ್ಥಳದ ವಿಚಾರದಲ್ಲಿಯೂ ಪರಿಶೋಧನೆ ಮಾಡಿ, ಹೊಸ ವಿಷಯಗಳನ್ನು ಹೊರಗೆಡಹಿದರೆ, ಆಗ ಮೈಸೂರಿನ ಹಿರಿಮೆ ಇಮ್ಮಡಿಯಾಗುವುದು. ಇದರ ಶ್ರೀಮತ್ತೆ ಲೋಕವಿದಿತವಾಗುವುದು.

ಗ್ರಂಥಕರ್ತರ ಇತರ ಪುಸ್ತಕಗಳ ಅಭಿಪ್ರಾಯ

ರೈತನ ಪ್ರಪಂಚ

The book should prove a valuable asset to those who are interested in rural welfare —HINDU

An eminenty successful attempt has been made to place before the reader in a simple, direct, and forceful style the problems that beset the world of the peasants.

—RURAL INDIA.

ಶಾಸ್ತ್ರ ವಿಚಾರವನ್ನು ಇಷ್ಟು ರಮ್ಯವಾಗಿ ಬರೆಯಬಲ್ಲವರು ವಿರಳ. ಕನ್ನಡದಲ್ಲಿ ಈ ಮಟ್ಟದ ಗ್ರಂಥ ಬರುತ್ತಿರುವುದು ನಮ್ಮ ಪುಣ್ಯ.

—ವಿಶ್ವಕರ್ಣಾಟಕ.

ಶ್ರೀಕೃಷ್ಣ ಅಯ್ಯಂಗಾರ್ಯರು ಇಡೀ ಕನ್ನಡ ನಾಡಿಗೇ ಈ ಪುಸ್ತಕ ಬರೆದು ಬಹಳ ಉಪಕಾರ ಮಾಡಿದ್ದಾರೆ.

—ತಾಯಿನಾಡು.

ರೈತನ ಏಳಿಗೆ

A valuable contribution to Kannada book lore.

—RATIONALIST

ಪ್ರತಿಯೊಬ್ಬ, ಪ್ರಗತಿಕೋರುವ ರೈತನೂ ಓದಬೇಕಾದ ಪುಸ್ತಕವಿದು.

—ಪ್ರಜಾಮತ.

ಇಂತಹ ಯೋಗ್ಯತೆಯ ಗ್ರಂಥಗಳು ಅಪೂರ್ವ

—ಬಿ. ಎಂ. ಶ್ರೀ.

Presented in a clear manner supported by facts and figures. —HINDU.

ರೈತನ ಬಾಳು

ಸರಳವಾಗಿಯೂ. ಸ್ವಾರಸ್ಯವಾಗಿಯೂ, ಬೋಧಪ್ರದವಾಗಿಯೂ ಇದೆ.

—ಮಾನ್ಯ ಸಚಿವ ಶ್ರೀ ದಾಸಪ್ಪನವರು.

ಗ್ರಾಮಾಭ್ಯುದಯದ ಯೋಜನೆಯನ್ನು ಕಥೆಯ ರೂಪದಲ್ಲಿ ಜೋಡಿಸಿ ಹೃದಯಂಗಮವಾಗಿ ವರ್ಣಿಸಿರುವುದು ಲೇಖಕರ ಕೌಶಲ್ಯ ತೋರಿಸುತ್ತದೆ.

—ತಾಯಿನಾಡು.

ಈಸ್ಟರ್ನ್ ಪ್ರೆಸ್, ಬೆಂಗಳೂರು ಸಿಟಿ.